ಸಂಸ್ಕಾರ ತರಂಗಿಣೀ

5 – 6 – 7 ನೇ

ಪುಷ್ಪಗಳ ದ್ವಿತೀಯಮುದ್ರಣ

"ನಿತ್ಯಕರ್ಮ ದೀಪಿಕಾ"

ಶ್ರೀಮತಿ ಭಾರತೀಶರ್ಮಾ
ಅಕ್ಷರಜೋಡಣೆ

ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರಶರ್ಮಾ
ಅನುವಾದಕ ಲೇಖಕರು
ಮತ್ತು ಪ್ರಕಾಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರಶರ್ಮಾ ಅವಧಾನಿಗ
ಸಂಚಾಲಕರು

ವಿದ್ವಾನ್ ವೇ॥ಬ್ರ॥
ಶ್ರೀ ಕಿರಣ ಅವಧಾನಿಗಳು
ಪ್ರಧಾನ ಮಾರ್ಗದರ್ಶಕರು

ವೇದವೇದಾಂಗ
ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು
ಸಲಹೆಗಾರರು

ವಿದ್ವಾನ್ ವೇ॥ಬ್ರ॥
ಶ್ರೀ ಶಿವಕುಮಾರ ಅವಧಾನಿಗಳು
ಸಲಹೆಗಾರರು

ವಿದ್ವಾನ್ ವೇ॥ಬ್ರ॥
ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು
ಸಲಹೆಗಾರರು

ಸಂಸ್ಕಾರ ತರಂಗಿಣೀ

5 – 6 – 7 ನೇ

ಪುಷ್ಪಗಳ ದ್ವಿತೀಯಮುದ್ರಣ

"ನಿತ್ಯಕರ್ಮ ದೀಪಿಕಾ"

–: ವಿಷಯ ಸೂಚಿ :–

ಗ್ರಂಥನಾಮ – I

ವಿಷಯಸೂಚಿ – II

ಗುರುವಂದನೆ – IV

ಕೃತಜ್ಞತೆಗಳು – V

ಸಂಪಾದಕೀಯ – VI

ನಮ್ಮ ಪ್ರಕಟಣೆಗಳು – VII

ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು – IX

ಪ್ರಾಸ್ತಾವಿಕ ನುಡಿ – ಡಾ॥ವೇ॥ಬ್ರ॥ ಶ್ರೀಸುಬ್ರಾಯ ವಿ. ಭಟ್ಟರು – XII

ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರಶರ್ಮರು – XVI

ಭಾಗ – 1

1. ಸ್ನಾನ ವಿಧಾನ 2

2. ಸಂಧ್ಯಾವಂದನೆ 6

3. ನಿತ್ಯ ದೇವತಾರ್ಚನೆ 25

ಭಾಗ – 2

1. ಯಜ್ಞೋಪವೀತ ನಷ್ಟಪ್ರಾಯಶ್ಚಿತ್ತ ಪ್ರಯೋಗ 52

2. ಅಗ್ನಿ ಪುನಸ್ಸಂಧಾನ ಪ್ರಯೋಗ 55

3. ಔಪಾಸನ ಪ್ರಯೋಗ 63

4.	ವಿಧುರಾಗ್ನಿಸಂಧಾನ ಪ್ರಯೋಗ	68
5.	ಬ್ರಹ್ಮಯಜ್ಞ ಪ್ರಯೋಗ	71
6.	ದ್ವಾದಶ ಪಿತೃತರ್ಪಣ ಪ್ರಯೋಗ	77
7.	ಶಕಲಹೋಮ ಪ್ರಯೋಗ	81
8.	ವೈಶ್ವದೇವ ಪ್ರಯೋಗ	85
9.	ಭೋಜನಕ್ರಮ (ಪರಿಷೇಚನ) ಪ್ರಯೋಗ	104

ಭಾಗ – 3

1.	ಸಂಕಲ್ಪ	114
2.	ಗಣಪತಿ ಪೂಜೆ	119
3.	ಪುಣ್ಯಾಹ ಪ್ರಯೋಗ	121
4.	ಶೋಭನನಾಂದೀ ಪ್ರಯೋಗ	133
5.	ಅಂಕುರಾರೋಪಣ ಪ್ರಯೋಗ	143
6.	ರಕ್ಷಾಬಂಧನ ಪ್ರಯೋಗ	148
7.	ಅಗ್ನಿಮುಖ (ಹೋಮ) ಪ್ರಯೋಗ	153
8.	ಆಶೀರ್ವಾದ ವಾಕ್ಯಗಳು	202

****

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬಃ ಸ ಮೇ ಮುನಿ: ॥
ಸಂತಃ ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ ॥
ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ, ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ, ತೂ ಹೆ ಮಾಲಿಕ್, ಜೋಲೀ ಮೇರಿಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ, ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನೂ ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್
   ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ.
2. ಶ್ರೀಮತಿ ಶಾಂತಲಕ್ಷ್ಮೀಶರ್ಮಾ, ಅಗ್ರಹಾರ
3. ಶ್ರೀ ರಾಜೇಶ್–ಸ್ನೇಹಲತಾ, ಸಿಂಗಪುರ್
4. ಡಾ॥ ಅನಿಲ್‌ಕುಮಾರ್–ಸುಜಾತಾ, ಅಮೇರಿಕ
5. ಶ್ರೀ ಶೃಂಗೇಶ್ವರ–ವಸುಂಧರಾ, ಅಮೇರಿಕ
6. ಶ್ರೀ ಕೆ.ಬಿ. ಪ್ರಸನ್ನಕುಮಾರ್(ಎಂ.ಎಲ್.ಎ)–ಗೀತಾಂಜಲಿ, ಶಿವಮೊಗ್ಗ
7. ಶ್ರೀ ಶುಚೀಂದ್ರ–ರೇಣುಕಾ, ಬೆಂಗಳೂರು
8. ಶ್ರೀ ಸತ್ಯಪ್ರಸಾದ್–ವಾಣಿ, ಮೈಸೂರು
9. ಶ್ರೀ ಕೇಶವಪ್ರಕಾಶ್–ಶೈಲಾ, ಬೆಂಗಳೂರು
10. ಶ್ರೀ ಸಿ. ನಾಗರಾಜ್, ಮೈಸೂರು
11. ಶ್ರೀ ಮಹೇಶ್‌ಬಾಬು–ಬೃಂದಾ, ಬೆಂಗಳೂರು
12. ಶ್ರೀ ಸಚಿನ್–ಶ್ರೀದೇವಿ, ಬೆಂಗಳೂರು
13. ಶ್ರೀ ವಲ್ಲೀಶ, ಬೆಂಗಳೂರು
14. ಶ್ರೀ ವಿನಯ್–ಸಿಂಧು, ಶಿವಮೊಗ್ಗ
15. ಶ್ರೀ ಸುಬ್ರಹ್ಮಣ್ಯಪ್ರಸಾದ್–ಆಶಾ, ಶಿವಮೊಗ್ಗ
16. ಡಾ॥ ವೆಂಕಟಕೃಷ್ಣ (ಕೇಶವಮೂರ್ತಿಶಾರದಮ್ಮ ಸ್ಮರಣಾರ್ಥ), ಬೆಂಗಳೂರು.
17. ಶ್ರೀ ಕಿರಣ್‌ಕೌಶಿಕ್–ಜ್ಯೋತಿ, ಅಮೇರಿಕ
18. ಶ್ರೀ ಚಿದಂಬರ ದೀಕ್ಷಿತ್–ಭಾಗ್ಯಲಕ್ಷ್ಮಿ, ಬಸವಾಪಟ್ಟಣ
19. ಶ್ರೀ ಗಂಗಾಧರ್–ಸಂಧ್ಯಾ, ಬೆಂಗಳೂರು
20. ಶ್ರೀ ಶಿವಕುಮಾರ್–ಮಾಲಾ, ಸಿಂಗಪುರ್
21. ಶ್ರೀ ರವೀಂದ್ರನಾಥ್–ಸ್ವಯಂಪ್ರಭಾ, ಶಿವಮೊಗ್ಗ
22. ಶ್ರೀ ರಘುರಾಂ–ಅನುಪಮ, ಶಿವಮೊಗ್ಗ
23. ಶ್ರೀ ರಮೇಶ್, ಶಿವಮೊಗ್ಗ

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರಶರ್ಮಾ, ದೂ : 9686497982

ಸಂಚಾಲಕರು :

ವೇ॥ಬ್ರಾ॥ ಶ್ರೀ ವಿದ್ವಾನ್ ಚಂದ್ರಶೇಖರಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರಾ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಮಾರ್ಗದರ್ಶಕರು :

ವೇದವೇದಾಂಗ ವಿದ್ವಾನ್ ವೇ॥ ಬ್ರಾ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.
ವೇ॥ ಬ್ರಾ॥ ಶ್ರೀ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ
ವೇ॥ ಬ್ರಾ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.
ವೇ॥ ಬ್ರಾ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	:	ಶ್ರೀಮತಿ ಭಾರತೀಶರ್ಮಾ, ವೇ॥ ಬ್ರಾ॥ ಶ್ರೀ ಶಕ್ತಿಧರಶರ್ಮಾ
ವರ್ಷ	:	ಅಕ್ಟೋಬರ್ 2020 (ಶಾರ್ವರಿಸಂವತ್ಸರ, ಆಶ್ವಯುಜಮಾಸ)
ಪ್ರತಿಗಳು	:	500
ಪುಟಗಳು	:	XX + 204 = 224
ಪುಸ್ತಕದ ಅಳತೆ	:	ಡೆಮ್ಮಿ 1/8
ಪೇಪರ್	:	80 ಜಿ.ಎಸ್.ಎಂ. ಎನ್.ಎಸ್. ಮ್ಯಾಪ್ಲಿತೊ
ಹಕ್ಕುಗಳು	:	ಸಂಪೂರ್ಣ ಲೇಖಕರದ್ದು
ಮೌಲ್ಯ	:	**'ಅಮೂಲ್ಯ'**
ಪ್ರೋತ್ಸಾಹಯುತ ಕಾಣಿಕೆ	:	ರೂ. 200/-
ಮುದ್ರಕರು	:	ವಿದ್ಯಾಭಾರತೀಪ್ರೆಸ್, ಶೃಂಗೇರಿಮಠ, ಬೆಂಗಳೂರು.

ಶ್ರೀ ಚೈತನ್ಯಗುರುನಾಥ ಪ್ರಕಾಶನದವರ ಪ್ರಕಟಣೆಗಳು

1. **ಸಂಸ್ಕಾರತರಂಗಿಣೀ ಪುಷ್ಪ – 1 ಮತ್ತು 2 ದ್ವಿತೀಯಮುದ್ರಣ** (ಪುಂಸವನ ಮತ್ತು ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

2. **ಸಂಸ್ಕಾರತರಂಗಿಣೀ ಪುಷ್ಪ – 3 ದ್ವಿತೀಯಮುದ್ರಣ**

   (ಚೂಡಾಕರ್ಮ – ಅಕ್ಷರಾರಂಭ ಮತ್ತು ಉಪನಯನ)

3. **ಸಂಸ್ಕಾರತರಂಗಿಣೀ ಪುಷ್ಪ – 4 – ದ್ವಿತೀಯಮುದ್ರಣ**

   (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)

4. **ಸಂಸ್ಕಾರತರಂಗಿಣೀ ಪುಷ್ಪ – 5, 6 ಮತ್ತು 7 'ನಿತ್ಯಕರ್ಮ ದೀಪಿಕಾ' ದ್ವಿತೀಯಮುದ್ರಣ**

   (ಸಂಧ್ಯಾವಂದನೆ, ದೇವತಾರ್ಚನೆ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ).

5. **ವೇದನಾದ ಸಂಗಮ DVD ಭಾಗ – 1**

   (ಪ್ರಪ್ರಥಮಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)

6. **ಸಂಸ್ಕಾರತರಂಗಿಣೀ ಪುಷ್ಪ – 8**

   (ಉಪಾಕರ್ಮ, ಪ್ರಾಯಶ್ಚಿತ್ತಪ್ರಕರಣ, ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷವಿಚಾರಗಳು)

7. **ವೇದನಾದ ಸಂಗಮ DVD – 2**

   (ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

8. **ಸಂಸ್ಕಾರತರಂಗಿಣೀ ಪುಷ್ಪ – 9** (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾ ಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)

9. **ಸಂಸ್ಕಾರತರಂಗಿಣೀ ಪುಷ್ಪ – 10 ದ್ವಿತೀಯಮುದ್ರಣ**

(ಧರ್ಮಸಂದೇಶ – ಸಂಸ್ಕೃತಿ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯವಿಚಾರಗಳು)

10. **ಸಂಸ್ಕಾರತರಂಗಿಣೀ ಪುಷ್ಪ – 11** (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ ಭಾಗ–1)

11. **ಸಂಸ್ಕಾರತರಂಗಿಣೀ ಪುಷ್ಪ – 12 ಪ್ರೇತಕಾಂಡ**

(ಶ್ರೀವೈದ್ಯನಾಥೀಯ ಸ್ಮೃತಿಮುಕ್ತಾಫಲ ಮತ್ತು ಶ್ರೀಎಲ್ಲಾಜೀಯ ಅನುಧರ್ಮ ಶಾಸ್ತ್ರ)

12. **ಸಂಸ್ಕಾರತರಂಗಿಣೀ ಪುಷ್ಪ – 13 ಪಿತೃಮೇಧಕಾಂಡ ಭಾಗ–1**

(ಯಜುರ್ವೇದ ಆಪಸ್ತಂಬೀಯ ಅಪರಸೂತ್ರ, ಗೋಪಾಲ + ಕಪರ್ದಿಭಾಷ್ಯ, ಕಾರಿಕೆ, ಪ್ರಯೋಗ ಮತ್ತು ಮಂತ್ರಗಳಿಗೆ ಸಾಯಣಭಾಷ್ಯ)

13. **ಸಂಸ್ಕಾರತರಂಗಿಣೀ ಪುಷ್ಪ – 14**

(ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ ಭಾಗ–2)

14. **ಸಂಸ್ಕಾರತರಂಗಿಣೀ ಪುಷ್ಪ – 15 – ಪಿತೃಮೇಧಕಾಂಡ ಭಾಗ–2**

(ಯಜುರ್ವೇದ ಆಪಸ್ತಂಬೀಯ ಅಪರಸೂತ್ರ, ಗೋಪಾಲ + ಕಪರ್ದಿಭಾಷ್ಯ, ಕಾರಿಕೆ, ಪ್ರಯೋಗ ಮತ್ತು ಮಂತ್ರಗಳಿಗೆ ಸಾಯಣಭಾಷ್ಯ)

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವವಿಷಯ ಬೇಕು? ಋಷಿವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರವಾಕ್ಯ ಇದೆ. ಪ್ರಯೋಗಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ.

ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳಅನುವಾದ ..., ಪ್ರಯೋಗ – ಅದರ ತಿಳಿಕನ್ನಡ ಅರ್ಥ..., ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ.

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿ ಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ ಹಾಗೂ ಶರ್ಮರ ಮಡದಿಯಾದ ಚಿ. ಸೌ. ಭಾರತಿಯವರಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ನಿಖರವಾಗಿ ತಿಳಿಸುವ ' ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾ ಸಹಸ್ರನಾಮ', 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿ ಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀ ಸೂಕ್ತ, ನಾರಾಯಣ ಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠ ಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ

ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಮತ್ತೂ 2019ರಲ್ಲಿ ಮೈಸೂರಿನ ಅರ್ಜುನ ಗುರೂಜೀ ಅವರಿಂದ 'ಗುರುಸೇವಾ ರತ್ನ' ಸನ್ಮಾನಕ್ಕೂ ಭಾಜನರಾಗಿರುತ್ತಾರೆ.

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 38 ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರ ಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ. ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶರ್ಮ್–

ವೇ॥ ಬ್ರಾ॥ ಶ್ರೀ ಮಾರ್ಕಂಡೇಯಾವಧಾನಿ, ಮತ್ತೂರು, ಶಿವಮೊಗ್ಗ

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋऽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ

ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು (ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ (ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆಬೇರೆ ವೇದಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತ ಸೂತ್ರಗಳು, ಸಾಕ್ಷಾತ್‌ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡ ಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ.

ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮ ಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(23 ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು (25,26,27) ಗೃಹ್ಯ ಸೂತ್ರಗಳು. ಈ ಮೂರರಲ್ಲಿ ಕೊನೆಯದು (27ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. 28, 29 ನೇ ಪ್ರಶ್ನೆಗಳು ಧರ್ಮಸೂತ್ರಗಳು. 30ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ 30 ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ, ಸ್ಮಾರ್ತಕರ್ಮಗಳೂ ಮತ್ತು ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನೂ, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ.

ಇವುಗಳ ಆಧಾರದಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವ್ಯಾಕರಣ, ವೇದ ವಿದ್ವಾಂಸರಾದ ಶ್ರೀಮಾನ್ ಕಿರಣಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತವಿದ್ಯಾಪೀಠಂ, ಶೃಂಗೇರಿ.

ಸಂಪಾದಕರು ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಧಾರೆಗಳಿಗೂ ಆಧಾರ, ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ, ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ !.

ಆದರೆ, ಅವರೆಂದಿಗೂ (ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲು, ಆಧಾರವಾಗಲು ಸಾಧ್ಯವೇ ಇಲ್ಲ !!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು (ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು **'ಇದೇ ನಮ್ಮ ಸಂಪ್ರದಾಯ – ಆಚಾರ / ಪ್ರಾಂತೀಯ ಭಿನ್ನತೆ'** ಎಂಬ ಪಲಾಯನವಾದದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ

ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೇ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಕಲ್ಪಿಸಿಕೊಂಡು ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ **ಸಂಪ್ರದಾಯ** ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು – ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥
ಮತ್ತೂ
ಶ್ರುತಿಃ ಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ (ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು, ಇದು ಸನಾತನ ಪರಂಪರೆಯ ಮೂಲ ವ್ಯವಸ್ಥೆಯಾಗಿದೆ ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು

ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬಳಸಿಕೊಳ್ಳ ಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣುಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತ್ರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ (ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ,

ಸಂಸ್ಕಾರತರಂಗಿಣೀ ಪುಷ್ಪ – 5, 6, 7 ಗ್ರಂಥಗಳನ್ನು ಈಗ್ಗೇ 6 ವರ್ಷಗಳ ಹಿಂದೆಯೇ ಪ್ರಕಟಣೆ ಮಾಡಲಾಗಿತ್ತು. ಆದರೆ ಮೂರೂ ಗ್ರಂಥಗಳ ಪ್ರತಿಗಳೂ ಬಹುಬೇಗನೆ ಖಾಲಿಯಾಗಿ ಇವುಗಳ ಪುನರ್ಮುದ್ರಣಕ್ಕೆ ಬಹುಬೇಡಿಕೆ ಹಾಗೂ ಒತ್ತಾಯಗಳು ಇದ್ದ ಕಾರಣ, ನಾವು ಆ ಮೂರು ಪ್ರತ್ಯೇಕ ಗ್ರಂಥ(ಪುಷ್ಪ)ಗಳನ್ನು ಒಂದೇಗ್ರಂಥವಾಗಿ ಪರಿಷ್ಕರಿಸಿ, **ಸಂಸ್ಕಾರತರಂಗಿಣೀ ಪುಷ್ಪ 5, 6, 7 – 'ನಿತ್ಯಕರ್ಮ ದೀಪಿಕಾ'** ಎಂಬ ಹೆಸರಿನಿಂದ **'ದ್ವಿತೀಯಮುದ್ರಣವಾಗಿ'** ಈಗ ಪ್ರಕಟಿಸುತ್ತಿದ್ದೇವೆ.

ಈ ಗ್ರಂಥವು, ಜ್ಞಾನಸಂಗ್ರಹದ ವಿಷಯದಲ್ಲಿ ಹಾಗೂ ನಿತ್ಯಕರ್ಮಗಳ ಅನುಷ್ಠಾನದಲ್ಲಿ ಆಸಕ್ತಿ ಇರುವವರಿಗೆ ಬಹಳವೇ ಉಪಯುಕ್ತವಾಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಗ್ರಂಥವು ಈ ರೂಪಕ್ಕೆ ಬರಲು ಶಾಸ್ತ್ರೀಯ ಸಲಹೆಗಳನ್ನು ನೀಡಿದಂತಹ ಎಲ್ಲಾ ವಿದ್ವಾಂಸರುಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ **ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ** ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ವೇದಬ್ರಹ್ಮಶ್ರೀ ಎ.ಸಿ ಶಕ್ತಿಧರಶರ್ಮರು
ಸಂಪಾದಕರು ಹಾಗೂ ಪ್ರಕಾಶಕರು
ಅಕ್ಟೋಬರ್ – 2020

ಭಾಗ – 1

1. ಸ್ನಾನ ವಿಧಾನ
2. ಸಂಧ್ಯಾವಂದನೆ
3. ನಿತ್ಯಪೂಜಾ ಕ್ರಮ

1. ಸ್ನಾನ ವಿಧಾನ

ಅಘಮರ್ಷಣ ರೀತ್ಯಾ ಸ್ನಾನವಿಧಿ: –

(ಆಧಾರ – ಯಜುರ್ವೇದ ಮಹಾನಾರಾಯಣ ಉಪನಿಷತ್, ಸಾಯಣಭಾಷ್ಯ)

ಅಪವಿತ್ರ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯ: ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ: ಶುಚಿ: ॥
ಮೇಲಿನ ವಾಕ್ಯವನ್ನು ಹೇಳುತ್ತಾ, ನೀರನ್ನು ತನ್ನ ದೇಹಕ್ಕೆ ಪ್ರೋಕ್ಷಿಸಿಕೊಳ್ಳಬೇಕು ॥

ಆಚಮ್ಯ, ಪ್ರಾಣಾನಾಯಮ್ಯ। ಶುಭೇ ಶೋಭನೇ ಮುಹೂರ್ತೇ..... ಮಮ..... ಪ್ರೀತ್ಯರ್ಥಂ, ಅಂತರ್ಬಹಿಶ್ಚ ಶರೀರಶುದ್ಧ್ಯರ್ಥಂ, ಸಮಸ್ತ ಪಾಪಕ್ಷಯಾರ್ಥಂ, ವೇದೋಕ್ತರೀತ್ಯಾ ತೀರ್ಥಸ್ನಾನಂ ಅಹಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥

ಹಿರಣ್ಯಶೃಂಗಂ....., ಎಂಬ 2 ಮಂತ್ರಗಳಿಂದ ಜಲ ದೇವತೆಯಾದ ವರುಣನನ್ನು ಪ್ರಾರ್ಥಿಸುವುದು ॥

ಓಂ ಹಿರಣ್ಯಶೃಂಗಂ ವರುಣಂ ಪ್ರಪದ್ಯೇ ತೀರ್ಥಂ ಮೇ ದೇಹಿ ಯಾಚಿತ: । ಯನ್ಮಯಾ ಭುಕ್ತಮಸಾಧೂನಾಂ ಪಾಪೇಭ್ಯಶ್ಚ ಪ್ರತಿಗ್ರಹ: ॥ ಯನ್ಮೇ ಮನಸಾ ವಾಚಾ ಕರ್ಮಣಾ ವಾ ದುಷ್ಕೃತಂ ಕೃತಮ್ । ತನ್ನ ಇಂದ್ರೋ ವರುಣೋ ಬೃಹಸ್ಪತಿಸ್ಸವಿತಾ ಚ ಪುನಂತು ಪುನ: ಪುನ: ॥

ನಮೋಗ್ನಯೇ....., ಎಂಬ ಮಂತ್ರದಿಂದ ನೀರಿನಲ್ಲಿರುವ ದೇವತೆಗಳಿಗೆ ನಮಸ್ಕರಿಸುವುದು ॥

ಓಂ ನವೋೇsಗ್ನಯೇೇsಪ್ಸುಮತೇೇ ನಮ ಇಂದ್ರಾಯ ನವೋೇ ವರುಣಾಯ ನವೋೇ ವಾರುಣ್ಯೈ ನವೋೇsದ್ಭ್ಯ: ॥

ಯದಪಾಂ ಕ್ರೂರಂ....., ಎಂಬ ಮಂತ್ರದಿಂದ, ನಾವು ಸ್ನಾನ ಮಾಡುವ ಜಾಗದಲ್ಲಿರಬಹುದಾದ ಕಲುಷಿತ ನೀರು ಹಾಗೂ ವಸ್ತುಗಳನ್ನು ಪಕ್ಕಕ್ಕೆ ತಳ್ಳುವುದು ॥

ಓಂ ಯದಪಾಂ ಕ್ರೂರಂ ಯದಮೇಧ್ಯಂ ಯದಶಾಂತಂ ತದಪಗಚ್ಛತಾತ್ ॥

ಅತ್ಯಾಶನಾತ್.., ಎಂಬ 3 ಮಂತ್ರಗಳಿಂದ ನಿಮಜ್ಜನ (ಮುಳುಗು) ಸ್ನಾನ ಮಾಡುವುದು ॥

ಓಂ ಅತ್ಯಾಶನಾದತೀಪಾನಾದ್ಯಚ್ಚ ಉಗ್ರಾತ್ಪ್ರತಿಗ್ರಹಾತ್ । ತನ್ನೋ ವರುಣೋ ರಾಜಾ ಪಾಣಿನಾ ಹ್ಯವಮರ್ಶತು । ಸೋೇsಹಮಪಾಪೋ ವಿರಜೋ ನಿರ್ಮುಕ್ತೋ ಮುಕ್ತ ಕಿಲ್ಬಿಷ: । ನಾಕಸ್ಯ ಪೃಷ್ಠಮಾರುಹ್ಯ ಗಚ್ಛೇದ್ಬ್ರಹ್ಮಸಲೋಕತಾಮ್ । ಯಶ್ಚಾಪ್ಸು ವರುಣಸ್ಯ ಪುನಾತ್ವಘಮರ್ಷಣ: ॥

ಇಮಂಮೇ ಗಂಗೇ....., ಎಂಬ ಮಂತ್ರದಿಂದ ಗಂಗಾದಿ ಪುಣ್ಯತೀರ್ಥಗಳನ್ನು ಈ ನೀರಿನಲ್ಲಿ ಆವಾಹನೆ ಮಾಡುವುದು ॥

ಓಂ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿಸ್ತೋಮಗ್ಂ ಸಚತಾಪರುಷ್ಣಿಯಾ । ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

ಋತಂಚ ಸತ್ಯಂ..... ಎಂಬ ಮಂತ್ರದಿಂದ ನೀರಿನಲ್ಲಿ ಮುಳುಗಿ, ಉಸಿರುಗಟ್ಟಿ, ದೇಹವನ್ನೆಲ್ಲಾ ತಿಕ್ಕಿಕೊಳ್ಳಬೇಕು ॥

ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋೇsಧ್ಯಜಾಯತ । ತತೋೇ ರಾತ್ರಿರಜಾಯತ

ತತ: ಸಮುದ್ರೋ ಅರ್ಣವ: । ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ । ಸೂರ್ಯಾ ಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸುವ: ॥

ಯತ್ಪೃಥಿವ್ಯಾಂ..... ಎಂಬ ಮಂತ್ರದಿಂದ 3 ಸಲ ಮುಳುಗಿ ಏಳಬೇಕು ॥

ಓಂ ಯತ್ಪೃಥಿವ್ಯಾಗ್ಂ ರಜಸ್ವಮಾಂತರಿಕ್ಷೇ ವಿರೋದಸೀ । ಇಮಾಗ್ಸ್ತದಾಪೋ ವರುಣ: ಪುನಾತ್ವಘಮರ್ಷಣ: । ಪುನಂತು ವಸವ: ಪುನಾತು ವರುಣ: ಪುನಾತ್ವಘಮರ್ಷಣ: । ಏಷ ಭೂತಸ್ಯ ಮಧ್ಯೇ ಭುವನಸ್ಯ ಗೋಪ್ತಾ । ಏಷ ಪುಣ್ಯಕೃತಾಂ ಲೋಕಾನೇಷ ಮೃತ್ಯೋರ್ಹಿರಣ್ಮಯಮ್ । ದ್ಯಾವಾಪೃಥಿವ್ಯೋರ್ ಹಿರಣ್ಮಯಗ್ಂ ಸಗ್ಂಶ್ರಿತಗ್ಂ ಸುವ: । ಸನಸ್ಸುವಸ್ಸಗ್ಂ ಶಿಶಾಧಿ ॥

ಆರ್ದ್ರಂ ಜ್ವಲತಿ....., ಎಂಬ ಮಂತ್ರದಿಂದ 2 ಸಲ ಆಚಮನ ಮಾಡಬೇಕು ॥

ಓಂ ಆರ್ದ್ರಂ ಜ್ವಲತಿ ಜ್ಯೋತಿರಹಮಸ್ಮಿ । ಜ್ಯೋತಿರ್ಜ್ವಲತಿ ಬ್ರಹ್ಮಾಹಮಸ್ಮಿ । ಯೋsಹಮಸ್ಮಿ ಬ್ರಹ್ಮಾಹಮಸ್ಮಿ । ಅಹಮಸ್ಮಿ ಬ್ರಹ್ಮಾಹಮಸ್ಮಿ । ಅಹಮೇವಾಹಂ ಮಾಂ ಜುಹೋಮಿ ಸ್ವಾಹಾ ॥

ಅಕಾರ್ಯ....., ಎಂಬ ಮಂತ್ರದಿಂದ ತಾನು ಮಾಡಿರಬಹುದಾದ ರಹಸ್ಯ ಪಾಪಗಳನ್ನು ಜ್ಞಾಪಿಸಿಕೊಂಡು ಮತ್ತೆ ಸ್ನಾನ ಮಾಡಬೇಕು ॥

ಓಂ ಅಕಾರ್ಯಕಾರ್ಯವಕೀರ್ಣೇ ಸ್ತೇನೋ ಭ್ರೂಣಹಾ ಗುರುತಲ್ಪಗ: ।

ವರುಣೋಽಪಾಮಘಮರ್ಷಣಸ್ತಸ್ಮಾತ್ಪಾಪಾತ್ಪ್ರಮುಚ್ಯತೇ ॥

ರಜೋಭೂಮಿ:....., ಎಂಬ ಮಂತ್ರದಿಂದ ಚೆನ್ನಾಗಿ ಸ್ನಾನಮಾಡಿ, ಪಾಪಗಳನ್ನು ಕಳೆದುಕೊಳ್ಳಬೇಕು ॥

ಓಂ ರಜೋ ಭೂಮಿಸ್ತ್ವಮಾಗ್ಂ ರೋದಯಸ್ವ ಪ್ರವದಂತಿ ಧೀರಾ: ॥

ಆಕ್ರಾನ್ಸಮುದ್ರ:....., ಎಂಬ ಮಂತ್ರವನ್ನು ಸ್ನಾನವಾದ ನಂತರ ಜಪಿಸಬೇಕು ॥

ಓಂ ಆಕ್ರಾನ್ಸಮುದ್ರ: ಪ್ರಥಮೇ ವಿಧರ್ಮನ್ಜನಯನ್ಪ್ರಜಾ ಭುವನಸ್ಯ ರಾಜಾ । ವೃಷಾ ಪವಿತ್ರೇ ಅಧಿ ಸಾನೋ ಅವ್ಯೇ ಬೃಹಥ್ಸೋವೋ ವಾವೃಧೇ ಸುವಾನ ಇಂದು: ॥

****

ಈ ಮಂತ್ರಗಳ ಭಾಷ್ಯಾರ್ಥವನ್ನು ಸಂಸ್ಕಾರತರಂಗಿಣೀ ಪುಷ್ಪ – 9 ರಲ್ಲಿ ಕೊಡಲಾಗಿದೆ.

2. ಸಂಧ್ಯಾವಂದನೆ

ಸಂಧ್ಯಾವಂದನೆಯ ಅವಶ್ಯಕತೆ –

ಅಹರಹಃ ಸಂಧ್ಯಾಮುಪಾಸೀತ ॥ (ಶ್ರುತಿಃ)

ಪ್ರತಿನಿತ್ಯವೂ ಸಂಧ್ಯೆಯನ್ನು ಉಪಾಸನೆ ಮಾಡಬೇಕು ॥

ಸಂಧ್ಯಾಯೇನ ನ ವಿಜ್ಞಾತಾ ಸಂಧ್ಯಾಯೇನಾನುಪಾಸಿತಾ । ಜೀವಮಾನೋ ಭವೇಚ್ಛೂದ್ರೋ ಮೃತಃ ಶ್ವಾನೋsಭಿಜಾಯತೇ ॥ (ಗೋಭಿಲಸ್ಮೃತಿ)

ಯಾವನು ಸಂಧ್ಯೆಯನ್ನು ತಿಳಿಯನೋ, ಉಪಾಸನೆಯನ್ನು ಮಾಡುವುದಿಲ್ಲವೋ ಅವನು ಬದುಕಿರುವಾಗಲೇ ಶೂದ್ರನಾಗಿ, ಸತ್ತಮೇಲೆ ನಾಯಿಯಾಗಿ ಹುಟ್ಟುವನು ॥

ಯಾ ಸಂಧ್ಯಾ ಸಾ ಜಗತ್ಪೂತಿರ್ಮಾಯಾತೀತಾ ಹಿ ನಿಷ್ಕಲಾ । ಈಶ್ವರೀ ಕೇವಲಾ ಶಕ್ತಿಸ್ತತ್ತ್ರಯ ಸಮುದ್ಭವಾ ॥ ಧ್ಯಾತ್ವಾರ್ಕ ಮಂಡಲಗತಾಂ ಸಾವಿತ್ರೀಂ ವೈ ಜಪೇತ್ ಬುಧಃ ॥ (ವಸಿಷ್ಠಸ್ಮೃತಿ)

ಇಲ್ಲಿ, 'ಸಂಧ್ಯಾ' ಎಂದರೆ ಈ ಕರ್ಮದಲ್ಲಿ ನಾವು ಉಪಾಸನೆ ಮಾಡುವ ದೇವತೆಯ ಹೆಸರೆಂದು ತೋರುತ್ತದೆ । 'ಸಂಧ್ಯೆ' ಎಂದರೆ ಜಗತ್ತಿಗೆಲ್ಲ ಕಾರಣವಾಗಿರುವ, ಮಾಯೆಗೆ ಅತೀತವಾಗಿರುವ ನಿಷ್ಕಲವಾದ ಈಶ್ವರಶಕ್ತಿ । ಈ ದೇವತೆಯನ್ನು ಸೂರ್ಯಮಂಡಲದಲ್ಲಿರುವಂತೆ ಧ್ಯಾನಮಾಡುತ್ತಾ ಗಾಯತ್ರೀಮಂತ್ರವನ್ನು ಜಪಿಸಬೇಕು ॥

ಸಂಧ್ಯಾ ಹೀನೋಶುಚಿರ್ನಿತ್ಯಮನರ್ಹಃ ಸರ್ವಕರ್ಮಸು । ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ (ದಕ್ಷಸ್ಮೃತಿ)

ಯಾವನು ಸಂಧ್ಯೆಯನ್ನು ಆಚರಿಸುವುದಿಲ್ಲವೋ ಅವನು ಅಶುಚಿಯು, ಆತನು ಯಾವ ಕರ್ಮಕ್ಕೂ ಯೋಗ್ಯನಾಗುವುದಿಲ್ಲ । ಬೇರೆಯಾವ ಕರ್ಮವನ್ನು ಮಾಡಿದರೂ ಅದರ ಫಲವೂ ಅವನಿಗೆ ದಕ್ಕುವುದಿಲ್ಲ ॥

ಪ್ರೋಕ್ಷಣೆ –

(ಪೂರ್ವ ಅಥವಾ ಉತ್ತರಕ್ಕೆ ಆಸನದ ಮೇಲೆ ಕುಳಿತು, ಈ ಶ್ಲೋಕವನ್ನು ಹೇಳಿಕೊಳ್ಳುತ್ತಾ, ಕರ್ತೃವಿನ ಆಚಮನಪಾತ್ರೆಯಿಂದ ಎಡಕೈಯಲ್ಲಿ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು ಬಲಕೈಗೆ ಹಾಕಿಕೊಂಡು ಶರೀರಕ್ಕೆ ಪ್ರೋಕ್ಷಿಸಿಕೊಳ್ಳಬೇಕು)

ಅಪವಿತ್ರ: ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ । ಯ: ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ: ಶುಚಿ: ॥

(ಅರ್ಥ – ಶುದ್ಧನಾಗಿರಲಿ, ಅಶುದ್ಧನಾಗಿರಲಿ, ಬಾಲ್ಯ, ಕೌಮಾರ, ಯೌವನ, ವಾರ್ಧಿಕ್ಯ ಅವಸ್ಥೆಗಳನ್ನು ಹೊಂದಿದ್ದರೂ ಜಾಗ್ರದಾದಿ ಅವಸ್ಥೆಯಲ್ಲಿದ್ದರೂ, ಪುಂಡರೀಕಾಕ್ಷನಾದ ಭಗವಂತನನ್ನು ಸ್ಮರಿಸಿದರೆ ಶರೀರದ ಒಳಗೂ ಹೊರಗೂ ಮನುಷ್ಯನು ಶುದ್ಧನಾಗುವನು)

ಆಸನಶುದ್ಧಿ –

(ಸ್ವಲ್ಪ ನೀರನ್ನು ಆಸನದ ಕೆಳಗೆ ಹಾಕಿ, ಆ ಜಾಗವನ್ನು ಹಿಡಿದುಕೊಂಡು, ಕೆಳಗಿನ ಶ್ಲೋಕವನ್ನು ಹೇಳುವುದು)

ಪೃಥ್ವಿ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ ಧೃತಾ । ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರುಚಾಸನಮ್ ॥ ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿ ಸಂಸ್ಥಿತಾಃ । ಯೇ ಭೂತಾ ವಿಘ್ನಕರ್ತಾರಸ್ತೇನಶ್ಯಂತು ಶಿವಾಜ್ಞಯಾ ॥ ಅಪಕ್ರಾಮಂತು ಭೂತಾದ್ಯಾಸ್ಸರ್ವೇ ತೇ ಭೂಮಿಭಾರಕಾಃ । ಸರ್ವೇಷಾಮವಿರೋಧೇನ ಬ್ರಹ್ಮಕರ್ಮ ಸಮಾರಭೇ ॥ ತೀಕ್ಷ್ಣದಂಷ್ಟ್ರ ಮಹಾಕಾಯ ಕಲ್ಪಾಂತ ದಹನೋಪಮ । ಭೈರವಾಯ ನಮಸ್ತುಭ್ಯಂ ಅನುಜ್ಞಾಂ ದಾತುಮರ್ಹಸಿ ॥

ಆಚಮನ –

(ಕರ್ತೃವಿನ ಆಚಮ್ಯ ಪಾತ್ರೆಯಿಂದ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು, ಅದನ್ನು ಬಲಕೈಯಲ್ಲಿ ಹಾಕಿಕೊಂಡು, ಕೆಳಗಿನ ಒಂದೊಂದು ನಾಮಗಳನ್ನು ಹೇಳಿಕೊಂಡು ಒಮ್ಮೊಮ್ಮೆ ಕುಡಿಯಬೇಕು. 4 ನೇ ನಾಮವನ್ನು ಹೇಳಿ ನೀರನ್ನು ಕರ್ತೃವಿನ ಅರ್ಘ್ಯಪಾತ್ರೆಗೆ ಹಾಕಬೇಕು)

ಕೇಶವಾಯ ನಮ: । ನಾರಾಯಣಾಯ ನಮ: । ಮಾಧವಾಯ ನಮ: । ಗೋವಿಂದಾಯ ನಮ: ॥

(ಕೈ ತೊಳೆದುಕೊಂಡು, ಮುಂದಿನ ಒಂದೊಂದು ನಾಮಗಳನ್ನು ಹೇಳುತ್ತಾ, ದೇಹದ ಒಂದೊಂದು ಅಂಗಗಳನ್ನು ಮುಟ್ಟಬೇಕು)

ವಿಷ್ಣವೇ ನಮ: – ಬಲಮೂಗು, ಎಡಮೂಗು ॥

ಮಧುಸೂದನಾಯ ನಮ: – ಬಲಕಣ್ಣು, ಎಡಕಣ್ಣು ॥

ತ್ರಿವಿಕ್ರಮಾಯ ನಮ: – ಬಲಕಿವಿ, ಎಡಕಿವಿ ॥

ವಾಮನಾಯ ನಮ: – ಹೊಕ್ಕಳು ॥

ಶ್ರೀಧರಾಯ ನಮ: – ಹೃದಯ ॥

ಹೃಷೀಕೇಶಾಯ ನಮ: – ತಲೆ ॥

ಪದ್ಮನಾಭಾಯ ನಮ: – ಬಲಹೆಗಲು ॥

ದಾಮೋದರಾಯ ನಮ: – ಎಡಹೆಗಲು ॥ (ಈ ರೀತಿ 2 ಸಲ ಮಾಡಬೇಕು)

ಪ್ರಾಣಾಯಾಮ –

ತರ್ಜನೀ ಮಧ್ಯಮ ಬೆರಳುಗಳನ್ನು ಮಡಿಸಿಕೊಂಡು, ಅಂಗುಷ್ಠ ಅನಾಮಿಕ ಕನಿಷ್ಠ ಬೆರಳುಗಳಿಂದ ಮೂಗಿನ ಎಡರಂಧ್ರದಿಂದ ಗಾಳಿಯನ್ನು ತೆಗೆದುಕೊಂಡು, ತುದಿಯನ್ನು ಮುಚ್ಚಿದಂತೆ ಹಿಡಿದುಕೊಂಡು ಗಾಳಿಯನ್ನು ಒಳಗೆ ನಿಲ್ಲಿಸಿಕೊಂಡು ಮನಸ್ಸಿನಿಂದ ಪ್ರಾಣಾಯಾಮ ಮಂತ್ರಗಳನ್ನು ಒಮ್ಮೆ ಜಪಿಸಿ, ಬಲರಂಧ್ರದಿಂದ

ಗಾಳಿಯನ್ನು ನಿಧಾನವಾಗಿ ಬಿಡಬೇಕು ಹೀಗೆ ಮಾಡಿದರೆ ಒಂದು ಪ್ರಾಣಾಯಾಮ ಆಗುತ್ತದೆ ॥

ಓಂಭೂಃ ಓಂಭುವಃ ಓಗ್ಂಸುವಃ ಓಂಮಹಃ ಓಂಜನಃ ಓಂತಪಃ ಓಗ್ಂಸತ್ಯಂ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥ । ಓಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ಸಂಕಲ್ಪ –

ಮಮಉಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀ ಪರಮೇಷ್ವರ ಪ್ರೀತ್ಯರ್ಥಂ । ಪ್ರಾತಃ(ಮಾಧ್ಯಾಹ್ನಿಕ)(ಸಾಯಂ) ಸಂಧ್ಯಾಮುಪಾಸಿಷ್ಯೇ ॥

ಪರಮೇಶ್ವರನ ಪ್ರೀತಿಗಾಗಿ ಬೆಳಗಿನ(ಮಧ್ಯಾಹ್ನದ)(ಸಂಜೆಯ) ಸಂಧ್ಯಾವಂದನೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ, ದೇವತಾ ಆಚಮನಪಾತ್ರೆಯಿಂದ ನೀರನ್ನು ಬಿಡುವುದು ॥

ಮೊದಲ ಪ್ರೋಕ್ಷಣಮಂತ್ರ –

ಕೆಳಗಿನ ಮಂತ್ರವನ್ನು ಹೇಳುತ್ತಾ, ಕರ್ತೃ ಆಚಮನಪಾತ್ರೆಯ ಉದ್ಧರಣೆಯಿಂದ ತೆಗೆದುಕೊಂಡ ನೀರನ್ನು ತನ್ನ ದೇಹಕ್ಕೆ ಪ್ರೋಕ್ಷಣೆ ಮಾಡಿಕೊಂಡು, ಉಳಿದ ನೀರನ್ನು ಕೆಳಗೆ ಹಾಕಬೇಕು ।

ಓಂ ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥

(ತಾತ್ಪರ್ಯ– ಎಲೈ ಜಲಾಭಿಮಾನಿ ದೇವತೆಗಳೇ, ನೀವು ನಮಗೆ ಸ್ನಾನ ಪಾನಾದಿಗಳಿಗೆ ಅನುಕೂಲರಾಗಿರಿ, ಸುಖವನ್ನು ಕೊಡುವವರಾಗಿರಿ, ಅನ್ನ ರಸಗಳನ್ನು ಕೊಡಿರಿ, ಪರಮಾತ್ಮನ ದರ್ಶನಕ್ಕೆ ಯೋಗ್ಯವಾದ ಇಂದ್ರಿಯಗಳನ್ನು ಅನುಗ್ರಹಿಸಿರಿ ಮತ್ತು ನಿಮ್ಮಲ್ಲಿರುವ ಸುಖವಾದ ಮಧುರ ರಸವನ್ನು ತಾಯಿಯರಂತೆ ಪ್ರೀತಿಯಿಂದ ಭೂಮಿಯಲ್ಲಿರುವ ನಮಗೆ ಕೊಂಡುವವರಾಗಿರಿ)

ಅಂತಶ್ಶುದ್ಧಿ ಮಂತ್ರ –

ಈವರೆಗೆ ಬಾಹ್ಯ ಶುದ್ಧಿಯನ್ನು ತಿಳಿಸಿ ಅಭೋಜ್ಯ, ಅಪೇಯ, ದುಷ್ಟವಸ್ತು ಸಂಸರ್ಗ, ಮತ್ತು ಉದರಾದಿ ಪಾಪಪರಿಹಾರ ರೂಪವಾದ ಅಂತಶ್ಶುದ್ಧಿಗಾಗಿ ಕೆಳಗಿನ ಮಂತ್ರವನ್ನು ಹೇಳಬೇಕು । ಇದನ್ನು ಹೇಳಿ ಕರ್ತೃವಿನ ಆಚಮನಪಾತ್ರೆಯ ನೀರನ್ನು ಕೈಗೆ ಹಾಕಿಕೊಂಡು ಕುಡಿಯಬೇಕು ।

ಬೆಳಿಗ್ಗೆ ಹೇಳುವಮಂತ್ರ –

ಸೂರ್ಯಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷಂತಾಮ್ । ಯದ್ರಾತ್ರಿಯಾ ಪಾಪಮಕಾರ್ಷಮ್ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತ ಯೋನೌ । ಸೂರ್ಯೇಜ್ಯೋತಿಷಿ ಜುಹೋಮಿ ಸ್ವಾಹಾ ॥

(ಅರ್ಥ – ಅಹಂಕಾರ ಯುಕ್ತನಾಗಿ, ಕೋಪವಶನಾಗಿ, ಕಾಮದಿಂದ ಹಿಂದಿನ ರಾತ್ರಿಯಲ್ಲಿ ಮಾಡಿದ ಕೆಟ್ಟ ಯೋಚನೆಗಳೇ ಮುಂತಾದ ಮನಸ್ಸಿನ ಪಾಪವನ್ನೂ, ಸುಳ್ಳುಹೇಳುವುದೇ ಮುಂತಾದ ವಾಕ್ಸಂಬಂಧ ಪಾಪವನ್ನೂ, ಪ್ರಾಣಿಗಳನ್ನು ಹೊಡೆಯುವುದೇ ಮುಂತಾದ ಹಸ್ತಸಂಬಂಧ ಪಾಪವನ್ನೂ, ಗೋ ಬ್ರಾಹ್ಮಣರನ್ನು ಒದಯುವುದೇ ಮುಂತಾದ ಪಾದ ಸಂಬಂಧ ಪಾಪವನ್ನೂ, ದೂಷಿತಪದಾರ್ಥ ಭೋಜನವೇ ಮುಂತಾದ ಹೊಟ್ಟೆ ಸಂಬಂಧ ಪಾಪವನ್ನೂ, ಶಾಸ್ತ್ರವಿರುದ್ಧದ ಲೈಂಗಿಕ ಕ್ರಿಯೆಯೇ ಮುಂತಾದ ಶಿಶ್ನ ಸಂಬಂಧ ಪಾಪವನ್ನೂ, ಸೂರ್ಯ – ಮನ್ಯು – ಮನ್ಯುಪತಿ ಈ ದೇವತೆಗಳು

ಪರಿಹರಿಸಿ ನನ್ನನ್ನು ಕಾಪಾಡಲಿ, ಎಲ್ಲ ರೀತಿಯ ಪಾಪಗಳನ್ನೂ ರಾತ್ರಿ ದೇವತೆಯು ಹೋಗಲಾಡಿಸಲಿ ನನ್ನ ಎಲ್ಲ ಪಾಪಗಳನ್ನು ಸ್ವಯಂಜ್ಯೋತಿ ಸ್ವರೂಪನಾದ ಪರಬ್ರಹ್ಮನಲ್ಲಿ ಹಾಕುತ್ತೇನೆ ಎಲ್ಲ ದೋಷಗಳೂ ನಾಶವಾಗಲಿ)

ಮಧ್ಯಾಹ್ನದಲ್ಲಿ ಹೇಳುವಮಂತ್ರ –

ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಮ್ । ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತುಮಾಮ್ । ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ॥

(ಅರ್ಥ – ಆಪೋ ವೈ ಸರ್ವಾ ದೇವತಾಃ, ಆಪಃ ಸ್ವಭಾವತೋ ಮೇಧ್ಯಾಃ ಎಂಬ ಶ್ರುತಿಸ್ಮೃತಿ ವಾಕ್ಯಗಳಿಂದ, ನೀರು ಸಕಲದೇವತಾ ಸ್ವರೂಪವಾಗಿಯೂ, ಸ್ವಯಂ ಪರಿಶುದ್ಧವಾಗಿಯೂ ಇರುವುದರಿಂದ ಅದು ಭೂಮಿಯನ್ನು ತೊಳೆದು ಶುದ್ಧಮಾಡಲಿ, ಆ ಶುದ್ಧಭೂಮಿಯು ಆನುಷ್ಠಾನ ಮಾಡುವ ನನ್ನನ್ನು ಶುದ್ಧಿಗೊಳಿಸಲಿ, ನಾನು ಮಾಡಿರುವ ಎಂಜಲಾದ ಊಟ, ಅಭೋಜ್ಯ ಭೋಜನ, ದುಷ್ಕಾರ್ಯಗಳು, ದುಷ್ಪರಿಗ್ರಹಗಳು ಇವುಗಳ ಎಲ್ಲ ದೋಷಗಳನ್ನು ಮತ್ತು ನನ್ನನ್ನೂ ಪರಿಶುದ್ಧಗೊಳಿಸಲಿ, ಈ ತೀರ್ಥವನ್ನು ನನ್ನ ಮುಖಾಗ್ನಿಯಲ್ಲಿ ಹೋಮಿಸುತ್ತೇನೆ. ಅದರಿಂದ ಎಲ್ಲ ದೋಷಗಳೂ ಸುಟ್ಟು ಹೋಗಲಿ.)

ಸಾಯಂಕಾಲದಲ್ಲಿ ಹೇಳುವಮಂತ್ರ –

ಅಗ್ನಿಶ್ಚಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷಂತಾಮ್ । ಯದಹ್ನಾ ಪಾಪಮಕಾರ್ಷಮ್ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ಅಹಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತ ಯೋನೌ । ಸತ್ಯೇಜ್ಯೋತಿಷಿ ಜುಹೋಮಿ ಸ್ವಾಹಾ ॥

(ಅಗ್ನಿಯು, ಕ್ರೋಧ ದೇವತೆಯು. ಕೋಪದಿಂದ ಮಾಡಿದ ಪಾಪಗಳಿಂದ ನನ್ನನ್ನು ರಕ್ಷಿಸಲಿ, ಹಗಲಿನಲ್ಲಿ ಯಾವ ಪಾಪವನ್ನು ಮನಸ್ಸಿನಿಂದಲೂ, ಮಾತಿನಿಂದಲೂ, ಕೈಗಳಿಂದಲೂ, ಕಾಲುಗಳಿಂದಲೂ, ಉದರದಿಂದಲೂ, ಜನನೇಂದ್ರಿಯದಿಂದಲೂ ಮಾಡಿದ್ದೇನೋ ಅದನ್ನು ಹಗಲಿನ ಅಭಿಮಾನಿ ದೇವತೆಯು ಹೋಗಲಾಡಿಸಿ ಕಾಪಾಡಲಿ, ಇನ್ನೂ ಏನಾದರೂ ಪಾಪವಿದ್ದಲ್ಲಿ ಅದನ್ನೂ ಪರಿಹರಿಸಲಿ, ಈ ತೀರ್ಥವನ್ನು ಅಮೃತ ಯೋನಿಯಾದ ಆದಿತ್ಯನೆಂಬ ಅಗ್ನಿಯಲ್ಲಿ ಹೋಮ ಮಾಡುತ್ತೇನೆ.)

ಎರಡನೇ ಪ್ರೋಕ್ಷಣಮಂತ್ರ –

ಕೆಳಗಿನ ಮಂತ್ರವನ್ನು ಹೇಳುತ್ತಾ ಕರ್ತೃವಿನ ಆಚಮನಪಾತ್ರೆಯ ಉದ್ಧರಣೆಯಿಂದ ತೆಗೆದುಕೊಂಡ ನೀರನ್ನು ತನ್ನ ದೇಹಕ್ಕೆ ಪ್ರೋಕ್ಷಣೆ ಮಾಡಿಕೊಂಡು ಉಳಿದ ನೀರನ್ನು ಕೆಳಗೆ ಹಾಕಬೇಕು ॥

ಓಂ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾ ಕರತ್ಪ್ರಣ ಆಯೂಗ್ಂಷಿ ತಾರಿಷತ್ ॥ ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂಗಮಾಮ ವೋ ಯಸ್ಯಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥

(ಹವ್ಯವಾಹನನಾದ, ಜಯಶೀಲನಾದ, ಸರ್ವವ್ಯಾಪಿಯಾದ, ಅಶ್ವಾಕಾರವುಳ್ಳ, ಅನ್ನ ಸಂಪನ್ನನಾದ, ದೇವತೆಗಳಿಗೆ ಅನ್ನವನ್ನು ಒದಗಿಸಿಕೊಡುವ, ಅಗ್ನಿಪುರುಷನನ್ನು ನಾನು ಸ್ತೋತ್ರ ಮಾಡುತ್ತೇನೆ । ಅವನು ನಮ್ಮ ಮುಖಗಳನ್ನು ಶುದ್ಧ ಮಾಡಲಿ । ಸುವಾಸನೆಯುಳ್ಳದ್ದನ್ನಾಗಿ ಮಾಡಲಿ । ಆಯಸ್ಸನ್ನು ವೃದ್ಧಿಸಲಿ ॥)

ಪಾಪ ವಿಸರ್ಜನಾ ಮಂತ್ರ –

ಕರ್ತೃವಿನ ಆಚಮನಪಾತ್ರೆಯ ನೀರನ್ನು ಕೈಯಲ್ಲಿ ಹಾಕಿಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ಆ ನೀರನ್ನು ಮೂಸಿ ನಂತರ ಅದನ್ನು ಕರ್ತೃಅರ್ಘ್ಯಪಾತ್ರೆಗೆ ಹಾಕಬೇಕು ॥

ದ್ರುಪದಾದಿವ ಮುಂಚತು । ದ್ರುಪದಾ ದಿವೇನ್ಮುಮುಚಾನ: । ಸ್ವಿನ್ನಸ್ನಾತ್ವೀಮಲಾದಿವ ।
ಪೂತಂ ಪವಿತ್ರೇಣೇವಾಜ್ಯಮ್ । ಆಪಶ್ಯುಂಧಂತು ಮೈನಸ: ॥

(ಮೈ ಬೆವರಿ ಕೊಳೆಯಿಂದ ಕೂಡಿದವನು ಸ್ನಾನ ಮಾಡಿ ಕೊಳೆಯನ್ನು ಕಳೆದುಕೊಳ್ಳುವಂತೆ, ಕರ್ಮಕ್ಕೆ ಬೇಕಾದ ತುಪ್ಪವು ಪವಿತ್ರರೂಪವಾದ ದರ್ಭೆಗಳಿಂದ ಸಂಸ್ಕಾರ ಹೊಂದಿ ಶುದ್ಧವಾಗುವಂತೆ, ಸರ್ವಕರ್ಮ ಸಾಕ್ಷಿಯಾದ ಸೂರ್ಯನು ಪಾಪದ ದೆಸೆಯಿಂದ ನನ್ನನ್ನು ತಪ್ಪಿಸಿ ಪರಿಶುದ್ಧನನ್ನಾಗಿ ಮಾಡಲಿ ॥)

ಅರ್ಘ್ಯ ಪ್ರದಾನ –

ಮಮ ಉಪಾತ್ತ..... ಪ್ರೀತ್ಯರ್ಥಂ, ಪ್ರಾತಃ (ಮಾಧ್ಯಾಹ್ನಿಕ/ಸಾಯಂ) ಸಂಧ್ಯಾವಂದನ ಅರ್ಘ್ಯಪ್ರದಾನಂ ಕರಿಷ್ಯೇ ।

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ॥

ವಿಮರ್ಶೆ : ((ಪ್ರಾತಸ್ಸಂಧ್ಯೆಯಲ್ಲಿ ಹಾಗೂ ಸಾಯಂ ಸಂಧ್ಯೆಯಲ್ಲಿ 3 ಅರ್ಘ್ಯಗಳನ್ನು ಕೊಡಬೇಕು, ಮಧ್ಯಾಹ್ನದಲ್ಲಿ 1 ಅರ್ಘ್ಯವನ್ನು ಕೊಡಬೇಕು ॥))
((ಪ್ರಾತಃ ಮತ್ತು ಮಧ್ಯಾಹ್ನಕಾಲದಲ್ಲಿ ಪೂರ್ವಾಭಿಮುಖವಾಗಿ ಅರ್ಘ್ಯ ಹಾಗೂ ಜಪ ಮತ್ತು ಉಪಸ್ಥಾನಗಳನ್ನು ಮಾಡಬೇಕು ॥ ಸಂಜೆ, ಪಶ್ಚಿಮಾಭಿಮುಖವಾಗಿ, ಅರ್ಘ್ಯ ಹಾಗೂ ಜಪ ಮತ್ತು ಉಪಸ್ಥಾನವನ್ನು ಮಾಡಬೇಕು))
((ಬೆಳಿಗ್ಗೆ, ಸೂರ್ಯನಿಗೆ ಎದುರಾಗಿ ಸ್ವಲ್ಪ ಬಗ್ಗಿನಿಂತು ನೀರಿನಲ್ಲಿ ಅರ್ಘ್ಯ ಕೊಡಬೇಕು ॥))

((ಮಧ್ಯಾಹ್ನದಲ್ಲಿ ನೆಟ್ಟಗೆ ನಿಂತು ಅರ್ಘ್ಯಕೊಡಬೇಕು, ಕೈಯಲ್ಲಿ ನೀರನ್ನು ಹಿಡಿದು ಹಸುವಿನ ಕೊಂಬಿನಂತೆ ಕೈಯನ್ನು ಮೇಲಕ್ಕೆತ್ತಿ ನೀರಿನಲ್ಲಿ ಅರ್ಘ್ಯವನ್ನು ಕೊಡಬೇಕು ॥))

((ಸಂಜೆಯಾದರೋ,"**ಉಪವಿಶ್ಯತು ಸಾಯಾಹ್ನೇ ಜಲೇತ್ವರ್ಘ್ಯಂ ನ ನಿಕ್ಷಿಪೇತ್ । ನಿಕ್ಷಿಉಷ್ಯೇದ್ಯದಿ ಮೂಢಾತ್ಮಾ ರೌರವಂ ನರಕಂ ವ್ರಜೇತ್ ॥**" ಎಂದಿರುವುದರಿಂದ, ಕುಳಿತು ನೀರಿನಿಂದ ಪ್ರೋಕ್ಷಿಸಿದ ನೆಲದಮೇಲೆ ಪಶ್ಚಿಮಾಭಿಮುಖವಾಗಿ ಅರ್ಘ್ಯವನ್ನು ಕೊಡಬೇಕು, ನೀರಿನಲ್ಲಿ ಕೊಡಬಾರದು । ಆಶ್ವಲಾಯನ ಶಾಖೆಯವರೂ ಸಹಾ ಸಂಜೆ ಕುಳಿತೇ ಅರ್ಘ್ಯಕೊಡಬೇಕು ॥))

(("**ಮಧ್ಯಾಹ್ನೇ ಚಾಂಜಲಿಕ್ಷೇಪಂ ಸಕೃದೇವ ಸಮಾಚರೇತ್**" ಎಂದಿರುವುದರಿಂದ ಮಾಧ್ಯಾಹ್ನಿಕದಲ್ಲಿ ಒಂದೇ ಅರ್ಘ್ಯವನ್ನು ಕೊಡಬೇಕೆಂದಾಯಿತು ॥))

((ಕಾಲಾತೀತವಾದರೆ 3 ಕಾಲಗಳಲ್ಲಿಯೂ ಪ್ರಾಯಶ್ಚಿತ್ತವಾಗಿ ಒಂದು ಅರ್ಘ್ಯವನ್ನು ಕೊಡಬೇಕು । ಪ್ರಾಯಶ್ಚಿತ್ತಾರ್ಘ್ಯದಲ್ಲಿ, ಗ್ರಾಯತ್ರಿಮಂತ್ರದೊಂದಿಗೆ ಓಮಾಪೋಜ್ಯೋತೀರಸೋೞಮೃತಂ ಬ್ರಹ್ಮಭೂರ್ಭುವಸ್ಸುವರೋಂ ಎಂದು ಹೇಳಿ ಕೊಡಬೇಕು । "**ಚತುರರ್ಘ್ಯಂತು ಗಾಯತ್ರ್ಯಾ ಶಿರೋ ವ್ಯಾಹೃತಿ ಸಂಯುತಮ್ । ಕಾಲಾತೀತ ವಿಶುದ್ಧ್ಯರ್ಥಂ ತ್ರಿಸಂಧ್ಯಾಂತು ಸಮಾಚರೇತ್ ॥**"))

(ಈ ಕೆಳಗಿನ ಮಂತ್ರವನ್ನು ಹೇಳಿ ಬಲಹಸ್ತವನ್ನು ಸೂರ್ಯನಿಗೆ ತೋರಿಸಿ ನಂತರ ತನ್ನ ಹೃದಯವನ್ನು ಮುಟ್ಟಿಕೊಂಡು ಬ್ರಹ್ಮಾತ್ಮೈಕ್ಯವನ್ನು ಭಾವಿಸಬೇಕು, "**ಅಸಾವಾದಿತ್ಯ ಮಂತ್ರೇಣ ಸೋದಕೇನೈವ ಪಾಣಿನಾ । ಪ್ರದಕ್ಷಿಣಮನುವ್ರಜ್ಯ ವಾಚಯೇತ್ ಸಂಧ್ಯಯೋರ್ದ್ವಯೋಃ ॥**" ಅಂದರೆ ಕೈಯಲ್ಲಿ ನೀರನ್ನು ತೆಗೆದುಕೊಂಡು ಕೆಳಗಿನ ಮಂತ್ರವನ್ನು ಹೇಳಿ ಆತ್ಮಪ್ರದಕ್ಷಿಣೆ ಮಾಡಿ ನೀರನ್ನು ಕೆಳಗೆ ಬಿಡುವುದು, ಆದಿತ್ಯನು ನಮ್ಮ ಆತ್ಮವು ಒಂದೇ ತತ್ವವೆಂದು ಅನುಸಂಧಾನ ಮಾಡುವುದೇ ಸಂಧ್ಯಾವಂದನೆಯ ಮುಖ್ಯಫಲವು)

ಅಸಾವಾದಿತ್ಯೋ ಬ್ರಹ್ಮ । ಬ್ರಹ್ಮೈವಾಹಮಸ್ಮಿ ॥

ಕರನ್ಯಾಸ, ಅಂಗನ್ಯಾಸಗಳು ಅಗತ್ಯವೇ ? !!

ವಿಮರ್ಶೆ : ತೈತ್ತಿರೀಯ ಸಂಧ್ಯಾಭಾಷ್ಯ –

ಪ್ರತ್ಯಕ್ಷ ವೇದೇ ವೇದಮೂಲ ಮನ್ವಾದಿ ಮಹಾಸ್ಮೃತಿಷು ಚ ಅಸ್ತ್ರೋಪ ಸಂಹರಣಾದೇರನುಕ್ತತ್ವಾತ್ । ತಸ್ಮಾತ್ ಅಸ್ತ್ರೋಪ ಸಂಹಾರಾದಿಕಂ ನ ಕರ್ತವ್ಯಂ ಇತಿ ಸರ್ವಂ ರಮಣೀಯಮ್ ॥

ಕರನ್ಯಾಸ, ಅಂಗನ್ಯಾಸ, ಮುದ್ರಾದಿವಿಧಿ, ಮತ್ತು ಶಾಪವಿಮೋಚನಾದಿ ವಿಧಿಗಳು ತಾಂತ್ರಿಕಕರ್ಮಗಳ ವಿಷಯಗಳೇ ಹೊರತು ವೈದಿಕಕರ್ಮಗಳ ವಿಷಯಗಳಲ್ಲ । ಸಂಧ್ಯಾವಂದನೆಯೂ ಸಹಾ ಶುದ್ಧ ವೈದಿಕಕರ್ಮವೇ ಆದ್ದರಿಂದ, ತಾಂತ್ರಿಕವಾದ ಕರನ್ಯಾಸ, ಅಂಗನ್ಯಾಸ, ಮುದ್ರಾದಿವಿಧಿಗಳು ತ್ರಿಕಾಲ ಸಂಧ್ಯಾವಂದನೆಗಳಲ್ಲಿ ಅನವಶ್ಯಕವೆಂದು ತಿಳಿಯಬೇಕು ॥ ಹಾಗಾಗಿ ಇಲ್ಲಿ ನಾವು ನ್ಯಾಸಗಳನ್ನು ಕೊಟ್ಟಿಲ್ಲ । ಮಂತ್ರಾರ್ಥವನ್ನು ಚಿಂತಿಸುತ್ತಾ, ಪ್ರಣವ ವ್ಯಾಹೃತಿಗಳೊಡನೆ ಕೂಡಿದ ಗಾಯತ್ರೀ ಮಂತ್ರವನ್ನು ಪ್ರತಿನಿತ್ಯ 3 ಕಾಲಗಳಲ್ಲಿಯೂ ತಪ್ಪದೇ ಜಪಿಸಬೇಕು । ಗಾಯತ್ರೀ ಮಂತ್ರವನ್ನು ಪ್ರಣವಾದಿಯಾಗಿ ಹೇಳಬೇಕು । ಪ್ರಣವ, ವ್ಯಾಹೃತಿ, ಗಾಯತ್ರಿ ಪಾದತ್ರಯ ಈ ರೀತಿ ಮಾಡಬೇಕು ।

((ಜಪ ಮಾಡುವ ಕ್ರಮ 3 ವಿಧ । ವಾಚಿಕ, ಉಪಾಂಶು ಮತ್ತು ಮಾನಸ ಎಂದು । ಇವುಗಳಲ್ಲಿ ವಾಚಿಕ ಎಂದರೆ ಗಟ್ಟಿಯಾಗಿ ಹೇಳುವುದು, ಇದು ಅಧಮ । ಉಪಾಂಶು ಎಂದರೆ ಅನ್ಯರಿಗೆ ಕೇಳಿಸದಂತೆ ಉಚ್ಚರಿಸುವುದು, ಇದು ಮಧ್ಯಮ । ಮಾನಸ ಎಂದರೆ ಕೇವಲ ಮನಸ್ಸಿನಿಂದಲೇ ಉಚ್ಚರಿಸುವುದು, ಇದು ಶ್ರೇಷ್ಠ ।))

ಗಾಯತ್ರೀಹೃದಯ ಧ್ಯಾನ –

((ಓಂ ಇತ್ಯೇಕಾಕ್ಷರಂ ಬ್ರಹ್ಮ ಎಂಬ ಮಂತ್ರವು ಗಾಯತ್ರಿಗೆ ಹೃದಯವಾಗಿರುವುದರಿಂದ ಮೊದಲು ಅದನ್ನು ಪಠಿಸಿ ಆಮೇಲೆ ಜಪವನ್ನು ಮಾಡಬೇಕು ।))

ಓಂ ಇತ್ಯೇಕಾಕ್ಷರಂ ಬ್ರಹ್ಮ । ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್ । ಗಾಯತ್ರಂ ಛಂದಂ ಪರಮಾತ್ಮಂ ಸರೂಪಮ್ । ಸಾಯುಜ್ಯಂ ವಿನಿಯೋಗಮ್ ॥

ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮ ಸಮ್ಮಿತಮ್ । ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ಮೇ । ಯದಹ್ನಾತ್ ಕುರುತೇ ಪಾಪಂ ತದಹ್ನಾತ್ ಪ್ರತಿಮುಚ್ಯತೇ । ಯದ್ರಾತ್ರಿಯಾತ್ ಕುರುತೇ ಪಾಪಂ ತದ್ರಾತ್ರಿಯಾತ್ ಪ್ರತಿಮುಚ್ಯತೇ । ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತೀ ॥

ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುರಭಿ ಭೂರೋಂ ಗಾಯಿತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ ಛಂದಋಷೀನಾವಾಹಯಾಮಿ ಶ್ರಿಯಮಾವಾಹಯಾಮಿ ಗಾಯತ್ರ್ಯಾ ಗಾಯತ್ರೀ ಛ್ಛಂದೋ ವಿಶ್ವಾಮಿತ್ರಋಷಿಃ ಸವಿತಾ ದೇವತಾಗ್ನಿರ್ಮುಖಂ ಬ್ರಹ್ಮಾ ಶಿರೋ ವಿಷ್ಣುರ್ಹೃದಯಗ್ಂ ರುದ್ರಶ್ಶಿಖಾ ಪೃಥಿವೀ ಯೋನಿಃ ಪ್ರಾಣಾಪಾನವ್ಯಾನೋದಾನ ಸಮಾನಾ ಸಪ್ರಾಣಾ ಶ್ವೇತವರ್ಣಾ ಸಾಂಖ್ಯಾಯನಸಗೋತ್ರಾ ಗಾಯತ್ರೀ ಚತುರ್ವಿಗ್ಂಶತ್ಯಕ್ಷರಾ ತ್ರಿಪದಾಷಟ್‌ಕುಕ್ಷಿಃ ಪಂಚಶೀರ್ಷೋಪನಯನೇ ವಿನಿಯೋಗಃ ॥

ಮುಕ್ತಾ ವಿದ್ರುಮ ಹೇಮನೀಲ ಧವಳಚ್ಛಾಯೈರ್ಮುಖೈಸ್ತ್ರ್ಯಕ್ಷಣೈರ್ಯುಕ್ತಾಮಿಂದು ಕಲಾನಿಬದ್ಧ ರತ್ನಮಕುಟಾಂ ತತ್ವಾರ್ಥ ವರ್ಣಾತ್ಮಿಕಾಮ್ । ಗಾಯತ್ರೀಂ ವರದಾಭಯಾಂಕುಶಕಶಾಂ ಶುಭ್ರಂ ಕಪಾಲಂ ಗದಾಂ ಶಂಖಂ ಚಕ್ರಮಥಾರವಿಂದ ಯುಗಲಂ ಹಸ್ತೈರ್ವಹಂತೀಂ ಭಜೇ ॥ ಯೋ ದೇವಃ ಸವಿತಾಸ್ಮಾಕಂ ಧಿಯೋ ಧರ್ಮಾದಿ ಗೋಚರೇತ್ । ಪ್ರೇರಯೇತ್ತಸ್ಯ ಯದ್ಭರ್ಗಸ್ತದ್ವರೇಣ್ಯಮುಪಾಸ್ಮಹೇ ॥

ಗಾಯತ್ರೀಮಂತ್ರ –

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ । ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ॥

((ಅರ್ಥ – ನಮಗೆ ಚೈತನ್ಯವನ್ನು ಕೊಟ್ಟು ಬುದ್ಧಿ ಅಂತಃಕರಣ ವೃತ್ತಿಗಳನ್ನು(ಕಾರ್ಯಗಳಲ್ಲಿ ತೊಡಗುವಂತೆ) ಪ್ರೇರೇಪಿಸುತ್ತಿರುವ, ಪ್ರಕಾಶಮಾನನಾದ ಸೂರ್ಯನನ್ನು ಹಾಗೂ ಅವನೊಳಗಿರುವ ಚೈತನ್ಯರೂಪವಾದ ಪರಬ್ರಹ್ಮನನ್ನು ಧ್ಯಾನಿಸುತ್ತೇನೆ ।))

ಧ್ಯಾನ –

ಮುಕ್ತಾ ವಿದ್ರುಮ ಹೇಮನೀಲ ಧವಳಚ್ಛಾಯೈರ್ಮುಖೈಸ್ತ್ರ್ಯಕ್ಷಣೈರ್ಯುಕ್ತಾಮಿಂದು ಕಲಾನಿ ಬದ್ಧ ರತ್ನ ಮಕುಟಾಂ ತತ್ವಾರ್ಥ ವರ್ಣಾತ್ಮಿಕಾಮ್ । ಗಾಯತ್ರೀಂ ವರದಾಭಯಾಂಕುಶಕಶಾಂ ಶುಭ್ರಂ ಕಪಾಲಂ ಗದಾಂ ಶಖಂ ಚಕ್ರಮಥಾರವಿಂದ ಯುಗಲಂ ಹಸ್ತೈರ್ವಹಂತೀಂ ಭಜೇ ॥

ಉಪಸ್ಥಾನ –

ಮಮ ಉಪಾತ್ತ.....ಪ್ರೀತ್ಯರ್ಥಂ, ಪ್ರಾತ: / ಮಾಧ್ಯಾಹ್ನಿಕ / ಸಾಯಂ, ಸಂಧ್ಯಾ ಉಪಸ್ಥಾನಂ ಕರಿಷ್ಯೇ ॥

ಮೇಲಿನಂತೆ ಹೇಳಿ, ದೇವತಾ ಆಚಮನಪಾತ್ರೆಯ ನೀರನ್ನು ದೇವತಾ ಅರ್ಘ್ಯಪಾತ್ರೆಗೆ ಹಾಕಿ, ಎದ್ದು ಪೂರ್ವಾಭಿಮುಖವಾಗಿ ನಿಂತು, ಕೈ ಮುಗಿದುಕೊಂಡು ಕೆಳಗಿನ ಮಂತ್ರವನ್ನು ಹೇಳುವುದು ॥

ಓಂ ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ । ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛದೇವಿ ಯಥಾಸುಖಮ್ ॥ ಸ್ತುತೋಮಯಾ ವರದಾ ವೇದಮಾತಾ ಪ್ರಚೋದಯಂತೀ ಪವನೇ ದ್ವಿಜಾತಾ । ಆಯು: ಪೃಥಿವ್ಯಾಂ ದ್ರವಿಣಂ ಬ್ರಹ್ಮವರ್ಚಸಂ ಮಹ್ಯಂ ದತ್ವಾ ಪ್ರಜಾತುಂ ಬ್ರಹ್ಮಲೋಕಮ್ ॥ ಘೃಣಿಸ್ಸೂರ್ಯ ಆದಿತ್ಯೋ ನ ಪ್ರಭಾವಾತ್ಯಕ್ಷರಂ । ಮಧುಕ್ಷರಂತಿ ತದ್ರಸಂ । ಸತ್ಯಂ ವೈ ತದ್ರಸಮಾಪೋಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ಬೆಳಗಿನ ಸಂಧ್ಯಾಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

ಓಂ ಮಿತ್ರಸ್ಯ ಚರ್ಷಣೀ ಧೃತ: ಶ್ರವೋ ದೇವಸ್ಯ ಸಾನಸಿಮ್ । ಸತ್ಯಂ ಚಿತ್ರಶ್ರವಸ್ತಮಮ್ । ಮಿತ್ರೋ ಜನಾನ್, ಯಾತಯತಿ ಪ್ರಜಾನನ್ಮಿತ್ರೋದಾಧಾರ ಪೃಥಿವೀಮುತದ್ಯಾಮ್ । ಮಿತ್ರ: ಕೃಷ್ಟೀರನಿಮಿಷಾಽಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ । ಪ್ರಸಮಿತ್ರಮತೋರ್ ಅಸ್ತು ಪ್ರಯಸ್ವಾನ್, ಯಸ್ತ ಆದಿತ್ಯ ಶಿಕ್ಷತಿ ವ್ರತೇನ । ನ ಹನ್ಯತೇ ನ ಜೀಯತೇ ತ್ವೋತೋ ನೈನಮಗ್ಂ ಹೋ ಅಶ್ನೋತ್ಯಂತಿತೋ ನ ದೂರಾತ್ ॥

ಮಧ್ಯಾಹ್ನ ಸಂಧ್ಯಾಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

ಓಂ ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ । ಹಿರಣ್ಯಯೇನ ಸವಿತಾ ರಥೇನಾ ದೇವೋಯಾತಿ ಭುವನಾ ವಿಪಶ್ಯನ್ । ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಮ್ । ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್ । ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವ: ।

ದೃಶೇ ವಿಶ್ವಾಯ ಸೂರ್ಯಮ್ । ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಗ್ಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥

ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಶ್ಶತಂ ಜೀವೇಮ ಶರದಶ್ಶತಂ ನಂದಾಮ ಶರದಶ್ಶತಂ ಮೋದಾಮ ಶರದಶ್ಶತಂ ಭವಾಮ ಶರದಶ್ಶತಗ್ಂ ಶೃಣವಾಮ ಶರದಶ್ಶತಂ ಪ್ರಬ್ರವಾಮ ಶರದಶ್ಶತಮಜೀತಾಸ್ಯಾಮ ಶರದಶ್ಶತಂ ಜ್ಯೋಕ್ಚ ಸೂರ್ಯಂ ದೃಶೇ ॥ ಯ ಉದಗಾನ್ಮಹತೋರ್ಣವಾದ್ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ಸವಾ ವೃಷಭೋ ಲೋಹಿತಾಕ್ಷಸ್ಸೂಂರ್ಯೋ ವಿಪಶ್ಚಿನ್ಮನಸಾ ಪುನಾತು ॥

ಸಾಯಂ ಸಂಧ್ಯಾಉಪಸ್ಥಾನದಲ್ಲಿ ಹೇಳಬೇಕಾದ ಮಂತ್ರ –

((ಸಂಜೆ ಉಪಸ್ಥಾನದಲ್ಲಿ, ಪಶ್ಚಿಮಾಭಿಮುಖವಾಗಿ ನಿಂತು ಈ ಮಂತ್ರವನ್ನು ಹೇಳಿ ನಂತರ ದಿಕ್ ನಮಸ್ಕಾರವನ್ನು ಪೂರ್ವದಿಕ್ಕಿನಿಂದ ಆರಂಭಿಸಬೇಕು))

ಓಂ ಇಮಂ ಮೇ ವರುಣ ಶ್ರುಧೀಹವಮದ್ಯಾ ಚ ಮೃಡಯ । ತ್ವಾಮವಸ್ಯುರಾಚಕೇ । ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂಸ ಮಾ ನ ಆಯುಃ ಪ್ರಮೋಷೀಃ ॥

ಯಚ್ಚಿದ್ಧಿ ತೇ ವಿಶೋ ಯಥಾ ಪ್ರದೇವ ವರುಣ ವ್ರತಮ್ । ಮಿನೀಮಸಿ ದ್ಯವಿದ್ಯವಿ । ಯತ್ಕಿಂಚೇದಂ ವರುಣ ದೈವ್ಯೇ ಜನೇಭಿದ್ರೋಹಂ ಮನುಷ್ಯಾಶ್ಚರಾಮಸಿ । ಅಚಿತ್ತೀ ಯತ್ತವ ಧರ್ಮಾಯುಯೋಪಿಮ ಮಾನಸ್ತಸ್ಮಾದೇನಸೋ ದೇವರೀರಿಷಃ । ಕಿತವಾಸೋ ಯದ್ರಿರಿಪುರ್ನದೀವಿ ಯದ್ವಾ ಘಾ ಸತ್ಯಮುತಯನ್ನ ವಿದ್ಮ । ಸರ್ವಾತಾ ವಿಷ್ಯ ಶಿಥಿರೇವ ದೇವಾಥಾ ತೇ ಸ್ಯಾಮ ವರುಣ ಪ್ರಿಯಾಸಃ ॥

ದಿಗ್ದೇವತಾ ನಮಸ್ಕಾರ –

((ಕುರ್ವನ್ ದಿಶೋ ನಮಸ್ಕುರ್ಯಾತ್ ದಿಗೀತಾಂಶ್ಚ ಪೃಥಕ್ ಪೃಥಕ್ ॥ ತೈತ್ತಿರೀಯ ಸಂಧ್ಯಾಭಾಷ್ಯ ॥

((ದಿಗ್ದೇವತಾ ನಮಸ್ಕಾರ ಮಂತ್ರೋಯಂ ಸಂಧ್ಯಯೋರ್ಭವೇತ್ ॥ ಕಾಶ್ಯಪೇನ ಉಕ್ತಂ ॥))

((ಅರ್ಥ – ಮೂರು ಕಾಲಗಳ ಸಂಧ್ಯಾವಂದನೆಯಲ್ಲಿ ಪೂರ್ವಾದಿ ದಿಕ್ ವಂದನೆಯನ್ನು ಹಾಗೂ ದಿಕ್ಕುಗಳಿಗೆ ಅಧಿಪತಿಗಳಾದ ಇಂದ್ರಾದಿ ದೇವತೆಗಳ ವಂದನೆಯನ್ನೂ ಸಹ ಮಾಡತಕ್ಕದ್ದು ॥ ತೈತ್ತಿರೀಯ ಸಂಧ್ಯಾಭಾಷ್ಯ ॥))

((ದಿಗ್ದೇವತಾ ನಮಸ್ಕಾರ ಮಂತ್ರಗಳಾದ ಈ ಮಂತ್ರಗಳನ್ನು ಸಂಧ್ಯಾವಂದನೆಯಲ್ಲಿ ಹೇಳುವುದು ॥ ಕಶ್ಯಪಋಷಿಗಳ ವಚನ ॥))

((ಕೈ ಮುಗಿದುಕೊಂಡು, ಪೂರ್ವಾದಿಯಾಗಿ, ಪ್ರದಕ್ಷಿಣೆಯಾಗಿ, ಆಯಾಯಾ ದಿಕ್ಕುಗಳಿಗೆ ಮುಖಮಾಡಿ ನಿಂತು, ಕೆಳಗಿನ ಮಂತ್ರಗಳನ್ನು ಹೇಳಬೇಕು ॥))

ಮೊದಲ ಪ್ರದಕ್ಷಿಣೆ –

ಓಂ ನಮಃ ಪ್ರಾಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮಃ । (ಪೂರ್ವ)

ನಮೋ ದಕ್ಷಿಣಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮಃ । (ದಕ್ಷಿಣ)

ನಮಃ ಪ್ರತೀಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮಃ । (ಪಶ್ಚಿಮ)

ನಮ॥ ಉದೀಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮ: ।
(ಉತ್ತರ)

ನಮ ಊರ್ಧ್ವಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮ: । (ಮೇಲೆ)

ನಮೋsಧರಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚನಮ: ।
(ಕೆಳಗೆ)

ನಮೋsವಾಂತರಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮ: ॥ (ಮೇಲೆ)

ಎರಡನೇ ಪ್ರದಕ್ಷಿಣೆ –

ಪೂರ್ವೇ ಇಂದ್ರಾಯ ನಮ: । ಆಗ್ನೇಯ್ಯಾಂ ಅಗ್ನಯೇ ನಮ: । ದಕ್ಷಿಣೇ ಯಮಾಯ ನಮ: । ನೈರ್ಋತ್ಯಾಂ ನಿರ್ಋತಯೇ ನಮ: । ಪಶ್ಚಿಮಾಯಾಂ ವರುಣಾಯ ನಮ: । ವಾಯವ್ಯಾಂ ವಾಯವೇ ನಮ: । ಉತ್ತರಾಯಾಂ ಕುಬೇರಾಯ ನಮ: । ಐಶಾನ್ಯಾಂ ಈಶಾನಾಯ ನಮ: । ಊರ್ದ್ವೇ ಬ್ರಹ್ಮಣೇ ನಮ: । ಪಾತಾಲೇ ವಿಷ್ಣವೇ ನಮ: ॥

ಮೂರನೇ ಪ್ರದಕ್ಷಿಣೆ –

ಓಂ ನಮೋ ಗಂಗಾ ಯಮುನಯೋರ್ಮಧ್ಯೇ ಯೇ ವಸಂತಿ ತೇ ಮೇ ಪ್ರಸನ್ನಾತ್ಮಾನಶ್ಚಿರಂಜೀವಿತಂ ವರ್ಧಯಂತಿ ನಮೋ ಗಂಗಾ ಯಮುನಯೋರ್ಮುನಿಭ್ಯಶ್ಚ ನಮೋ ನಮೋ ಗಂಗಾ ಯಮುನಯೋರ್ಮುನಿಭ್ಯಶ್ಚ ನಮ: ॥

((ಬೆಳಿಗ್ಗೆ ಮತ್ತು ಮಧ್ಯಾಹ್ನ 3 ನೇ ಪ್ರದಕ್ಷಿಣೆಯನ್ನು ಮುಗಿಸಿ, ಕೈ ಮುಗಿದುಕೊಂಡು ಪೂರ್ವಕ್ಕೇ ನಿಂತು ಹಾಗೂ ಸಂಜೆ ಪಶ್ಚಿಮಕ್ಕೆ ನಿಂತು ಕೆಳಗಿನ ವಾಕ್ಯಗಳನ್ನು ಹೇಳಬೇಕು ॥))

ಸರ್ವೇಭ್ಯೋ, ದೇವೇಭ್ಯೋ ನಮ: । ಮುನಿಭ್ಯೋ ನಮ: । ಋಷಿಭ್ಯೋ ನಮ: । ಗೋತ್ರ ಪ್ರವರ್ತಕ ಋಷಿಭ್ಯೋ ನಮ: । ಸೂತ್ರಕಾರ ಆಪಸ್ತಂಬಋಷಿಭ್ಯೋ ನಮ: । ಗುರುಭ್ಯೋ ನಮ: । ಮಾತೃಭ್ಯೋ ನಮ: । ಪಿತೃಭ್ಯೋ ನಮ: । ಆಚಾರ್ಯೇಭ್ಯೋ ನಮ: । ಅತಿಥಿ ದೇವತಾಭ್ಯೋ ನಮ: ॥

ಅಭಿವಾದಯೇ (ನಮಸ್ಕಾರ) –

((ಈ ಕೆಳಗೆ ಕೊಟ್ಟಿರುವ ಒಂದು ಗೋತ್ರದ ಉದಾಹರಣೆಯಂತೆಯೇ ಅವರವರ ಗೋತ್ರವನ್ನು ಬಲಕೈಯಿಂದ ಬಲಕಿವಿ ಮತ್ತು ಎಡಕೈಯಿಂದ ಎಡಕಿವಿಗಳನ್ನು ಹಿಡಿದುಕೊಂಡು ಹೇಳಿ, ನಂತರ ಕೆಳಮುಖವಾಗಿರುವ ಎಡಕೈಯ ಮೇಲೆ ಕೆಳಮುಖವಾಗಿರುವ ಬಲಕೈಯನ್ನು ಇಟ್ಟುಕೊಂಡು, ಮುಂದಕ್ಕೆ ಬಗ್ಗಿ ಭೂಮಿಯನ್ನು ಮುಟ್ಟಿ ನಮಸ್ಕರಿಸಿ ಆಮೇಲೆ ಕುಳಿತುಕೊಳ್ಳಬೇಕು ॥))

ಆಂಗಿರಸ ಆಯಾಸ್ಯ ಗೌತಮ ತ್ರಯಾರ್ಷೇಯ ಪ್ರವರಾನ್ವಿತ ಆಯಾಸ್ಯ ಗೌತಮಗೋತ್ರ: । ಆಪಸ್ತಂಬ ಸೂತ್ರ: । ಯಜುಶ್ಶಾಖಾಧ್ಯಾಯೀ । ಶ್ರೀ ಶಕ್ತಿಧರಶರ್ಮಾ ನಾಮ ಅಹಂ ಭೋ ಅಭಿವಾದಯೇ ॥

ಕರ್ಮಸಮಾಪನೆ –

((ಈ ಕೆಳಗಿನ ವಾಕ್ಯಗಳನ್ನು ಹೇಳಿ, ದೇವತಾ ಆಚಮನಪಾತ್ರೆಯ ನೀರನ್ನು ಉದ್ದರಣೆಯಿಂದ ಅರ್ಘ್ಯಪಾತ್ರೆಗೆ ಬಿಡಬೇಕು ॥))

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪ: ಸಂಧ್ಯಾ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಪ್ರಾತ:/ಮಧ್ಯಾಹ್ನ/ಸಾಯಂ ಸಂಧ್ಯೋಪಾಸನಕರ್ಮಣಾ ಭಗವಾನ್ ಸರ್ವಾತ್ಮಕಃ ಶ್ರೀವಾಸುದೇವಃ ಪ್ರೀಯತಾಂ ॥

((ಅರ್ಥ – ಯಾವ ಭಗವಂತನ ಸ್ಮರಣೆ, ನಾಮೋಚ್ಚಾರಣೆ, ಇವುಗಳಿಂದ ತಪಸ್ಸು–ಸಂಧ್ಯಾವಂದನೆ ಮೊದಲಾದ ಕರ್ಮಗಳಲ್ಲಿ, ಶರೀರ, ವಾಕ್, ಮನಸ್ಸು, ಬುದ್ಧಿ, ಇವುಗಳಿಂದಲೂ ಅಜ್ಞಾನ ಸ್ವಭಾವದಿಂದಲೂ ಯಾವ ಯಾವ ಕರ್ಮಗಳನ್ನು ಮಾಡುವೆನೋ ಅವೆಲ್ಲವೂ ಶ್ರೀ ನಾರಾಯಣನ ಪ್ರೇರಣೆಯಿಂದಲೇ ನಡೆಯುವವಾದ್ದರಿಂದ ಎಲ್ಲವೂ ಅವನಿಗೇ ಸೇರಿದ್ದು । ಆದಕಾರಣ ಈ ಕರ್ಮವನ್ನೂ ಅವನಿಗೇ ಸಮರ್ಪಿಸುತ್ತೇನೆ ॥))

ಪ್ರಾಯಶ್ಚಿತ್ತ –

ಮಧ್ಯೇ ಮಂತ್ರ, ತಂತ್ರ, ಸ್ವರ, ವರ್ಣ, ಧ್ಯಾನ, ನಿಯಮ, ನ್ಯೂನ, ಅತಿರಿಕ್ತ, ಲೋಪದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥ ದ್ವಿರಾಚಮ್ಯ ॥

((ಭಗವಂತನ ಹೆಸರನ್ನು ಯಥಾಶಕ್ತಿ ಸಲ (ಸಂಖ್ಯಾ ನಿಯಮವೇನಿಲ್ಲ) ಜಪಿಸುವುದು । ನಂತರ ಕರ್ತೃವಿನ ಆಚಮನಪಾತ್ರೆಯ ನೀರಿನಿಂದ 2 ಸಲ ಆಚಮನವನ್ನು ಮಾಡುವುದು । ಆಮೇಲೆ ಎರಡೂ ಆಚಮನ ಮತ್ತು ಅರ್ಘ್ಯಪಾತ್ರೆಗಳಲ್ಲಿರುವ ನೀರನ್ನು ತುಳಿಯದಿರುವ ಜಾಗದಲ್ಲಿ ಹಾಕಬೇಕು ॥))

((ಅರ್ಥ – ಎಲ್ಲಾ ಕರ್ಮಗಳಲ್ಲಿಯೂ ಉಂಟಾಗಬಹುದಾದ ನ್ಯೂನ, ಅತಿರಿಕ್ತ ದೋಷಗಳೆಲ್ಲವೂ ಯಾವ ಭಗವಂತನ ನಾಮ ಸ್ಮರಣೆಯಿಂದ ಪರಿಹಾರವಾಗುವವೋ ಅವನ ನಾಮಗಳನ್ನು ಜಪಿಸುತ್ತೇನೆ । ನಾನು ಮಾಡಿದ ಕರ್ಮಗಳು ಮಂತ್ರ, ತಂತ್ರ,

ಧ್ಯಾನ, ನಿಯಮ ಇವುಗಳಿಂದ ಏನೇ ಲೋಪವಾಗಿದ್ದರೂ ನಿನ್ನ ನಾಮಜಪದ ಬಲದಿಂದ ಲೋಪವಿಲ್ಲದ್ದಾಗಿ, ಅವು ನಿನಗೆ ಅರ್ಪಿತವಾಗಲಿ ॥))

ಆಸನವಿಧಿ –

((ಯಾವ ಜಾಗದಲ್ಲಿ ಕುಳಿತುಕೊಂಡು ಜಪವನ್ನು ಮಾಡಿರುತ್ತೇವೆಯೋ ಆ ಜಾಗಕ್ಕೆ ನೀರನ್ನು ಪ್ರೋಕ್ಷಿಸಿ, ಆ ಜಾಗವನ್ನು ಹಿಡಿದುಕೊಂಡು ಕೆಳಗಿನ ಮಂತ್ರವನ್ನು ಹೇಳುವುದು । ಹೀಗೆ ಮಾಡದೇ ಜಪ ಮಾಡಿದ ಜಾಗದಿಂದ ಎದ್ದರೆ, ಮಾಡಿರುವಂತಹ ಜಪದ ಫಲವನ್ನು ಇಂದ್ರನು ಅಪಹರಿಸುತ್ತಾನೆ ॥))

ಅಪ್ರೋಕ್ಷಿತಂ ಜಪಸ್ಥಾನೇ ಶಕ್ರೋ ಹರತಿ ತತ್ಫಲಂ । ತನ್ಮೃದಂ ತಿಲಕಂಧೃತ್ವಾ ಬ್ರಹ್ಮಭೂಯಾಯ ಕಲ್ಪತೇ ॥

ಓಂ ಅದ್ಯಾ᳭ನೋ ದೇವ ಸವಿತ: ಪ್ರಜಾವತ್ಸಾವೀಸ್ಸೌಭಗಮ್ । ಪರಾ ದುಷ್ಷ್ವಪ್ನಿಯಗ್ಂ ಸುವ । ವಿಶ್ವಾನಿದೇವ ಸವಿತರ್ದುರಿತಾನಿಪರಾಸುವ । ಯದ್ಭದ್ರಂ ತನ್ಮ ಆಸುವ ॥

((ನಂತರ ತನ್ನ ಹೃದಯವನ್ನು ಮುಟ್ಟಿಕೊಂಡು, ಕೆಳಗಿನ ಮಂತ್ರವನ್ನು ಹೇಳುವುದು ॥))

ಓಂ ಮಯಿ ಮಹೋ ಮಯಿ ಯಶೋ ಮಯೀಂದ್ರಿಯಂ ವಿರ್ಯಮ್ ॥

****

3. ನಿತ್ಯಪೂಜಾಕ್ರಮ

ಪ್ರೋಕ್ಷಣೆ

ಓಂ ಋಚೋ ಅಕ್ಷರೇ ಪರಮೇ ವ್ಯೋಮನ್, ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದು: । ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥

ಪಾದಶ: – ಓಂ ಭೂ: ತತ್ಸವಿತುರ್ವರೇಣ್ಯಂ । ಓಂ ಭುವ: ಭರ್ಗೋ ದೇವಸ್ಯ ಧೀಮಹಿ । ಓಗ್ಂ ಸುವ: ಧಿಯೋಯೋನ: ಪ್ರಚೋದಯಾತ್ ॥

ಅರ್ಧಋಕ್ಷ: – ಓಂ ಭೂ: ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಓಂ ಭುವ: ಧಿಯೋಯೋನ: ಪ್ರಚೋದಯಾತ್ ॥

ಸಂತತ – ಓಗ್ಂಸುವ: ತತ್ಸವಿತುರ್ವರೇಣ್ಯಂ ಭಗೋ ದೇವಸ್ಯ ಧೀಮಹಿ
ಧಿಯೋಯೋನ: ಪ್ರಚೋದಯಾತ್ ॥

ಋಗ್ವೇದ: – ಓಂ ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ ।
ಹೋತಾರಂ ರತ್ನಧಾತಮಮ್ ॥ ಹರಿ: ಓಂ

ಯಜುರ್ವೇದ: – ಓಂ ಇಷೇತ್ವೋರ್ಜೇತ್ವಾ ವಾಯವಸ್ಥೋಪಾಯವಸ್ಸ್ಥ ದೇವ್ವೋ
ವಸ್ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣ ಆಪ್ಯಾಯಧ್ವಮಘ್ನಿಯಾ
ದೇವ ಭಾಗಮೂರ್ಜಸ್ವತೀ: ಪಯಸ್ವತೀ: ಪ್ರಜಾವತೀರನಮೀವಾ
ಅಯಕ್ಷ್ಮಾಮಾವಸ್ತೇನ ಈಶತ ಮಾಘಶಗ್ಂ ಸೋ ರುದ್ರಸ್ಯ ಹೇತಿ: ಪರಿವ್ವೋ
ವೃಣಕ್ತು ಧ್ರುವಾ ಅಸ್ಮಿನ್ಗೋಪತೌ ಸ್ಯಾತ ಬಹ್ವೀರ್ಯಜಮಾನಸ್ಯ ಪಶೂನ್ಪಾಹಿ ॥
ಹರಿ: ಓಂ

ಸಾಮವೇದ: – ಓಂ ಅಗ್ನ ಆಯಾಹಿ ವೀತಯೇ ಗೃಣಾನೋ ಹವ್ಯದಾತಯೇ ।
ನಿಹೋತಾ ಸಥ್ಸಿ ಬರ್ಹಿಷಿ ॥ ಹರಿ: ಓಂ

ಅಥರ್ವಣವೇದ: – ಓಂ ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ ।
ಶಂ ಯೋರಭಿಸ್ರವಂತುನ: ॥ ಹರಿ: ಓಂ

ಬ್ರಹ್ಮಯಜ್ಞಾಂಗ ದೇವಋಷಿಪಿತೃ ತರ್ಪಣವನ್ನು ಕೊಡಲು, ಕೆಳಗಿನಂತೆ ಸಂಕಲ್ಪಿಸಬೇಕು ॥
ಶ್ರೀಪರಮೇಶ್ವರ ಪ್ರೀತ್ಯರ್ಥಂ ಬ್ರಹ್ಮಯಜ್ಞಾಂಗ ದೇವ, ಋಷಿ, ಪಿತೃ ತರ್ಪಣಂ ಕರಿಷ್ಯೇ ॥

ಉಪವೀತಿಯಾಗಿ, ಹಸ್ತದಲ್ಲಿ ದೇವತೀರ್ಥದಿಂದ, ಕೆಳಗಿನ ಒಂದೊಂದು ವಾಕ್ಯಕ್ಕೂ ಒಮ್ಮೊಮ್ಮೆ ನೀರಿನಿಂದ ತರ್ಪಣವನ್ನು ಕೊಡಬೇಕು ॥

ಉಪವೀತಿನಾ, ದೇವತೀರ್ಥೇನ ॥

ಓಂ ಬ್ರಹ್ಮಾದಯೋ ದೇವಾ: ।

1 ತಾನ್ ದೇವಾನ್ ತರ್ಪಯಾಮಿ ।

2 ಸರ್ವಾನ್ ದೇವಾನ್ ತರ್ಪಯಾಮಿ ।

3 ಸರ್ವದೇವಗಣಾನ್ ತರ್ಪಯಾಮಿ ।

4 ಸರ್ವದೇವಪತ್ನೀ: ತರ್ಪಯಾಮಿ ।

5 ಸರ್ವದೇವಗಣಪತ್ನೀ: ತರ್ಪಯಾಮಿ ।

6 ಸರ್ವದೇವಪುತ್ರಾನ್ ತರ್ಪಯಾಮಿ ।

7 ಸರ್ವದೇವಪೌತ್ರಾನ್ ತರ್ಪಯಾಮಿ ।

8 ಭೂರ್ದೇವಂ ತರ್ಪಯಾಮಿ ।

9 ಭುವರ್ದೇವಂ ತರ್ಪಯಾಮಿ ।

10 ಸುವರ್ದೇವಂ ತರ್ಪಯಾಮಿ ।

11 ಭೂರ್ಭುವಸ್ಸುವರ್ದೇವಾನ್ ತರ್ಪಯಾಮಿ ॥

ನಿವೀತಿಯಾಗಿ, ಹಸ್ತದಲ್ಲಿ ಋಷಿತೀರ್ಥದಿಂದ, ಕೆಳಗಿನ ಒಂದೊಂದು ವಾಕ್ಯಕ್ಕೂ ಎರಡುಸಲ ನೀರಿನಿಂದ ತರ್ಪಣವನ್ನು ಕೊಡಬೇಕು ॥

ನಿವೀತಿನಾ, ಋಷಿತೀರ್ಥೇನ, ಸರ್ವತ್ರ ದ್ವಿಸ್ತರ್ಪಣಂ ॥

ಕೃಷ್ಣದ್ವೈಪಾಯನಾದಯೋ ಯೇ ಋಷಯ: ।

1 ತಾನ್ ಋಷೀನ್ ತರ್ಪಯಾಮಿ–ತರ್ಪಯಾಮಿ ।

2 ಸರ್ವಾನ್ ಋಷೀನ್ ತರ್ಪಯಾಮಿ–ತರ್ಪಯಾಮಿ ।

3 ಸರ್ವಋಷಿಗಣಾನ್ ತರ್ಪಯಾಮಿ–ತರ್ಪಯಾಮಿ ।

4 ಸರ್ವಾಋಷಿಪತ್ನೀ: ತರ್ಪಯಾಮಿ–ತರ್ಪಯಾಮಿ ।

5 ಸರ್ವಾಋಷಿಪುತ್ರಾನ್ ತರ್ಪಯಾಮಿ–ತರ್ಪಯಾಮಿ ।

6 ಸರ್ವಾಋಷಿಪೌತ್ರಾನ್ ತರ್ಪಯಾಮಿ–ತರ್ಪಯಾಮಿ ।

7 ಪ್ರಜಾಪತಿಂ ಕಾಂಡಋಷಿಂ ತರ್ಪಯಾಮಿ–ತರ್ಪಯಾಮಿ ।

8 ಸೋಮಂ ಕಾಂಡಋಷಿಂ ತರ್ಪಯಾಮಿ–ತರ್ಪಯಾಮಿ ।

9 ಅಗ್ನಿಂ ಕಾಂಡಋಷಿಂ ತರ್ಪಯಾಮಿ–ತರ್ಪಯಾಮಿ ।

10 ವಿಶ್ವಾನ್ದೇವಾನ್ ಕಾಂಡಋಷೀನ್ ತರ್ಪಯಾಮಿ–ತರ್ಪಯಾಮಿ ।

11 ಸಾಗ್ಂಹಿಕೀರ್ದೇವತಾ ಉಪನಿಷದ: ತರ್ಪಯಾಮಿ–ತರ್ಪಯಾಮಿ ।

12 ಯಾಜ್ಞಿಕೀರ್ದೇವತಾ ಉಪನಿಷದ: ತರ್ಪಯಾಮಿ–ತರ್ಪಯಾಮಿ ।

13 ವಾರುಣೀರ್ದೇವತಾ ಉಪನಿಷದ: ತರ್ಪಯಾಮಿ–ತರ್ಪಯಾಮಿ ।

14 ಹವ್ಯವಾಹನಂ ತರ್ಪಯಾಮಿ–ತರ್ಪಯಾಮಿ ।

15 ವಿಶ್ವಾನ್ದೇವಾನ್ ಕಾಂಡಋಷೀನ್ ತರ್ಪಯಾಮಿ–ತರ್ಪಯಾಮಿ ।

16 ಬ್ರಹ್ಮಾಣಂ ಸ್ವಯಂಭುವಂ ತರ್ಪಯಾಮಿ–ತರ್ಪಯಾಮಿ ।

17 ವಿಶ್ವಾನ್ದೇವಾನ್ ಕಾಂಡಋಷೀನ್ ತರ್ಪಯಾಮಿ–ತರ್ಪಯಾಮಿ ।

18 ಅರುಣಾನ್ ಕಾಂಡಋಷೀನ್ ತರ್ಪಯಾಮಿ–ತರ್ಪಯಾಮಿ ।

19 ಸದಸಸ್ಪತಿಂ ತರ್ಪಯಾಮಿ–ತರ್ಪಯಾಮಿ ॥

ಪ್ರಾಚೀನಾವೀತಿಯಾಗಿ, ಹಸ್ತದಲ್ಲಿ ಪಿತೃತೀರ್ಥದಿಂದ, ಕೆಳಗಿನ ಒಂದೊಂದು ವಾಕ್ಯಕ್ಕೂ ಮೂರುಬಾರಿ ನೀರಿನಿಂದ ತರ್ಪಣವನ್ನು ಕೊಡಬೇಕು ॥

ಪ್ರಾಚೀನಾವೀತಿನಾ, ಪಿತೃತೀರ್ಥೇನ, ಸರ್ವತ್ರ ತ್ರಿಸ್ತರ್ಪಣಂ ॥

1 ಸೋಮ:ಪಿತೃಮಾನ್ ಯಮೋऽಂಗಿರಸ್ವಾನ್ ಅಗ್ನಿಷ್ವಾತ್ತಾ: ಅಗ್ನಿ: ಕವ್ಯವಾಹನಾದಯೋ ಯೇ ಪಿತರ: ತಾನ್ ಪಿತೄನ್ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

2 ಸರ್ವಾನ್ ಪಿತೄನ್ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

3 ಸರ್ವಪಿತೃಗಣಾನ್ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

4 ಸರ್ವಪಿತೃಪತ್ನೀ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

5 ಸರ್ವಪಿತೃಗಣಪತ್ನೀ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

6 ಸರ್ವಪಿತೃಪುತ್ರಾನ್ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

7 ಸರ್ವಪಿತೃಪೌತ್ರಾನ್ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ।

ಉಪವೀತಿಯಿಂದ, ಕೆಳಗಿರುವಂತೆ ಕರ್ಮಸಮಾಪನೆ ಮಾಡಿ ।

ಉಪವೀತಿನಾ ಕರ್ಮಸಮಾಪನಂ ।

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಬ್ರಹ್ಮಯಜ್ಞೇನ, ದೇವ ಋಷಿ ಪಿತೃ ತರ್ಪಣೇನ ಚ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ । ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ಧ್ಯಾನ ನಿಯಮ ನ್ಯೂನ ಅತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ಪವಿತ್ರದ ಗಂಟುಬಿಚ್ಚಿ, ಆಚಮನ ಹಾಗೂ ಆಸನವಿಧಿಗಳನ್ನು ಈ ಕೆಳಗಿನಂತೆ ಮಾಡಬೇಕು ॥

ಆಚಮನಂ, ಆಸನವಿಧಿಂ ಚ ಕೃತ್ವಾ ॥

ಓಂ ಅದ್ಯಾನೋ ದೇವ ಸವಿತಃ ಪ್ರಜಾವತ್ಸಾವೀಸ್ಸೌಭಗಂ । ಪರಾ ದುಶ್ವಷ್ಣಿಯಗ್ಂ ಸುವ । ವಿಶ್ವಾನಿದೇವ ಸವಿತರ್ದುರಿತಾನಿ ಪರಾಸುವ । ಯದ್ಭದ್ರಂ ತನ್ಮ ಆಸುವ ॥

ಮಯಿ ಮಹಃ, ಮಯಿ ಯಶಃ, ಮಯೀಂದ್ರಿಯಂ ವೀರ್ಯಂ ॥

****

6. ಅಮಾವಾಸ್ಯೆ, ಸಂಕ್ರಮಣ ಪುಣ್ಯಕಾಲಗಳಲ್ಲಿ ಆಚರಿಸುವ ದ್ವಾದಶ ಪಿತೃತರ್ಪಣದ ಕ್ರಮ

ಪ್ರೋಕ್ಷಣೆ, ಆಸನವಿಧಿ, ಆಚಮನ, 3 ದರ್ಭೆಯ ಪವಿತ್ರಧಾರಣೆ, ಪ್ರಾಣಾಯಾಮಗಳನ್ನೂ ಸಹ ಮಾಡಬೇಕು ॥

ಆಸನವಿಧಿಂ, ಆಚಮನಂ, ಪವಿತ್ರಧಾರಣಂ, ಪ್ರಾಣಾಯಾಮಂ ಚ ಕೃತ್ವಾ ॥

ಕೆಳಗಿನಂತೆ ಸಂಕಲ್ಪವನ್ನು ಮಾಡಬೇಕು ॥

ಓಂಓಂಓಂ ಶ್ರೀಗೋವಿಂದ ಗೋವಿಂದ ಗೋವಿಂದ, ಮಹಾವಿಷ್ಣೋರಾಜ್ಞೆಯಾ ಪ್ರವರ್ತಮಾನಸ್ಯ, ಅದ್ಯಬ್ರಹ್ಮಣಃ.....ವಿಷ್ಣುನಕ್ಷತ್ರ, ವಿಷ್ಣುಯೋಗ, ವಿಷ್ಣುಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಪುಣ್ಯತಿಥೌ, ಪ್ರಾಚೀನಾವೀತಿ, ಅಸ್ಮತ್ ಪಿತ್ರಾದಿ ದ್ವಾದಶಪಿತೄಣಾಂ ಅಕ್ಷಯ್ಯಪುಣ್ಯಲೋಕಾವಾಪ್ತ್ಯರ್ಥಂ, ಅಸ್ಮಿನ್ (ತೀರ್ಥಕ್ಷೇತ್ರೇ // ಅಮಾವಾಸ್ಯಾಯಾಂ // ಸಂಕ್ರಮಣ,,) ಪುಣ್ಯಕಾಲೇ ತಿಲತರ್ಪಣಂ (ಉಪವೀತಿ) ಕರಿಷ್ಯೇ, ಇತಿಸಂಕಲ್ಪ್ಯ ॥

ಕಲಶಪೂಜೆಯನ್ನು ಮಾಡಿ ।

ಕಲಶ ಪೂಜಾಂ ಕೃತ್ವಾ ॥

ದಕ್ಷಿಣಾಭಿಮುಖವಾಗಿ ಕುಳಿತು, ಪ್ರಾಚೀನಾವೀತಿಯಾಗಿ, ಕೈಯಲ್ಲಿ ಪಿತೃತೀರ್ಥದಲ್ಲಿ, 3 ಸಲ ಎಳ್ಳು, ನೀರಿನಿಂದ ತರ್ಪಣವನ್ನು ಈ ಕೆಳಗಿನಂತೆ ಹೇಳುತ್ತಾ, ಕೊಡಬೇಕು ॥ ಈ ಕೆಳಗೆ ತಿಳಿಸಿರುವ ಸಂಬಂಧಗಳಲ್ಲಿ, ಜೀವಂತ ಇರುವವರಿಗೆ ಕೊಡಬಾರದು, ಮೃತರಾಗಿರುವವರಿಗೆ ಮಾತ್ರ ತರ್ಪಣ ಕೊಡಬೇಕು ॥

1. ಅಸ್ಮತ್‌ಪಿತರಂ, ...ಶರ್ಮಾಣಂ, ...ಗೋತ್ರಂ, ವಸುರೂಪಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಂದೆ) ॥

2. ಅಸ್ಮತ್‌ಪಿತಾಮಹಂ, ...ಶರ್ಮಾಣಂ, ...ಗೋತ್ರಂ, ರುದ್ರರೂಪಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಂದೆಯ ತಂದೆ = ಅಜ್ಜ) ॥

3. ಅಸ್ಮತ್‌ಪ್ರಪಿತಾಮಹಂ, ...ಶರ್ಮಾಣಂ, ...ಗೋತ್ರಂ, ಆದಿತ್ಯರೂಪಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಂದೆಯ ತಂದೆಯ ತಂದೆ = ಮುತ್ತಜ್ಜ) ॥

****

1. ಅಸ್ಮನ್ಮಾತರಂ, ...ನಾಮ್ನೀಂ, ...ಗೋತ್ರಾಂ, ವಸುರೂಪಾಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿ) ॥

2. ಅಸ್ಮತ್ ಪಿತಾಮಹೀಂ, ...ನಾಮ್ನೀಂ, ...ಗೋತ್ರಾಂ, ರುದ್ರರೂಪಾಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಂದೆಯ ತಾಯಿ = ಅಜ್ಜಿ) ॥

3. ಅಸ್ಮತ್ ಪ್ರಪಿತಾಮಹೀಂ, ...ನಾಮ್ನೀಂ, ...ಗೋತ್ರಾಂ, ಆದಿತ್ಯರೂಪಾಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಂದೆಯ ತಂದೆಯ ತಾಯಿ = ಮುತ್ತಜ್ಜಿ) ॥

****

1. ಅಸ್ಮತ್ ಮಾತಾಮಹಂ, ...ಶರ್ಮಾಣಂ, ...ಗೋತ್ರಂ, ವಸುರೂಪಂಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಂದೆ = ಅಜ್ಜ) ॥

2. ಅಸ್ಮತ್ ಮಾತುಃಪಿತಾಮಹಂ, ...ಶರ್ಮಾಣಂ, ...ಗೋತ್ರಂ, ರುದ್ರರೂಪಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಂದೆಯ ತಂದೆ = ಮುತ್ತಜ್ಜ) ॥

3. ಅಸ್ಮತ್ ಮಾತುಃಪ್ರಪಿತಾಮಹಂ, ...ಶರ್ಮಾಣಂ, ...ಗೋತ್ರಂ, ಆದಿತ್ಯರೂಪಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಂದೆಯ ತಂದೆಯ ತಂದೆ = ತಾತಜ್ಜ) ॥

****

1. ಅಸ್ಮತ್ ಮಾತಾಮಹೀಂ, ...ನಾಮ್ನೀಂ, ...ಗೋತ್ರಾಂ, ವಸುರೂಪಾಂಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಾಯಿ = ಅಜ್ಜಿ) ॥

2. ಅಸ್ಮತ್ ಮಾತುಃಪಿತಾಮಹೀಂ, ...ನಾಮ್ನೀಂ, ...ಗೋತ್ರಾಂ, ರುದ್ರರೂಪಾಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಂದೆಯ ತಾಯಿ = ಮುತ್ತಜ್ಜಿ) ॥

3. ಅಸ್ಮತ್ ಮಾತುಃಪ್ರಪಿತಾಮಹೀಂ, ...ನಾಮ್ನೀಂ, ...ಗೋತ್ರಾಂ, ಆದಿತ್ಯರೂಪಾಂ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ । (ನನ್ನ ತಾಯಿಯ ತಂದೆಯ ತಂದೆಯ ತಾಯಿ = ತಾತಜ್ಜಿ) ॥

****

ನಮ್ಮನಮ್ಮ ವಂಶಗಳಲ್ಲಿ ಮೃತರಾದ ತಿಳಿದಿರುವ, ತಿಳಿಯದಿರುವ ಸಮಸ್ತರಿಗೂ ಈ ಕೆಳಗಿನ ಶ್ಲೋಕದಿಂದ ತರ್ಪಣವನ್ನು ಕೊಡಬೇಕು ॥

ಆಬ್ರಹ್ಮಸ್ತಂಬಪರ್ಯಂತಂ ದೇವ ಋಷಿ ಪಿತೃ ಮಾನವಾಃ ।
ತೃಪ್ಯಂತು ಪಿತರಸ್ಸರ್ವೇ ಪಿತೃಮಾತಾಮಹಾದಯಃ ।
ಅತೀತ ಕುಲಕೋಟೀನಾಂ ಸಪ್ತದ್ವೀಪ ನಿವಾಸಿನಾಂ ।
ಆಬ್ರಹ್ಮ ಭುವನಾಲ್ಲೋಕಾದಿದಮಸ್ತು ತಿಲೋದಕಂ ॥

ಈ ಕೆಳಗಿನ ಶ್ಲೋಕವನ್ನು ಹೇಳಿ, ವಸ್ತ್ರಕ್ಕೆ ನೀರು ಹಾಕಿಕೊಂಡು, ಅದನ್ನು ಹಿಂಡಿ ತರ್ಪಣವನ್ನಾಗಿ ಕೊಡಬೇಕು ॥

ಯೇಕೇಚಾಸ್ಮತ್ ಕುಲೇ ಜಾತಾಃ ಅಪುತ್ರಾ ಗೋತ್ರಿಣೋ ಮೃತಾಃ ।
ತೇ ಗೃಹ್ಣಂತು ಮಾಯಾದತ್ತಂ ವಸ್ತ್ರ ನಿಷ್ಪೀಡನೋದಕಂ ॥

ಉಪವೀತಿಯಾಗಿ, ಪೂರ್ವಾಭಿಮುಖವಾಗಿ ಕುಳಿತು, ಈ ಕೆಳಗಿನಂತೆ ಹೇಳಿ, ಕರ್ಮಸಮಾಪನೆಯನ್ನು ಮಾಡಬೇಕು ॥

ಉಪವೀತಿನಾ, ಅನೇನ ಮಯಾಆಚರಿತ ತಿಲತರ್ಪಣೇನ, ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ । ಮಧ್ಯೇ ಮಂತ್ರ, ತಂತ್ರ, ಸ್ವರ, ವರ್ಣ, ಧ್ಯಾನ, ನಿಯಮ,

ನ್ಯೂನ, ಅತಿರಿಕ್ತ, ಲೋಪದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ಪವಿತ್ರದ ಗಂಟುಬಿಚ್ಚಿ, ಕರ್ತೃವಿನ ಆಚಮನಪಾತ್ರೆಯ ನೀರಿನಿಂದ ಆಚಮನವನ್ನೂ, ಆಸನವಿಧಿಗಳನ್ನೂ ಮಾಡುವುದು ॥

ಪವಿತ್ರಂ ವಿಸೃಜ್ಯ, ಆಚಮನಂ, ಆಸನವಿಧಿಂ ಚ ಕೃತ್ವಾ ॥

ಸೂಚನೆ –

ಗ್ರಹಣ, ಪಿತೃಪಕ್ಷ, ಮಹಾಲಯಅಮಾವಾಸ್ಯೆ, ಮಧ್ಯಅಷ್ಟಮಿ(ಪಿತೃಪಕ್ಷದ ಅಷ್ಟಮಿ), ಮಹಾಭರಣಿ(ಪಿತೃಪಕ್ಷದಲ್ಲಿ ಬರುವ ಭರಣಿ) ಇವಿಷ್ಟರಲ್ಲಿಯೂ ಮೇಲೆ ತಿಳಿಸಿರುವ ದ್ವಾದಶ ಪಿತೃಗಳ ಜೊತೆಗೆ ಕಾರುಣ್ಯ ಪಿತೃಗಳನ್ನೂ ಸೇರಿಸಿ, ಸರ್ವಪಿತೃ ತರ್ಪಣವನ್ನು ಕೊಡುತ್ತಾರೆ । ಹೇಗೆಂದರೆ –

1. ಪಿತೃವ್ಯಮಾತುಳಾದಿ ಸರ್ವಕಾರುಣ್ಯಪಿತೃಣಾಂ ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ॥

2. ಪಿತೃವಂಶೀಯ ಮಾತೃವಂಶೀಯ ಯೇ ಚಾನ್ಯೇ ಮತ್ತ ಉದಕಂ ಅರ್ಹಂತಿ ತಾನ್ ಸ್ವಧಾನಮ: ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ॥

3. ಆಬ್ರಹ್ಮಸ್ತಂಭ ಪರ್ಯಂತಂ ಜಗತ್ತೃಪ್ಯತು–ತೃಪ್ಯತು–ತೃಪ್ಯತು ॥

****

7. ಶಕಲ ಹೋಮ:

ತೈತ್ತಿರೀಯ ಮಹಾನಾರಾಯಣ ಉಪನಿಷದಿ, ಏನ: ಅಪನೋದನಾರ್ಥಂ ಏತಾ: ಮಂತ್ರಾ: ಉಚ್ಯಂತೇ । ಇತ್ಯತ: ವೈಶ್ವದೇವಕರ್ಮಣ: ಪ್ರಾಕ್ ಏತಾನ್ ಶಕಲಹೋಮಾನ್ ಕುರ್ವಂತಿ । ಆಹತ್ಯ ಏಕವಿಂಶತಿ ಮಂತ್ರೈ: ಏಕವಿಂಶತಿ ಹೋಮಾ: ಭವಂತಿ ॥

ಎಲ್ಲಾ ಪಾಪಗಳನ್ನೂ ಕಳೆದುಕೊಳ್ಳುವುದಕ್ಕಾಗಿಯೇ ವಿಶೇಷವಾಗಿ ಈ ಶಕಲಹೋಮಗಳನ್ನು ಕೃಷ್ಣಯಜುರ್ವೇದ ಆರಣ್ಯಕದ ಮಹಾನಾರಾಯಣ ಉಪನಿಷತ್ತಿನಲ್ಲಿ ಹೇಳಿರುವುದರಿಂದ, ಈ ಶಕಲಹೋಮವು ವೈಶ್ವದೇವಕರ್ಮದ ಅಂಗವಲ್ಲದಿದ್ದರೂ ಕೂಡ, ಎಲ್ಲಾ ರೀತಿಯ ಪಾಪಗಳ ಪ್ರಾಯಶ್ಚಿತ್ತವೇ ಈ ಶಕಲಹೋಮದ ಉದ್ದೇಶವಾಗಿರುವುದರಿಂದ,, ವೈಶ್ವದೇವಹೋಮಕ್ಕಿಂತ ಮೊದಲು ಈ ಶಕಲಹೋಮವನ್ನು ಮಾಡಿ, ನಂತರ ವೈಶ್ವದೇವಹೋಮವನ್ನು ಮಾಡುವುದು ಉಚಿತವೇ ಆಗಿದೆ । ಹಾಗಾಗಿ ಇಲ್ಲಿ ಈ ಹೋಮದ ಕ್ರಮವನ್ನು ಕೊಡಲಾಗುತ್ತಿದೆ । ದೇವಕೃತ:.....,ಎಂಬ ಮಂತ್ರವೇ ಮೊದಲಾಗಿ, 21 ಮಂತ್ರಗಳಿಂದ 21 ಸಮಿತ್ತುಗಳನ್ನು ಒಂದೊಂದು ಮಂತ್ರಕ್ಕೆ ಒಂದೊಂದರಂತೆ, ಅಗ್ನಿಯಲ್ಲಿ ಹೋಮಿಸಬೇಕು । ಔಪಾಸನದ ಅಗ್ನಿಯಲ್ಲಾದರೂ ಹೋಮಿಸಬಹುದು ಅಥವಾ ವೈಶ್ವದೇವಕ್ಕೆ ಅನ್ನವನ್ನು ಮಾಡುವ ಅಡುಗೆಯ(ಪಾಚಕಾಗ್ನಿ) ಅಗ್ನಿಯಲ್ಲಾದರೂ ಈ ಶಕಲಹೋಮವನ್ನು ಮಾಡಬಹುದು ॥

ಆಸನವಿಧಿಂ, ಆಚಮನಂ, ಪವಿತ್ರಧಾರಣಂ, ಪ್ರಾಣಾನಾಯಮಂ ಚ ಕೃತ್ವಾ । ಮಮಉಪಾತ್ತ.....ಪ್ರೀತ್ಯರ್ಥಂ, ಸಕಲಪಾಪ ಪರಿಹಾರಾರ್ಥಂ ಶಕಲ ಹೋಮಂ ಕರಿಷ್ಯೇ – ಇತಿ ಸಂಕಲ್ಪ್ಯ ॥

ಪ್ರೋಕ್ಷಣೆ, ಆಸನವಿಧಿ, ಆಚಮನ, ಪವಿತ್ರಧಾರಣೆ, ಪ್ರಾಣಾಯಾಮಗಳನ್ನೂ ಕೂಡ ಮಾಡಿ । ಈ ಮೇಲಿನಂತೆ ಸಂಕಲ್ಪವನ್ನು ಮಾಡಬೇಕು ॥

ಅಗ್ನಿಂಧ್ಯಾತ್ವಾ ಪರಿಷಿಚ್ಯ । ಹೋಮಂ ಕುರ್ಯಾತ್ ॥

ಅಗ್ನಿದೇವನನ್ನು ಧ್ಯಾನಿಸಿ, ಪರಿಷೇಚನವನ್ನು ಮಾಡಿ । ಈ ಕೆಳಗಿರುವ ಮಂತ್ರಗಳಿಂದ ಸಮಿತ್ ಹೋಮವನ್ನು ಮಾಡಬೇಕು ॥

೧. ದೇವಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೨. ಮನುಷ್ಯಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೩. ಪಿತೃಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೪. ಆತ್ಮಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೫. ಓಂ ಅನ್ಯಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೬. ಓಂ ಅಸ್ಮತ್ಕೃತಸ್ಯೈನಸೋಽವಯಜನಮಸಿ ಸ್ವಾಹಾ ॥

೭. ಓಂ ಯದ್ದಿವಾ ಚ ನಕ್ತಂ ಚೈನಶ್ಚಕೃಮ ತಸ್ಯಾವಯಜನಮಸಿ ಸ್ವಾಹಾ ॥

೮. ಓಂ ಯದ್ಸ್ವಪಂತಶ್ಚ ಜಾಗ್ರತಶ್ಚೈನಶ್ಚಕೃಮ ತಸ್ಯಾವಯಜನಮಸಿ ಸ್ವಾಹಾ ॥

೯. ಓಂ ಯದ್ಸುಷುಪ್ತಶ್ಚ ಜಾಗ್ರತಶ್ಚೈನಶ್ಚಕೃಮ ತಸ್ಯಾವಯಜನಮಸಿ ಸ್ವಾಹಾ ॥

೧೦. ಓಂ ಯದ್ವಿದ್ವಾಗ್ಂಸಶ್ಚಾವಿದ್ವಾಗ್ಂಸಶ್ಚೈನಶ್ಚಕೃಮ ತಸ್ಯಾವಯಜನಮಸಿ ಸ್ವಾಹಾ ॥

೧೧. ಓಂ ಏನಸ ಏನಸೋಽವಯಜನಮಸಿ ಸ್ವಾಹಾ ॥

೧೨. ಓಂ ಪಾಹಿ ನೋ ಅಗ್ನ ಏನಸೇ ಸ್ವಾಹಾ ॥

೧೩. ಓಂ ಪಾಹಿ ನೋ ವಿಶ್ವವೇದಸೇ ಸ್ವಾಹಾ ॥

೧೪. ಓಂ ಯಜ್ಞಂ ಪಾಹಿ ವಿಭಾವಸೋ ಸ್ವಾಹಾ ॥

೧೫. ಓಂ ಸರ್ವಂ ಪಾಹಿ ಶತಕ್ರತೋ ಸ್ವಾಹಾ ॥

೧೬. ಓಂ ಭೂಃ ಸ್ವಾಹಾ ॥

೧೭. ಓಂ ಭುವಃ ಸ್ವಾಹಾ ॥

೧೮. ಓಗ್ಂ ಸುವಃ ಸ್ವಾಹಾ ॥

೧೯. ಓಂ ಭೂರ್ಭುವಸ್ಸುವಃ ಸ್ವಾಹಾ ॥

೨೦. ಓಂ ಕಾಮೋಕಾರ್ಷೀನ್ನಮೋ ನಮಃ । ಕಾಮೋಕಾರ್ಷೀತ್ಕಾಮಃ ಕರೋತಿ ನಾಹಂ ಕರೋಮಿ ಕಾಮಃ ಕರ್ತಾ ನಾಹಂ ಕರ್ತಾ ಕಾಮಃ ಕಾರಯಿತಾ ನಾಹಂ ಕಾರಯಿತಾ ಏಷ ತೇ ಕಾಮಕಾಮಾಯ ಸ್ವಾಹಾ ॥

೨೧. ಓಂ ಮನ್ಯುರಕಾರ್ಷೀನ್ನಮೋ ನಮಃ । ಮನ್ಯುರಕಾರ್ಷೀನ್ಮನ್ಯುಃ ಕರೋತಿ ನಾಹಂ ಕರೋಮಿ ಮನ್ಯುಃ ಕರ್ತಾ ನಾಹಂ ಕರ್ತಾ ಮನ್ಯುಃ ಕಾರಯಿತಾ ನಾಹಂ ಕಾರಯಿತಾ ಏಷ ತೇ ಮನ್ಯೋ ಮನ್ಯವೇ ಸ್ವಾಹಾ ॥

ಉತ್ತರಪರಿಷೇಚನಂ ಕೃತ್ವಾ । ಕರ್ಮಸಮಾಪನಂ, ಆಚಮನಂ, ಆಸನವಿಧಿಂ ಚ ಕುರ್ಯಾತ್ ॥

ಅಗ್ನಿಗೆ ಉತ್ತರಪರಿಷೇಚನವನ್ನು ಮಾಡಿ । ಕರ್ಮಸಮಾಪನೆ, ಆಚಮನ ಹಾಗೂ ಆಸನವಿಧಿಗಳನ್ನೂ ಮಾಡುವುದು ॥

****

8. ವೈಶ್ವದೇವ ಪ್ರಯೋಗ:

ಸುದರ್ಶನ ಕಾರಿಕೆಯಲ್ಲಿ ಈ ವೈಶ್ವದೇವದ ಸ್ವರೂಪವು ಈ ರೀತಿ ಹೇಳಿದೆ –

ಅಥ ವಕ್ಷ್ಯೇ ವೈಶ್ವದೇವಂ ಧರ್ಮೋಕ್ತಂ ತತ್ಪ್ರಸಂಗತ: । ಪೂರ್ಣೇವಿವಾಹೇ ಶಯನಂ ದ್ವಾದಶಾಹಂ ಅಧಶ್ಶಯ್ಯೋ: ಬ್ರಹ್ಮಚರ್ಯಂ ವರ್ಜಿನಂ ಕ್ಷಾರಸ್ಯ ಲವಣಸ್ಯ ಚ । ದಂಪತ್ಯೋರುಪವಾಸಸ್ಯಾತ್ ಏಕರಾತ್ರಮತ: ಪರಂ । ಪ್ರಶಸ್ತೇಹನ್ಯಥಾರಂಭ: ಚರಿತ್ಯೈವಂ ವ್ರತಂ ಭವೇತ್ ॥

ವಿವಾಹವಾದ 4 ದಿನಗಳ ನಂತರ 12 ದಿನ ವಧೂವರರು (ದಂಪತಿಗಳು) ನೆಲದ ಮೇಲೆ ಮಲಗಬೇಕು । ಬ್ರಹ್ಮಚರ್ಯದಲ್ಲಿರಬೇಕು ಮತ್ತು ಉಪ್ಪು, ಖಾರಗಳಿಂದ ಕೂಡಿದ ಆಹಾರವನ್ನು ತಿನ್ನಬಾರದು । ನಂತರ 13 ನೇ ದಿನ 1 ರಾತ್ರಿ ಉಪವಾಸ, ನಂತರ ಪ್ರಶಸ್ತವಾದ ಶುಭದಿನದಂದು ವೈಶ್ವದೇವವನ್ನು ಆರಂಭಿಸಬೇಕು । ಹೀಗೆ ಆರಂಭಿಸುವಾಗ ಮಾತ್ರ ಸ್ಥಾಲೀಪಾಕವನ್ನು ಮಾಡಿಕೊಂಡು ಆರಂಭಿಸಬೇಕು, ಪ್ರತಿದಿನವೂ ವೈಶ್ವದೇವಕ್ಕಿಂತ ಮೊದಲು ಸ್ಥಾಲೀಪಾಕವನ್ನು ಮಾಡುವುದು ಬೇಕಿಲ್ಲ । ಇದು ವೈಶ್ವದೇವವ್ರತದ ಆರಂಭ ಎನಿಸಿಕೊಳ್ಳುತ್ತದೆ ॥

ಆಸನವಿಧಿಂ, ಆಚಮನಂ, ಪವಿತ್ರಧಾರಣಂ, ಪ್ರಾಣಾಯಾಮಂ, ದೀಪಪೂಜಾಂ ಚ ಕೃತ್ವಾ ॥

ಪ್ರೋಕ್ಷಣೆ, ಆಸನವಿಧಿ, ಆಚಮನ, ಪವಿತ್ರಧಾರಣೆ, ಪ್ರಾಣಾಯಾಮ, ದೀಪಪೂಜೆಗಳನ್ನೂ ಮಾಡಿ ॥

ಸ್ಥಾಲೀಪಾಕದ ಸಂಕಲ್ಪ –

ಶುಭೇ ಶೋಭನೇಮುಹೂರ್ತೇ.....ಮಮಉಪಾತ್ತ.....ಪ್ರೀತ್ಯರ್ಥಂ, ವೈಶ್ವದೇವಸಿದ್ಧ್ಯರ್ಥಂ, ಸ್ಥಾಲೀಪಾಕಂ ಕರಿಷ್ಯೇ, ಇತಿ ಸಂಕಲ್ಪ್ಯ ॥

ಈ ಮೇಲಿರುವಂತೆ ವೈಶ್ವದೇವಸ್ಥಾಲೀಪಾಕಕ್ಕೆ ಸಂಕಲ್ಪ ಮಾಡಬೇಕು ॥

ಷಟ್ಪಾತ್ರಪ್ರಯೋಗೇಣ ಪಾರ್ವಣೋ ವೈಶ್ವದೇವಸ್ಥಾಲೀಪಾಕಂ ಕೃತ್ವಾ । ಜಯಾದಿ ಪರಿಷೇಚನಾಂತಂ ಕುರ್ಯಾತ್ ॥

(ಪರ್ವದ ದೇವತೆಗಳೇ, ಅಂದರೆ – ಅಗ್ನಯೇ ಸ್ವಾಹಾ, ಅಗ್ನಯೇ ಸ್ವಿಷ್ಟಕೃತೇಸ್ವಾಹಾ ಇವರೇ ಇಲ್ಲಿಯೂ ದೇವತೆಗಳು) ಪ್ರತಿಪರ್ವದಂತೆ ಸ್ಥಾಲೀಪಾಕವನ್ನು ಔಪಾಸನಾಗ್ನಿ ಅಥವಾ ಅಡುಗೆ ಅಗ್ನಿಯಲ್ಲಿ ಷಟ್ಪಾತ್ರಪ್ರಯೋಗದಿಂದ ಮಾಡಿ । ಜಯಾದಿಯೇ ಮೊದಲಾಗಿ ಪರಿಷೇಚನಾಂತದವರೆಗೆ ಪ್ರಯೋಗವನ್ನು ಮಾಡಿ ಕರ್ಮವನ್ನು ಮುಗಿಸುವುದು ॥

ಇತ:ಪರಂ ಯಾವಜ್ಜೀವ ಪರ್ಯಂತಂ ಗೃಹಪಾಕೇನ ವೈಶ್ವದೇವಂ ಕುರ್ಯು:॥

ಇಲ್ಲಿಂದಮುಂದೆ ಜೀವನಪರ್ಯಂತವಾಗಿ ಮನೆಯಲ್ಲಿ ಮಾಡಿದ ಅನ್ನದಿಂದ ವೈಶ್ವದೇವ ಕರ್ಮವನ್ನು ಮಾಡುತ್ತಿರಬೇಕು ॥

ವೈಶ್ವದೇವ ಸಂಕಲ್ಪ –

ಶುಭೇ ಶೋಭನೇ ಮುಹೂರ್ತೇ.....ಮಮ ಉಪಾತ್ತ.....ಪ್ರೀತ್ಯರ್ಥಂ, ಆತ್ಮಶುದ್ಧ್ಯರ್ಥಂ, ಅನ್ನಶುದ್ಧ್ಯರ್ಥಂ, ಪಂಚಸೂನ ಪಾಪ ಅಪನೋದನಾರ್ಥಂ, ಪ್ರಾತ:/ಸಾಯಂ ವೈಶ್ವದೇವಾಖ್ಯಕರ್ಮ ಕರಿಷ್ಯೇ, ಇತಿ ಸಂಕಲ್ಪ್ಯ ॥

ಮೇಲಿನಂತೆ ಸಂಕಲ್ಪವನ್ನು ಹೇಳುತ್ತಾ, ಪರಮೇಶ್ವರನ ಪ್ರೀತ್ಯರ್ಥವಾಗಿ, ಛೇದನ–ಭೇದನ–ಪಾಕ–ಪೇಶಣ–ಮಾರ್ಜನ ಈ 5 ರೀತಿಯ (ಪಂಚಸೂನ) ಪಾಪಗಳನ್ನು ಕಳೆದುಕೊಳ್ಳಲು ಬೆಳಿಗ್ಗೆ / ಸಂಜೆ ವೈಶ್ವದೇವ ಎಂಬ ಕರ್ಮವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು ॥

ತತ್ ಪತ್ನ್ಯಾಹ್ಯನ್ನ ಸಂಸ್ಕರ್ತಾ ತಿಷ್ಠನ್ ಸಿದ್ಧೇನ ಏವ ತು । 'ಭೂತಂ' ಇತಿ ಸ್ವಾಮಿನೇ ಪ್ರಬ್ರೂಯಾತ್ ಪ್ರತ್ಯುತ್ತರಂ ತು ಸಹ । 'ತತ್ಸುಭೂತಂ ವಿರಾಡನ್ನಂ ತನ್ಮಾಕ್ಷಾಯಿ' ಇತಿ ಸಂವದೇತ್ । ಪಚನೇ ವೈಶ್ವದೇವಸ್ಯಾತ್ ನ ಸ್ಯಾತ್ ಔಪಾಸನೇ ಯದಿ । ಯತ್ರ ಕ್ವಚೋಪಿ ತಂ ಚ ಉಪಸಮಾಧಾಯ ವಿಧಾನತ: ॥

ನಂತರ ಪತ್ನಿಯ ಜೊತೆ ಅನ್ನವನ್ನು ಮಾಡುವಂತಹ ಅಡುಗೆಯವನು ನಿಂತುಕೊಂಡು, ಅನ್ನವಾದ ನಂತರ ಯಜಮಾನನಿಗೆ 'ಭೂತಂ' ಎಂದು ಹೇಳಬೇಕು, ಅದಕ್ಕೆ ಯಜಮಾನನು ಉತ್ತರವಾಗಿ 'ತತ್ಸುಭೂತಂ ವಿರಾಡನ್ನಂ ತನ್ಮಾಕ್ಷಾಯಿ' ಅಂದರೆ ಚೆನ್ನಾಗಿ ಆಗಲಿ, ಹಾಗೂ ವಿರಾಟ್ಸ್ವರೂಪವಾದ ಅನ್ನವು ಕ್ಷಯಿಸದಿರಲಿ ಎಂದು ಹೇಳಬೇಕು । ಅಡುಗೆಯನ್ನು ಮಾಡುವ ಅಗ್ನಿಯಲ್ಲಿ ವೈಶ್ವದೇವ ಕರ್ಮವನ್ನು ಮಾಡುವುದಾದರೆ, ಶುದ್ಧಿಯಾದ ಎಲ್ಲಿಯಾದರೊಂದು ಕಡೆ ಆ ಅಡುಗೆ ಮಾಡುವ ಅಗ್ನಿಯನ್ನು ಉಪಸಮಾಧಾನ (ಇಟ್ಟು) ಮಾಡಿಕೊಂಡು, (ಔಪಾಸನಾಗ್ನಿಯಲ್ಲೂ ಮಾಡಬಹುದು) ಊಟ ಮಾಡುವಂತಹ ಯಾವ ಅನ್ನವಿದೆಯೋ ಅದನ್ನು ಹೋಮಕ್ಕೆ ಸಿದ್ಧಪಡಿಸಬೇಕು ॥

1. ಅಶನೀಯಂ ಯದನ್ನಸ್ಯಾತ್ ಹೋಮಾರ್ಥಂ ಕಲ್ಪಯೇತ್ತತ: । ಹವಿಷ್ಯಮನ್ನಂ ಏಕಸ್ಮಿನ್ ಪಾತ್ರೇ ಕಿಂಚಿತ್ತಥಾಪರೇ ॥ (ಹೋಮಕ್ಕೆ)

ಊಟಮಾಡುವಂತಹ ಯಾವ ಅನ್ನವಿದೆಯೋ (ಉಪ್ಪು, ಖಾರಯಿಲ್ಲದ) ಅದನ್ನು ಹೋಮಾರ್ಥದ ಅನ್ನವಾಗಿ ಒಂದು ಪಾತ್ರೆಯಲ್ಲಿ, ಮತ್ತೆ ಸ್ವಲ್ಪಅನ್ನವನ್ನು ಇನ್ನೊಂದು ಪಾತ್ರೆಯಲ್ಲಿ ಇಡಬೇಕು । ಇದು ಹೋಮದ ಹವಿಸ್ಸಿಗೆ ಯೋಗ್ಯವಾದ ಮೊದಲನೇ ಭಾಗ ॥ (ಹೋಮಕ್ಕೆ)

2. ಹವಿಷ್ಯಂ ಕ್ಷಾರ ಲವಣ ಪರಾನ್ನೇನ ಯುತಂ ತಥಾ ॥ (ಬಲಿಗಳಿಗೆ ಮತ್ತು ಭೂತಯಜ್ಞಕ್ಕೆ)

ಹೋಮಾರ್ಥದ ಅನ್ನದ ಸ್ವಲ್ಪ ಭಾಗ ಮತ್ತು ಇನ್ನೊಂದು ಪಾತ್ರೆಯಲ್ಲಿರುವ ಅನ್ನದ ಸ್ವಲ್ಪ ಭಾಗವನ್ನು ತೆಗೆದುಕೊಂಡು ಬಲಿಗೋಸ್ಕರವಾಗಿ ಮತ್ತೊಂದು ಪಾತ್ರೆಯಲ್ಲಿ ಇಡುವುದು । ಇದು ಎರಡನೇಭಾಗ ॥ (ಬಲಿಗಳಿಗೆ ಮತ್ತು ಭೂತಯಜ್ಞಕ್ಕೆ)

3. ದೇವಯಜ್ಞಾರ್ಥಂ ತೃತೀಯಂ ಕಲ್ಪಯೇತ್ ತಥಾ ॥ (ದೇವಯಜ್ಞಕ್ಕೆ)

ನಂತರ ದೇವಯಜ್ಞಕ್ಕಾಗಿ, ಮೊದಲನೇ ಭಾಗದಿಂದ ಸ್ವಲ್ಪ ಅನ್ನವನ್ನು ತೆಗೆದು ಮತ್ತೊಂದು ಪಾತ್ರೆಯಲ್ಲಿ ಇಡುವುದು । ಇದು ಮೂರನೇಭಾಗ ॥ (ದೇವಯಜ್ಞಕ್ಕೆ)

4. ಗೃಹ್ಣೀಯಾತ್ ಸರ್ವತ: ಕಿಂಚಿಚ್ಚತುರ್ಥೇ ಗ್ರಾರ್ಥಮೇವತತ್ ॥ (ಪಿತೃಯಜ್ಞಕ್ಕೆ)
ಮೊದಲ 3 ಭಾಗಗಳಿಂದ ಸ್ವಲ್ಪ ಸ್ವಲ್ಪ ಅನ್ನವನ್ನು ತೆಗೆದುಕೊಂಡು, ಗ್ರಾರ್ಥಕ್ಕೋಸ್ಕರವಾಗಿ ಇನ್ನೊಂದು ಪಾತ್ರೆಯಲ್ಲಿ ಇಡುವುದು । ಇದು ನಾಲ್ಕನೇಭಾಗ ॥ (ಪಿತೃಯಜ್ಞಕ್ಕೆ)

5. ಮನುಷ್ಯಯಜ್ಞಾರ್ಥಂ ಇತಿ ಸರ್ವತೋನ್ನಂ ತು ಪಂಚಮೇ ॥ (ಮನುಷ್ಯಯಜ್ಞಕ್ಕೆ)
ಮೊದಲ 4 ಭಾಗಗಳಿಂದಲೂ ಸ್ವಲ್ಪ ಸ್ವಲ್ಪ ಅನ್ನವನ್ನು ತೆಗೆದುಕೊಂಡು ಇನ್ನೊಂದು ಪಾತ್ರೆಯಲ್ಲಿ ಇಟ್ಟುಕೊಂಡು ಮನುಷ್ಯಯಜ್ಞವನ್ನು ಮಾಡುವುದು । ಇದು ಐದನೇಭಾಗ ॥ (ಮನುಷ್ಯಯಜ್ಞಕ್ಕೆ)

ಹೋಮ: –

ಅಗ್ನಿಂಧ್ಯಾಯಾಮಿ ॥

ಈ ಕೆಳಗಿನ ಮಂತ್ರಗಳಿಂದ ಅಗ್ನಿಯನ್ನು ಧ್ಯಾನಿಸಬೇಕು ॥

ಓಂ ಚತ್ವಾರಿಶೃಂಗಾ ತ್ರಯೋ ಅಸ್ಯ ಪಾದಾ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ । ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಗ್ಂ ಆವಿವೇಶ ॥

ಓಂ ಏಷ ಹಿ ದೇವ: ಪ್ರದಿಶೋsನು ಸರ್ವಾ: ಪೂರ್ವೋ ಹಿ ಜಾತ: ಸ ಉ ಗರ್ಭೇ ಅಂತ: । ಸ ವಿಜಾಯಮಾನ: ಸ ಜನಿಷ್ಯಮಾಣ: ಪ್ರತ್ಯಙ್ಮುಖಾ: ತಿಷ್ಠತಿ ವಿಶ್ವತೋ ಮುಖ: ॥ ಹೇ ಅಗ್ನೇ ಪ್ರಾಙ್ಮುಖೋ ದೇವ, ಪ್ರತ್ಯಙ್ಮುಖಸ್ಸನ್, ಮಮ ಅಭಿಸಮ್ಮುಖೋ ಭವ ॥

ಅಗ್ನಿಂ ಪರಿಷಿಚ್ಯ ॥

ಅಗ್ನಿಯನ್ನು ಈ ಕೆಳಗಿನ ಮಂತ್ರದಿಂದ ಪರಿಷೇಚನ ಮಾಡಬೇಕು ॥

ಅದಿತೇऽನುಮನ್ಯಸ್ವ । ಅನುಮತೇऽನುಮನ್ಯಸ್ವ । ಸರಸ್ವತೇऽನುಮನ್ಯಸ್ವ । ದೇವಸವಿತಃಪ್ರಸುವ ॥

ಅಂಗುಷ್ಠಪರ್ವ ಮಾತ್ರಂ ಷಡನ್ನಾನ್ ಪ್ರಥಮ ಕಲ್ಪಿತ: । ಅಗ್ನಯೇ ಸ್ವಾಹೇತಿ ಷಡ್ಭಿ: ಜುಹುಯಾತ್ ಪಾಹಿನಾಹುತೀ: ॥

ನಂತರ ಮೊದಲ ಭಾಗದಿಂದ, ಹೆಬ್ಬೆಟ್ಟು ಗಾತ್ರದಷ್ಟು ಅನ್ನವನ್ನು ತೆಗೆದುಕೊಂಡು, ಅಗ್ನಯೇ ಸ್ವಾಹಾ ಮುಂತಾದ ಕೆಳಗಿನ 6 ಮಂತ್ರಗಳಿಂದ ಅಗ್ನಿಯಲ್ಲಿ 6 ಹೋಮವನ್ನು ಕೈಯಿಂದ ಮಾಡಬೇಕು ॥

೧. ಅಗ್ನಯೇ ಸ್ವಾಹಾ ॥

೨. ಸೋಮಾಯ ಸ್ವಾಹಾ ॥ ((ಸುದರ್ಶನಕಾರಿಕೆಯಲ್ಲಿ ೬ ಆಹುತಿಗಳನ್ನು ಹೇಳಿದ್ದರೂ, ಕೃಷ್ಣಯಜುರ್ವೇದದ ಮಂತ್ರಪ್ರಶ್ನೆಯಲ್ಲಿ ಸೋಮಾಯಸ್ವಾಹಾ ಎಂಬ ಆಹುತಿಯನ್ನೂ ೨ನೇ ಆಹುತಿಯಾಗಿ ಹೇಳಿರುವುದರಿಂದ ನಾವು ಅದನ್ನೂ ಇಲ್ಲಿ ಸೇರಿಸಿ ಕೊಂಡಿರುತ್ತೇವೆ))

೩. ವಿಶ್ವೇಭ್ಯೋ ದೇವೇಭ್ಯ: ಸ್ವಾಹಾ ॥

೪. ಧ್ರುವಾಯ ಭೂಮಾಯ ಸ್ವಾಹಾ ॥

೫. ಧ್ರುವಕ್ಷಿತಯೇ ಸ್ವಾಹಾ ॥

೬. ಅಚ್ಯುತಕ್ಷಿತಯೇ ಸ್ವಾಹಾ ॥

೭. ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ॥

ಅದಿತೇಽನ್ವಮಗ್ಂಸ್ಥಾಃ । ಅನುಮತೇಽನ್ವಮಗ್ಂಸ್ಥಾಃ । ಸರಸ್ವತೇಽನ್ವಮಗ್ಂಸ್ಥಾಃ । ದೇವಸವಿತಃಪ್ರಾಸಾವೀಃ ॥

ನಂತರ ಮೇಲಿರುವಂತೆ ಉತ್ತರಪರಿಷೇಚನವನ್ನು ಮಾಡಬೇಕು ॥

ತದುತ್ತರೇ ವಹ್ನಿಭಸ್ಮಾನ್ ಅಪೋಹ್ಯ ಉಷ್ಣಮತ್ರತು ಸ್ವಾಹಾಕಾರೇಣ ಹವಿಷಾ ಜುಹೋತಿ ಕಿಂಚಿದೇವತು ॥

ನಂತರ ಅಗ್ನಿಯ ಉತ್ತರದ ಕಡೆಗೆ ಭಸ್ಮವನ್ನೆಲ್ಲಾ ಸರಿಸಿ, ಆ ಬಿಸಿಯಿರುವ ಭಸ್ಮದ ಮೇಲೆ, ಕೇವಲಸ್ವಾಹಾಕಾರದಿಂದ ಮೊದಲನೇಭಾಗದ ಎರಡನೇ ಪಾತ್ರೆಯ ಅನ್ನದಿಂದ ಹೋಮಿಸಬೇಕು ॥

ಸ್ವಾಹಾ – ರುದ್ರಾಯ ಇದಂನಮಮ ॥

ಬಲಿ: –

ಶೇಷಂ ಷಡಾಹುತೀನಾಂ ತತ್ ಹವಿಷ್ಯೇಣತು ಸಂಸೃಜೇತ್ । ತೇನ ಸೂಪ ಸಂಸೃಷ್ಟೇನ ಕಾರ್ಯಾಶ್ಚ ಬಲಯ: ಕ್ರಮಾತ್ । ತಸ್ಮಿನ್ನೇವ ಬಲಿರ್ದೇಶೇ ಹಸ್ತೇನ ಪರಿಮಾರ್ಜಯೇತ್ । ಅವೋಕ್ಷಣಂ ಚ ತಾನ್ಯುಪ್ಯ ತೂಷ್ಣೀಂ ಅಂತೇ ಸಮಂತತ: । ದೇಶೇ ದೇಶೇ ಸಮತೇತಾನ್ ಪರಿಷಿಂಚೇತ್ ಸಕೃತ್ ಸಕೃತ್ ॥

ಮೊದಲ ಭಾಗದಲ್ಲಿ ಅಂದರೆ 6 ಆಹುತಿಗಳನ್ನು ಕೊಟ್ಟನಂತರದ ಉಳಿದ ಅನ್ನವನ್ನು ಹಾಗೂ ಮೊದಲನೇ ಭಾಗದ 2ನೇ ಪಾತ್ರೆಯ ಅನ್ನದಿಂದ 1 ಆಹುತಿಯನ್ನು

ಕೊಟ್ಟನಂತರದ ಉಳಿದ ಅನ್ನವನ್ನು ಸೇರಿಸಬೇಕು । ಈ ಅನ್ನಕ್ಕೆ ತೊವ್ವೆಯನ್ನು ಸೇರಿಸಿ ಈ ಅನ್ನದಿಂದ ಬಲಿಗಳನ್ನು ಕ್ರಮವಾಗಿ ಕೊಡಬೇಕು । ಬಲಿಯನ್ನು ಹಾಕುವ ಸಮಯದಲ್ಲಿ, ಆ ಜಾಗವನ್ನು ಕೈಯಿಂದ ತಿಕ್ಕಿ । ನಂತರ ನೀರನ್ನು ಆ ಜಾಗಕ್ಕೆ ಪ್ರೋಕ್ಷಿಸಿ, ಬಲಿಯನ್ನು ಹಾಕಿ ಸುಮ್ಮನೆ ಪರಿಷೇಚನ ಮಾಡಬೇಕು । ಯಾವ ಯಾವ ಜಾಗಗಳಲ್ಲಿ ಬಲಿಗಳನ್ನು ಹಾಕುತ್ತೇವೆಯೋ ಆ ಎಲ್ಲಾ ಕಡೆಗಳಲ್ಲೂ ಸಹ ಪ್ರತ್ಯೇಕವಾಗಿ ಇದೇರೀತಿ ಮಾಡಬೇಕು ॥

ಮಮ.....ಪ್ರೀತ್ಯರ್ಥಂ, ಗೃಹಶುದ್ಧ್ಯರ್ಥಂ–ಭಾಂಡ–ಭಾಜನಶುದ್ಧ್ಯರ್ಥಂ, ಬಲಿಹರಣಂ ಕರಿಷ್ಯೇ – ಇತಿ ಸಂಕಲ್ಪ್ಯ ॥

ಬಲಿಹರಣಕ್ಕಾಗಿ ಈ ಮೇಲಿನಂತೆ ಸಂಕಲ್ಪ ಮಾಡಬೇಕು ॥

ಅಗ್ನೇರ್ದಕ್ಷಿಣತ: (ಬಲಿರ್ದೇಶೇ) ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ಅಗ್ನಿಯ ಹೊರಗೆ ದಕ್ಷಿಣಭಾಗದಲ್ಲಿ, ಬಲಿಹಾಕುವ(ಇಡುವ) ಜಾಗವನ್ನು ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಉದಗಪವರ್ಗಂ ಬಲಿದ್ವಯಂ ದತ್ವಾ ॥

ಆ ಜಾಗದಲ್ಲಿ, ಕೆಳಗಿನ 2 ಮಂತ್ರಗಳಿಂದ 2 ಬಲಿಗಳನ್ನು ದಕ್ಷಿಣದಿಂದ ಉತ್ತರದಿಕ್ಕಿಗೆ ಮುಗಿಯುವಂತೆ ಹಾಕಬೇಕು ॥

ಓಂ ಧರ್ಮಾಯ ಸ್ವಾಹಾ ॥ ಓಂ ಅಧರ್ಮಾಯ ಸ್ವಾಹಾ ॥

ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ನಂತರ ಆ 2 ಬಲಿಗಳಿಗೆ, ಸುಮ್ಮನೆ(ಮಂತ್ರವಿಲ್ಲದೆ) ನೀರನ್ನು ಸುತ್ತುಗಟ್ಟುವುದು ॥

****

ಉದಧನ್ಯಾ ಸನ್ನಿಧೌತು ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ಮನೆಯಲ್ಲಿ ನೀರನ್ನು ಸಂಗ್ರಹಮಾಡುವ ಜಾಗವನ್ನು ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಬಲಿಂ ದತ್ವಾ ॥

ಆ ಜಾಗದಲ್ಲಿ, ಕೆಳಗಿನ 1 ಮಂತ್ರದಿಂದ 1 ಬಲಿಯನ್ನು ಹಾಕಿ(ಇಟ್ಟು) ॥

ಓಂ ಅದ್ಭ್ಯಃ ಸ್ವಾಹಾ ॥

ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಬಲಿಗೆ ಸುಮ್ಮನೆ(ಮಂತ್ರವಿಲ್ಲದೆ) ನೀರನ್ನು ಸುತ್ತುಗಟ್ಟುವುದು ॥

****

ಮಧ್ಯೇಗಾರಸ್ಯ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ ॥

ಮನೆಯ ಮಧ್ಯದಜಾಗವನ್ನು ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಪ್ರಾಕ್ಸಂಸ್ಥ ಬಲಿದ್ವಯಂ ದತ್ವಾ ॥

ಆ ಜಾಗದಲ್ಲಿ, ಪೂರ್ವಕ್ಕೆ ಮುಗಿಯುವಂತೆ ಕೆಳಗಿನ 2 ಮಂತ್ರಗಳಿಂದ 2 ಬಲಿಗಳನ್ನು ಹಾಕಿ ॥

ಓಂ ಓಷಧಿವನಸ್ಪತಿಭ್ಯಃ ಸ್ವಾಹಾ ॥ ಓಂ ರಕ್ಷೋದೇವಜನೇಭ್ಯಃ ಸ್ವಾಹಾ ॥

ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

****

ಅಗಾರಸ್ಯೋತ್ತರೇಪೂರ್ವೇ ದೇಶೇ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ ॥

ಮನೆಯ ಈಶಾನ್ಯದ ಜಾಗವನ್ನು ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಬಲಿಂ ದತ್ವಾ । ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಜಾಗದಲ್ಲಿ, ಕೆಳಗಿನ 1 ಮಂತ್ರದಿಂದ 1 ಬಲಿಯನ್ನು ಹಾಕಿ । ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

ಓಂ ಗೃಹ್ಯಾಭ್ಯಃ ಸ್ವಾಹಾ ॥

****

ದಕ್ಷಿಣೇದೇಶೇ ಅಗಾರಸ್ಯ ಶಯನಸ್ಥಲೇ ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ಮನೆಯ ದಕ್ಷಿಣಭಾಗದ ಮಲಗುವ ಕೋಣೆಯೊಳಗಿನ ಜಾಗವನ್ನು, ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಇತಿ ಬಲಿಂದತ್ವಾ । ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಜಾಗದಲ್ಲಿ, ಕೆಳಗಿನ 3 ಮಂತ್ರಗಳಿಂದ 3 ಬಲಿಗಳನ್ನು ಹಾಕಿ । ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

ಓಂ ಅವಸಾನೇಭ್ಯ: ಸ್ವಾಹಾ । ಓಂ ಅವಸಾನಪತಿಭ್ಯ: ಸ್ವಾಹಾ । ಓಂ ಸರ್ವಭೂತೇಭ್ಯ: ಸ್ವಾಹಾ ॥

****

ಶಯ್ಯಾಗಾರದೇಹಲ್ಯಾಂ ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ಮಲಗುವ ಕೋಣೆಯ ಹೊಸಲಿನ(ದೇಹಲಿ) ಮೇಲೆ ಕೈಯಿಂದ ತಿಕ್ಕಿ । ನೀರನ್ನು ಪ್ರೋಕ್ಷಿಸಿ ॥

ಬಲಿಂದತ್ವಾ । ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಜಾಗದಲ್ಲಿ, ಕೆಳಗಿನ 1 ಮಂತ್ರದಿಂದ 1 ಬಲಿಯನ್ನು ಹಾಕಿ । ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

ಓಂ ಕಾಮಾಯ ಸ್ವಾಹಾ ॥

****

ಅಪಿಧಾನ್ಯೇ ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ನಂತರ ಮುಚ್ಚುವಪಾತ್ರೆ ಅಥವಾ ಮನೆಯ ಛಾವಣಿಯ ಮೇಲೆ ಕೈಯಿಂದ ತಿಕ್ಕಿ ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥

ಬಲಿಂದತ್ವಾ । ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಜಾಗದಲ್ಲಿ, ಕೆಳಗಿನ 1 ಮಂತ್ರದಿಂದ 1 ಬಲಿಯನ್ನು ಹಾಕಿ । ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

ಓಂ ಅಂತರಿಕ್ಷಾಯ ಸ್ವಾಹಾ ॥

****

ಗೃಹಾದ್ಬಹಿ: ಯದೇಜತಿ ಇತಿ ಮಂತ್ರೇಣ ವಾಯವೇ ಬಲಿಂದದ್ಯಾತ್ । ಗೃಹಾದ್ಬಹಿ: ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

ನಂತರ ಗಾಳಿಗೆ, ಅಂದರೆ ಗಾಳಿಯು ಎಲ್ಲೆಲ್ಲಿಯೂ ಇರುವುದರಿಂದ, ಮನೆಯ ಹೊರಗೆ ಯಾವುದಾದರೊಂದು ಜಾಗದಲ್ಲಿ ಕೈಯಿಂದ ತಿಕ್ಕಿ ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥

ಬಲಿಂ ದತ್ವಾ । ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ಆ ಜಾಗದಲ್ಲಿ, ಕೆಳಗಿನ 1 ಮಂತ್ರದಿಂದ, ವಾಯುದೇವನಿಗೆ 1 ಬಲಿಯನ್ನು ಕೊಡುವುದು । ನಂತರ ಬಲಿಗೆ ನೀರನ್ನು ಸುಮ್ಮನೆ ಸುತ್ತುಗಟ್ಟುವುದು ॥

ಓಂ ಯದೇಜತಿ ಜಗತಿ ಯಚ್ಚ ಚೇಷ್ಟತಿ ನಾವ್ಮೋ ಭಾಗೋ ಯನ್ನಾವ್ಮ್ಯೋ ಸ್ವಾಹಾ ॥

****

ಬ್ರಹ್ಮಸದನೇ ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ ॥

(ಶ್ರೋತ್ರಿಯಾಗಾರ ಅಂದರೆ, ತ್ರಿಕಾಲಾಗ್ನಿಗಳು ಇರುವ ಜಾಗ ಅಥವಾ ಔಪಾಸನಾಗ್ನಿ ಇರುವ ಜಾಗ ಅಥವಾ ದೇವರ ಪೂಜಾ ಸ್ಥಳಕ್ಕೆ ಬ್ರಹ್ಮಸದನ ಎನ್ನುತ್ತಾರೆ) ಬ್ರಹ್ಮಸದನದ ಜಾಗವನ್ನು ಕೈಯಿಂದ ತಿಕ್ಕಿ ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥

ಕೆಳಗಿನ 10 ಮಂತ್ರಗಳಿಂದ 10 ಬಲಿಗಳನ್ನು ಹಾಕಬೇಕು । ಆದರೆ 1 ನೇ ಮಂತ್ರವಾದ ಪೃಥಿವ್ಯೈ ಸ್ವಾಹಾ ಎಂಬ ಮಂತ್ರದ ಬಲಿಯನ್ನು ಶ್ರೋತ್ರಿಯಾಗಾರದಲ್ಲಿ (ಬ್ರಹ್ಮಸದನ) ದಕ್ಷಿಣಭಾಗದಲ್ಲಿ ಹಾಕುವುದು, ಉಳಿದ 9 ಬಲಿಗಳನ್ನು ಪೂರ್ವಭಾಗದಲ್ಲಿ ಹಾಕುವುದು ॥

ಬಲಿಂದತ್ವಾ । ಪೃಥಿವ್ಯಾ ಇತಿ ಯಾಮ್ಯೇ ॥

ಓಂ ಪೃಥಿವ್ಯೈ ಸ್ವಾಹಾ ॥ ಓಂ ಅಂತರಿಕ್ಷಾಯ ಸ್ವಾಹಾ ॥ ಓಂ ದಿವೇ ಸ್ವಾಹಾ ॥ ಓಂ ಸೂರ್ಯಾಯ ಸ್ವಾಹಾ ॥ ಓಂ ಚಂದ್ರಮಸೇ ಸ್ವಾಹಾ ॥ ಓಂ ನಕ್ಷತ್ರೇಭ್ಯಃ ಸ್ವಾಹಾ ॥ ಓಂ ಇಂದ್ರಾಯಸ್ವಾಹಾ ॥ ಓಂ ಬೃಹಸ್ಪತಯೇಸ್ವಾಹಾ ॥ ಓಂ ಪ್ರಜಾಪತಯೇ ಸ್ವಾಹಾ ॥ ಓಂ ಬ್ರಹ್ಮಣೇ ಸ್ವಾಹಾ ॥

ತೂಷ್ಣೀಂ ಪರಿಷೇಚನಂ ಕುರ್ಯಾತ್ ॥

ನಂತರ ಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

****

ಬ್ರಹ್ಮಸದನೇ ದಕ್ಷಿಣಭಾಗೇ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ ॥

ಬ್ರಹ್ಮಸದನದಲ್ಲಿ ದಕ್ಷಿಣಭಾಗದಲ್ಲಿ ಕೈಯಿಂದ ತಿಕ್ಕಿ, ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥

ಪ್ರಾಚೀನಾವೀತಿನಾ ತಥಾ ಪಿತೃತೀರ್ಥೇನ ಬಲಿಂದತ್ವಾ ॥

ಪ್ರಾಚೀನಾವೀತದಿಂದ, ಪಿತೃತೀರ್ಥದಿಂದ ಕೆಳಗಿನ ಮಂತ್ರದಿಂದ 1 ಬಲಿಯನ್ನು ಹಾಕಿ ॥

ಓಂ ಸ್ವಧಾ ಪಿತೃಭ್ಯಃ ಸ್ವಾಹಾ ॥

****

ಉಪವೀತಿನಾ, ತಸ್ಯ ಉತ್ತರತಸ್ತಥಾ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ ॥

ನಂತರ ಉಪವೀತಿಯಿಂದ, ಆ ಪಿತೃಬಲಿಯಿಂದ ಉತ್ತರದಲ್ಲಿ, ನೆಲವನ್ನು ಕೈಯಿಂದತಿಕ್ಕಿ, ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥

ದೇವತೀರ್ಥೇನ ಬಲಿಂ ದತ್ವಾ ॥

ಆ ಜಾಗದಲ್ಲಿ, ದೇವತೀರ್ಥದಿಂದ, ಕೆಳಗಿನ ಮಂತ್ರದಿಂದ 1 ಬಲಿಯನ್ನು ಹಾಕಬೇಕು ॥

ನಮೋ ರುದ್ರಾಯ ಪಶುಪತಯೇ ಸ್ವಾಹಾ ॥

ನಂತರಂ ಪ್ರಥಮತಯಾ, ಪ್ರಾಚೀನಾವೀತಿನಾ ಪಿತೃಬಲಿಂ ಪಿತೃತೀರ್ಥೇನ ತೂಷ್ಣೀಂ ಪರಿಷಿಂಚ್ಯ, ಪುನ: ಉಪವೀತಿನಾ ದೇವತೀರ್ಥೇನ ರುದ್ರಬಲಿಂ ಪರಿಷಿಂಚೇತ್ ॥

ನಂತರ ಮೊದಲು, ಪ್ರಾಚೀನಾವೀತಿಯಿಂದ, ಪಿತೃತೀರ್ಥದಿಂದ ಅಪ್ರದಕ್ಷಿಣೆಯಾಗಿ ಪಿತೃಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟಿ, ಪುನ: ಉಪವೀತಿಯಿಂದ, ದೇವತೀರ್ಥದಿಂದ, ಪ್ರದಕ್ಷಿಣೆಯಾಗಿ ರುದ್ರಬಲಿಗೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

****

ವೈಹಾಯಸ ಬಲಿಂ –

ಆಕಾಶೇನ ಮಹಾಮಖಸ್ಥಾನೇ ಹಸ್ತೇನ ಪರಿಮೃಜ್ಯ । ಅದ್ಭಿ: ಅವೋಕ್ಷ್ಯ । ವೈಹಾಯಸ ಬಲಿಂ ಹರೇತ್ ॥

ಆಚ್ಛಾದನೆಯಿಲ್ಲದಿರುವಂತಹ ಜಾಗದಲ್ಲಿ ಕೈಯಿಂದ ತಿಕ್ಕಿ, ಸ್ವಚ್ಛಗೊಳಿಸಿ । ನೀರನ್ನು ಪ್ರೋಕ್ಷಿಸಿ ॥ ಆ ಜಾಗದಲ್ಲಿ, ಕೈಯಿಂದ ಮೇಲಕ್ಕೆ ಎಸೆಯುವ ರೀತಿಯಲ್ಲಿ, ಕೆಳಗಿನ ಮಂತ್ರದಿಂದ, ವೈಹಾಯಸ ಬಲಿಯನ್ನು ಕೊಟ್ಟು ॥

ಯೇ ಭೂತಾ: ಪ್ರಚರಂತಿ (ದಿವಾ)(ನಕ್ತಂ) ಬಲಿಮಿಚ್ಛಂತೋ ವಿತುದಸ್ಯ ಪ್ರೇಷ್ಯಾ: ।
ತೇಭ್ಯೋ ಬಲಿಂ ಪುಷ್ಟಿಕಾಮೋ ಹರಾಮಿ ಮಯಿ ಪುಷ್ಟಿಂ ಪುಷ್ಟಿಪತಿರ್ದಧಾತು ಸ್ವಾಹಾ ॥

ತೂಷ್ಣೀಂ ಪರಿಷೇಚನಂ ಕುರ್ಯಾತ್ ॥
ಅದಕ್ಕೆ ಸುಮ್ಮನೆ ನೀರನ್ನು ಸುತ್ತುಗಟ್ಟುವುದು ॥

ಮೇಲಿನ ಮಂತ್ರದಿಂದ, ಬೆಳಿಗ್ಗೆ ವೈಹಾಯಸ ಬಲಿಯನ್ನು ಕೊಡುವಾಗ ಆ ಮಂತ್ರದಲ್ಲಿ ಬರುವ 'ನಕ್ತಂ' ಎಂಬ ಶಬ್ದವನ್ನೂ ಹಾಗೆಯೇ ರಾತ್ರಿ ವೈಹಾಯಸ ಬಲಿಯನ್ನು ಕೊಡುವಾಗ ಆ ಮಂತ್ರದಲ್ಲಿ ಬರುವ 'ದಿವಾ' ಎಂಬ ಶಬ್ದವನ್ನು ಬಿಟ್ಟು ಮಂತ್ರವನ್ನು ಹೇಳಿ, ವೈಹಾಯಸಬಲಿಯನ್ನು ಕೊಡಬೇಕು ॥

ಪಂಚ ಮಹಾಯಜ್ಞಾಃ –

ಪ್ರಾಣಾನಾಯಮ್ಯ, ಮಮ.....ಪ್ರೀತ್ಯರ್ಥಂ, ಪಂಚಸೂನದೋಷ ಪರಿಹಾರಾರ್ಥಂ, ಪಂಚಮಹಾಯಜ್ಞಂ ಕರಿಷ್ಯೇ, ಇತಿ ಸಂಕಲ್ಪ್ಯ ॥

ಪ್ರಾಣಾಯಾಮ ಮಾಡಿ। 5 ರೀತಿಯ ಪಾಪಗಳ ಪರಿಹಾರಕ್ಕಾಗಿ, ಪಂಚಮಹಾಯಜ್ಞವನ್ನು ಮಾಡುತ್ತೇನೆ ಎಂದು ಮೇಲಿನಂತೆ ಸಂಕಲ್ಪಿಸಿ ॥

1. ದೇವಯಜ್ಞಃ

ದೇವಯಜ್ಞೇನ ಯಕ್ಷ್ಯೇ ಇತಿ ಸಂಕಲ್ಪ್ಯ ॥

ದೇವಯಜ್ಞವನ್ನು ಮಾಡುತ್ತೇನೆ ಎಂದು ಮೇಲಿನಂತೆ ಸಂಕಲ್ಪಿಸಿ ॥

ಮಂತ್ರಂಉಕ್ತ್ವಾ, ಜಲಂ ನಿನೀಯ ॥

ಕೆಳಗಿನ ಮಂತ್ರವನ್ನುಹೇಳಿ ನೀರನ್ನುಬಿಟ್ಟು ॥

ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಅದಿತೇಽನುಮನ್ಯಸ್ವ....., ಇತಿಅಗ್ನಿಂ ಪರಿಷಿಚ್ಯ ॥

ಅದಿತೇಽನುಮನ್ಯಸ್ವ....., ಇತ್ಯಾದಿ ವಾಕ್ಯಗಳಿಂದ ಅಗ್ನಿಗೆ ಪರಿಷೇಚನವನ್ನು ಮಾಡಿ ॥

ಹಸ್ತೇನ, ತೃತೀಯಭಾಗಾತ್ ದ್ರವ್ಯಂ ಆದಾಯ, ಮಧ್ಯೇ ಅಗ್ನೌ ಹುತ್ವಾ ॥

ಕೈಯಿಂದ, 3ನೇ ಅನ್ನದ ಭಾಗದಿಂದ ಅನ್ನವನ್ನು ತೆಗೆದುಕೊಂಡು, ಕೆಳಗಿನ ಮಂತ್ರದಿಂದ ಅಗ್ನಿಯ ಮಧ್ಯದಲ್ಲಿ ಹೋಮಿಸುವುದು ॥

ಓಂ ದೇವೇಭ್ಯಃ ಸ್ವಾಹಾ ॥

ಅದಿತೇಽನ್ವಮಗ್ಂಸ್ಥಾಃ....., ಇತಿ ಅಗ್ನಿಂಪರಿಷಿಚ್ಯ ॥

ನಂತರ ಮೇಲಿನ ಮಂತ್ರಗಳಿಂದ ಅಗ್ನಿಗೆ ಉತ್ತರ ಪರಿಷೇಚನವನ್ನು ಮಾಡಿ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ದೇವಯಜ್ಞಂ ಸಮಾಪಯೇತ್ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ದೇವಯಜ್ಞವನ್ನು ಸಮಾಪ್ತಿಗೊಳಿಸುವುದು ॥

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

2. ಪಿತೃಯಜ್ಞಃ

ಪ್ರಾಣಾನಾಯಮ್ಯ । ಪ್ರಾಚೀನಾವೀತಿನಾ, ಪಿತೃಯಜ್ಞೇನ ಯಕ್ಷ್ಯೇ, ಇತಿ ಸಂಕಲ್ಪ್ಯ ॥

ಪ್ರಾಣಾಯಾಮ ಮಾಡಿ । ಪ್ರಾಚೀನಾವೀತಿಯಾಗಿ, ಪಿತೃಯಜ್ಞವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ॥

ಕೆಳಗಿನ ಮಂತ್ರವನ್ನು ಹೇಳಿ ನೀರನ್ನು ಬಿಟ್ಟು ॥

ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಭೂಮೌ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ । ಹಸ್ತೇನ, ಚತುರ್ಥಭಾಗಾತ್ ದ್ರವ್ಯಂ ಆದಾಯ ॥

ನೆಲವನ್ನು ತಿಕ್ಕಿ । ನೀರನ್ನು ಪ್ರೋಕ್ಷಿಸಿ । ಕೈಯಿಂದ, 4ನೇ ಅನ್ನದ ಭಾಗದಿಂದ ಅನ್ನವನ್ನು ತೆಗೆದುಕೊಂಡು ॥

ಪಿತೃತೀರ್ಥೇನ ಭೂಮೌ ಪಿಂಡಂ ದದ್ಯಾತ್ ॥

ಕೆಳಗಿನ ಮಂತ್ರದಿಂದ, ಪಿತೃತೀರ್ಥದಿಂದ ನೆಲದಲ್ಲಿ ಪಿಂಡವನ್ನು ಹಾಕಬೇಕು ॥

ಓಂ ಪಿತೃಭ್ಯಃ ಸ್ವಧಾ ॥

ಪಿತೃತೀರ್ಥೇನ ತೂಷ್ಣೀಂ ಅಪ್ರದಕ್ಷಿಣಂ ಪರಿಷಿಚ್ಯ ॥

ನಂತರ ಅಪ್ರದಕ್ಷಿಣೆಯಾಗಿ ಸುಮ್ಮನೆ(ಮಂತ್ರವಿಲ್ಲದೆ) ಪಿತೃತೀರ್ಥದಿಂದ ನೀರನ್ನು ಆ ಪಿಂಡಕ್ಕೆ ಸುತ್ತುಗಟ್ಟಬೇಕು ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ಪಿತೃಯಜ್ಞಂ ಸಮಾಪಯೇತ್ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ಪಿತೃಯಜ್ಞವನ್ನು ಸಮಾಪ್ತಿಗೊಳಿಸುವುದು ॥

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

3. ಭೂತಯಜ್ಞಃ

ಪ್ರಾಣಾನಾಯಮ್ಯ । ಉಪವೀತಿನಾ, ಭೂತಯಜ್ಞೇನ ಯಕ್ಷ್ಯೇ ಇತಿ ಸಂಕಲ್ಪ್ಯ ॥

ಪ್ರಾಣಾಯಾಮ ಮಾಡಿ । ಉಪವೀತಿಯಾಗಿ, ಭೂತಯಜ್ಞವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ॥

ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಗೃಹಾದ್ಬಹಿಃ ಹಸ್ತೇನ ಪರಿಮೃಜ್ಯ । ಅದ್ಭಿಃ ಅವೋಕ್ಷ್ಯ । ಹಸ್ತೇನ, ದ್ವಿತೀಯಭಾಗಾತ್ ದ್ರವ್ಯಂ ಆದಾಯ ॥

ಮನೆಯಹೊರಗೆ ನೆಲವನ್ನು ತಿಕ್ಕಿ । ನೀರನ್ನು ಪ್ರೋಕ್ಷಿಸಿ । ಕೈಯಿಂದ, 2ನೇ ಅನ್ನದ ಭಾಗದಿಂದ ಅನ್ನವನ್ನು ತೆಗೆದುಕೊಂಡು ॥

ಬಲಿಂ ದದ್ಯಾತ್ ॥

ಕೆಳಗಿನ ಮಂತ್ರದಿಂದ ಬಲಿಯನ್ನು ಆ ಜಾಗದಲ್ಲಿ ಹಾಕಬೇಕು ॥

ಓಂ ಭೂತೇಭ್ಯೋ ನಮಃ ॥

ತೂಷ್ಣೀಂ ಪ್ರದಕ್ಷಿಣಂ ಪರಿಷಿಚ್ಯ ॥

ನಂತರ ಸುಮ್ಮನೆ ಪ್ರದಕ್ಷಿಣೆಯಾಗಿ ನೀರನ್ನು ಸುತ್ತುಗಟ್ಟುವುದು ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ಭೂತಯಜ್ಞಂ ಸಮಾಪಯೇತ್ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನುಬಿಟ್ಟು, ಭೂತಯಜ್ಞವನ್ನು ಸಮಾಪ್ತಿಗೊಳಿಸುವುದು ॥

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

4. ಮನುಷ್ಯಯಜ್ಞಃ

ಪ್ರಾಣಾನಾಯಮ್ಯ । ಉಪವೀತಿನಾ, ಮನುಷ್ಯಯಜ್ಞೇನ ಯಕ್ಷ್ಯೇ, ಇತಿ ಸಂಕಲ್ಪ್ಯ ॥

ಪ್ರಾಣಾಯಾಮ ಮಾಡಿ । ಉಪವೀತಿಯಾಗಿ, ಮನುಷ್ಯಯಜ್ಞವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ॥

ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಹಸ್ತೇನ, ಪಂಚಮಭಾಗಾತ್ ದ್ರವ್ಯಂ ಆದಾಯ ॥

ಕೈಯಿಂದ, 5ನೇ ಅನ್ನದ ಭಾಗದಿಂದ ಅನ್ನವನ್ನು ತೆಗೆದುಕೊಂಡು ॥

ಮಂತ್ರೇಣ ಬ್ರಾಹ್ಮಣಾಯ ಕಲ್ಪಿತಾನ್ನಂ ದದ್ಯಾತ್ ॥

ಕೆಳಗಿನ ಮಂತ್ರದಿಂದ ಬ್ರಾಹ್ಮಣರಿಗಾಗಿ ಮಾಡಿರುವ ಅನ್ನವನ್ನು ಬ್ರಾಹ್ಮಣರಿಗೆ ಕೊಡಬೇಕು ॥

ಓಂ ಮನುಷ್ಯೇಭ್ಯೋ ಹಂತಾ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ಮನುಷ್ಯಯಜ್ಞಂ ಸಮಾಪಯೇತ್ ॥

ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ಮನುಷ್ಯಯಜ್ಞವನ್ನು ಸಮಾಪ್ತಿಗೊಳಿಸುವುದು ॥

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

5. ಬ್ರಹ್ಮಯಜ್ಞಃ

ಪ್ರಾಣಾನಾಯಮ್ಯ । ಉಪವೀತಿನಾ, ಬ್ರಹ್ಮಯಜ್ಞೇನ ಯಕ್ಷ್ಯೇ, ಇತಿ ಸಂಕಲ್ಪ್ಯ ॥

ಪ್ರಾಣಾಯಾಮ ಮಾಡಿ । ಉಪವೀತಿಯಾಗಿ, ಬ್ರಹ್ಮಯಜ್ಞವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ॥

ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ॥

ಅಗ್ನಿಂ ಪರಿಷಿಚ್ಯ ॥

ಕೆಳಗಿನ ಮಂತ್ರಗಳಿಂದ ಅಗ್ನಿಗೆ ಪರಿಷೇಚನವನ್ನು ಮಾಡಿ ॥

ಅದಿತೇಽನುಮನ್ಯಸ್ವ..... ಪ್ರಸುವ ॥

ಸ್ವಶಾಖಾ ಮಂತ್ರಭಾಗಂ ಯಥಾಶಕ್ತಿಂ ಜಪ್ತ್ವಾ ॥

ತನ್ನ ವೇದಶಾಖೆಯ ಮಂತ್ರಭಾಗವನ್ನು ಯಥಾಶಕ್ತಿ ಜಪಿಸುವುದು ॥

ಅಗ್ನಿಂ ಪರಿಷಿಚ್ಯ ॥

ನಂತರ ಕೆಳಗಿನ ಮಂತ್ರಗಳಿಂದ ಅಗ್ನಿಗೆ ಉತ್ತರಪರಿಷೇಚನವನ್ನು ಮಾಡಿ ॥

ಅದಿತೇಽನ್ವಮಗ್ಂಸ್ಥಾ:..... ಪ್ರಾಸಾವೀಃ ॥

ಮಂತ್ರಂ ಉಕ್ತ್ವಾ, ಜಲಂ ನಿನೀಯ ಬ್ರಹ್ಮಯಜ್ಞಂ ಸಮಾಪಯೇತ್ ॥

ಕೆಳಗಿನ ಮಂತ್ರವನ್ನು ಹೇಳಿ, ನೀರನ್ನು ಬಿಟ್ಟು ಬ್ರಹ್ಮಯಜ್ಞವನ್ನು ಸಮಾಪ್ತಿಗೊಳಿಸುವುದು ॥

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥

ಕರ್ಮಸಮಾಪನಂ –

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪ:ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋವಂದೇ ತಮಚ್ಯುತಮ್ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಪ್ರಾತರ್ವೈಶ್ವದೇವ – ಪಂಚಮಹಾಯಜ್ಞ ಕರ್ಮಣಾ / (ಸಾಯಂ ವೈಶ್ವದೇವ ಕರ್ಮಣಾ) ಭಗವಾನ್ ಸರ್ವಾತ್ಮಕ: ಸರ್ವಂ ಶ್ರೀ ಪರಮೇಶ್ವರ: ಪ್ರೀಣಾತು ।

ಮಧ್ಯೇ ಮಂತ್ರ, ತಂತ್ರ, ಸ್ವರ, ವರ್ಣ, ಧ್ಯಾನ, ನಿಯಮ, ನ್ಯೂನ, ಅತಿರಿಕ್ತ, ಲೋಪದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಶಿವಾಯ ನಮ: – ಶಂಕರಾಯ ನಮ: – ಮಹೇಶ್ವರಾಯ ನಮ: ॥ ಪವಿತ್ರಂ ವಿಸೃಜ್ಯ, ಆಚಮ್ಯ । ಆಸನವಿಧಿಂ ಕುರ್ಯಾತ್ ॥

ಈ ಮೇಲೆ ತಿಳಿಸಿರುವಂತೆ ಹೇಳಿ, ಕರ್ಮಸಮಾಪನೆಯನ್ನು ಮಾಡಿ, ಪವಿತ್ರವನ್ನು ತೆಗೆದು, ಆಚಮನವನ್ನು ಮಾಡಿ । ಆಸನವಿಧಿಯನ್ನೂ ಮಾಡುವುದು ॥

ಗೃಹವಾಸಿಷು ತೃಪ್ತೇಷು ಸರ್ವಪಾತ್ರೇಭ್ಯ ಆದರಾತ್ । ಸಂಮೃಜ್ಯ ಲೇಪಾ ಸರ್ವಾಸ್ತಾನ್ ಅದ್ಭಿ: ಸಂಮೃಜ್ಯ ಬುದ್ಧಿಮಾನ್ ॥

ನಂತರ ಮನೆಯಲ್ಲಿರುವ ಎಲ್ಲರೂ ಊಟಮಾಡಿದ ಮೇಲೆ, ಎಲ್ಲಾ ಖಾಲಿಪಾತ್ರೆಗಳಲ್ಲೂ ಅಂಟಿಕೊಂಡಿರುವ ಅನ್ನದ ಅಗುಳುಗಳನ್ನು (ಶೇಷವನ್ನು) ನೀರಿನಿಂದ ಚೆನ್ನಾಗಿ ತೊಳೆದು ॥

ಮಂತ್ರೇಣ ದದ್ಯಾತ್ ಉತ್ತರೇಣ ಶುಚಿಸ್ಥಲೇ ॥

ತೊಳೆದ ಅಗುಳುಗಳ ನೀರನ್ನು, ಮನೆಯ ಉತ್ತರಭಾಗದ ಸ್ವಚ್ಛವಾದ ಜಾಗದಲ್ಲಿ, ಕೆಳಗಿನ ಮಂತ್ರದಿಂದ ಹಾಕಬೇಕು ॥

ಓಂ ರುದ್ರಾಯ ಸ್ವಾಹಾ ॥

ರೌದ್ರಾಂತಮೇವ ಸಾಯಂಸ್ಯಾತ್ ವೈಹಾಯಸಬಲಿಂ ತತ: ॥

ಸಂಜೆಯೂ ಕೂಡ ರುದ್ರದೇವತಾಕವಾದ ಬಲಿಯ ಪರ್ಯಂತವಾಗಿ ಈ ಕರ್ಮವನ್ನು ಮಾಡಿ, ವೈಹಾಯಸ ಬಲಿಯನ್ನು ಕೊಡುವುದು । ಪಂಚಮಹಾಯಜ್ಞವನ್ನು ಮಾಡಬೇಕಿಲ್ಲ ॥

ಛೇದನೇ ಛೇದನೇ ಪಾಕೇ ಪೇಶಣೇ ಮಾರ್ಜನೇ ತಥಾ । ಪಂಚಸ್ಥಾನಾಯ ಸೂನಾಯ ಪಂಚ ದೋಷೋ ವಿನಶ್ಯತಿ ॥

ನಾವುಗಳು ನಿತ್ಯವೂ ಮಾಡುವಂತಹ ಛೇದನ–ಭೇದನ–ಅಡುಗೆ–ಪೇಶಣ(ಜಜ್ಜುವುದು ಅಥವಾ ಪುಡಿಮಾಡುವುದು) ಹಾಗೂ ಮಾರ್ಜನ(ತಿಕ್ಕುವುದು) ಈ ಎಲ್ಲ 5 (ಪಂಚಸೂನ) ಕ್ರಿಯೆಗಳೂ, ದೋಷಯುಕ್ತ ನಡವಳಿಕೆಗಳಿಂದ ಅತ್ಯಂತ ಪಾಪವನ್ನು ಉಂಟುಮಾಡಲು ಕಾರಣವಾಗಬಲ್ಲಂತಹ ಕೆಲಸಗಳಾಗಿದ್ದು । ಇವುಗಳಿಂದ ಬರಬಹುದಾದ ಪಾಪಗಳನ್ನು ಪರಿಹರಿಸಿಕೊಳ್ಳಲು ಅತ್ಯಗತ್ಯವಾಗಿ ನಿತ್ಯವೂ ವೈಶ್ವದೇವ ಕರ್ಮವನ್ನು ಮಾಡಬೇಕು ॥

****

9. ಭೋಜನಕಾಲೇ ಪರಿಷೇಚನಕ್ರಮ:

ವಿಮರ್ಶೆ–

ಪುರಾಣಾದಿಗಳಲ್ಲಿಯೇ ಆಗಲೀ ಅಥವಾ ಯಾವುದೇ ಶಾಸ್ತ್ರೀಯ ಗ್ರಂಥಗಳಲ್ಲಿಯೇ ಆಗಲೀ, ಊಟದಲ್ಲಿ ಎಲೆ ಅಥವ ಯಾವುದೇ ಭೋಜನ ಪಾತ್ರೆಯಲ್ಲಿ ಆಹಾರವನ್ನು ಬಡಿಸುವ ನಿರ್ದಿಷ್ಟ ಜಾಗಗಳ ಕುರಿತ ಯಾವುದೇ ಅಧಿಕೃತ ಉಲ್ಲೇಖಗಳಿಲ್ಲ।

ಆದರೆ ಗರುಡಪುರಾಣದಲ್ಲಿ – ಊಟದ ಪಾತ್ರೆಯು ಭೂ ಸ್ಪರ್ಶವಾಗಿಯೇ ಇರಬೇಕು, ಇಲ್ಲದಿದ್ದರೆ ವಾಯುವಿನಲ್ಲಿರುವ, ಕೆಟ್ಟ ಆಲೋಚನೆಗಳಿಗೆ ಕಾರಣವಾಗಬಲ್ಲಂತಹ ಅನೇಕ ಜೀವಿಗಳು ಆಹಾರಕ್ಕೆ ಸೇರಿ, ಆಹಾರವನ್ನು ಸತ್ವರಹಿತವಾಗಿ ಮಾಡುತ್ತವೆ ಎಂತಲೂ, ಮತ್ತು ಭಗವದ್ಗೀತೆ, ಯೋಗಶಾಸ್ತ್ರ ಗ್ರಂಥಗಳಲ್ಲಿ – ಆಹಾರ ಪದಾರ್ಥಗಳಲ್ಲಿರುವ ಸಾತ್ವಿಕ, ರಾಜಸಿಕ, ತಾಮಸಿಕ ಗುಣಗಳ ಆಧಾರದ ಮೇಲೆ, ಅವುಗಳ ನಿರಂತರ ಬಳಸುವಿಕೆಯಲ್ಲಿ ನಿಯಮ ಮಾಡಿದ್ದಾರೆ। ಹಾಗೆಯೇ ಆಹಾರವನ್ನು ತಯಾರಿಸುವ ಸಮಯದಲ್ಲಿ ಮಾಡುವ ಕುಟ್ಟುವುದು, ಪುಡಿಮಾಡುವುದು, ಕತ್ತರಿಸುವುದು ಮುಂತಾದ ದೋಷಯುಕ್ತ ಕ್ರಿಯೆಗಳನ್ನು ಮಾಡುವುದರಿಂದ ಆ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ವೈಶ್ವದೇವವನ್ನು ಶಾಸ್ತ್ರಗ್ರಂಥಗಳು ಆದೇಶಿಸಿವೆಯೇ ಹೊರತು, ಉಪ್ಪನ್ನು ಇಲ್ಲಿಯೇ ಹಾಕಬೇಕು / ಉಪ್ಪಿನಕಾಯಿಯನ್ನು ಇಲ್ಲೇ ಹಾಕಬೇಕು / ಪಲ್ಯಗಳನ್ನು ಇಲ್ಲೇ ಹಾಕಬೇಕು.....!!!!! ಈ ರೀತಿಯ ಯಾವ ವಿಷಯಗಳ ಬಗ್ಗೆಯೂ ಖಂಡಿತವಾಗಿ ಹೇಳಿಲ್ಲ, ಅವುಗಳ ಅವಶ್ಯಕತೆಯೂ ಇಲ್ಲವೇ ಇಲ್ಲ! ಅದರಲ್ಲಿ ಯಾವ ಧರ್ಮವೂ ಇಲ್ಲ।

ಆದರೆ ಇಂದು ಸಮಾಜದಲ್ಲಿ ಏನಾಗಿದೆ ?? । ಋಷಿವರ್ಯರು, ಯೋಗಿಗಳು ವೈಜ್ಞಾನಿಕವಾಗಿ, ಧರ್ಮಯುಕ್ತವಾಗಿ, ಅಲೌಕಿಕಜ್ಞಾನ ವಿಶೇಷದಿಂದ, ಮನುಷ್ಯರ ಸಕಲ ಕಲ್ಯಾಣಕ್ಕಾಗಿ ಯೋಗ್ಯವಾದ ಆಹಾರ ಜೀವನಶೈಲಿಯನ್ನು ಮತ್ತು

ಆಹಾರ ತಯಾರಿಸುವ ವಿಧಾನವನ್ನು ಮತ್ತು ತಯಾರಿಸುವವರ ಮನ:ಸ್ಥಿತಿಯು ಹೇಗಿರಬೇಕೆಂಬುದನ್ನು ಹಾಗೂ ಊಟ ಮಾಡುವ ಸಮಯದಲ್ಲಿನ ನಡವಳಿಕೆಗಳನ್ನು, ಊಟ ಮಾಡುವ ಸಮಯವನ್ನು ಅಲ್ಲದೇ ಕೆಟ್ಟ ವಸ್ತುಗಳಿಂದ, ಕೆಟ್ಟ ಮನಸ್ಥಿತಿಯಿಂದ, ತಯಾರಾದ ಆಹಾರದ ಸೇವನೆಯಿಂದ ಮನಸ್ಸಿನ ಮೇಲೆ ಆಗುವ ಪರಿಣಾಮಗಳ, ಮನಸ್ಸು ಯೋಚನೆ ಮಾಡುವ ಶೈಲಿಯಬಗ್ಗೆ.....,, ಉಪದೇಶಿಸಿದ್ದರೆ, ಜನರು ಅಂದರೆ ನಾವುಗಳು ಮಾತ್ರ ಈ ನಿಯಮಗಳ ಬಗ್ಗೆ ಸ್ವಲ್ಪವೂ ಚಿಂತನೆ ನಡೆಸದೇ ಆಲೋಚಿಸದೇ, ಯಾವ ಪುಣ್ಯ ಪುರುಷಾರ್ಥವೂ ಇಲ್ಲದ ಬಡಿಸುವ ಜಾಗದ!! ವಿಚಾರದಲ್ಲಿ ಮಹಾನ್ ಹೋರಾಟವನ್ನು, ಮಹಾನ್ ನಿಷ್ಠೆಯನ್ನು, ದೊಡ್ಡದಾದ ಒಗ್ಗಟ್ಟನ್ನು ಆಯೋಜಿಸುತ್ತೇವೆ, ಇದು ಎಂತಹ ವಿಪರ್ಯಾಸ ಓದುಗರೇ ?

ಹಾಗಾಗಿ ಊಟ ಮಾಡುವ ಪಾತ್ರೆಯ ವಿಸ್ತೀರ್ಣದ ಆಧಾರದಲ್ಲಿ ಮತ್ತು ಊಟ ಮಾಡುವವರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವುದೇ ಆಹಾರ ಪದಾರ್ಥಗಳನ್ನು ಯಾವ ಜಾಗದಲ್ಲಿಯೇ ಬಡಿಸಿದರೂ ಯಾವ ತಪ್ಪು–ಮಹಾಪರಾಧವೂ ಇಲ್ಲ । ಹಾಗಾಗಿ ನಮ್ಮ ಬಡಿಸುವ ಕ್ರಮವೇ ಸರಿ, ನಿಮ್ಮ ಕ್ರಮ ಸರ್ವಥಾತಪ್ಪು ಎನ್ನುವಂತಹ ಒಣ ಹಾಗೂ ವ್ಯರ್ಥ ವಾದಗಳನ್ನು ಬಿಟ್ಟು, ನಮ್ಮ ಕರ್ಮಪಿತೃಗಳಾದ ಋಷಿಗಳು ಆಹಾರದ ರಚನೆಯ ಮತ್ತು ಸೇವನೆಯ ವಿಷಯದಲ್ಲಿ ವಾತ್ಸಲ್ಯ ಪೂರಿತರಾಗಿ ಉಪದೇಶಿಸಿರುವ ರೀತಿನೀತಿಗಳನ್ನು ಅನುಸರಿಸುವ ಬಗೆಗೆ ಶ್ರದ್ಧೆಯಿಂದ ಗಂಭೀರವಾಗಿ ಯೋಚಿಸುವುದನ್ನು ಕಲಿಯೋಣ ॥

****

ಪರಿಷೇಚನ ವಿಧಾನ

ಭೋಜನಕ್ಕೆ ಮೊದಲು, 2 ಸಲ ಆಚಮನವನ್ನು ಮಾಡಿ ಪೂರ್ವಕ್ಕೆ ಕುಳಿತುಕೊಂಡು ಭೋಜನ ಪಾತ್ರೆಯನ್ನು ಇಡುವಂತಹ ಜಾಗಕ್ಕೆ ನೀರನ್ನು ಪ್ರೋಕ್ಷಿಸಿ ಚತುಷ್ಕೋಣ ಮಂಡಲವನ್ನು ಮಾಡಿ, ಅದರ ಮೇಲೆ ಭೋಜನ ಪಾತ್ರೆಯನ್ನು ಇಟ್ಟು, ಮೊದಲು ತುಪ್ಪವನ್ನು ಹಾಕಿ ನಂತರ ಅನ್ನಾದಿಗಳನ್ನು ಹಾಕಿ, ಆಹಾರ ಶುದ್ಧಿಗಾಗಿ ಪುನ: ತುಪ್ಪವನ್ನು ಹಾಕಬೇಕು ।

ಮೊದಲು ಭೋಜನಪಾತ್ರೆಯ ಈಶಾನ್ಯಭಾಗದ ನೆಲದಲ್ಲಿ ಸ್ವಲ್ಪನೀರನ್ನು ಹಾಕಿಕೊಂಡು, ಯಾವ ಯಾವ ಸಂದರ್ಭದಲ್ಲಿ ಎಡಕೈ ಬೆರಳನ್ನು ಭೋಜನ ಪಾತ್ರೆಯ ಮೇಲೆ ಇಟ್ಟು ಕ್ರಿಯೆಯನ್ನು ಮಾಡುತ್ತೇವೋ ಆ ನಂತರ ಎಡಕೈ ಬೆರಳನ್ನು ಆ ನೀರಿನಲ್ಲಿ ಅದ್ದಬೇಕು ।

ಊಟಮಾಡುವ ವ್ಯಕ್ತಿಯು ಬಲಕೈಯಲ್ಲಿ ನೀರನ್ನು ಹಾಕಿಕೊಂಡು, ವ್ಯಾಹೃತಿ ಸಹಿತ ಗಾಯತ್ರೀಮಂತ್ರವನ್ನು ಹೇಳುತ್ತಾ ಆ ಭೋಜನ ಪಾತ್ರೆಯಲ್ಲಿರುವ ಆಹಾರಗಳಿಗೆ ಪ್ರೋಕ್ಷಿಸಬೇಕು, ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು, ಆಹಾರಪಾತ್ರೆಯ ಪಶ್ಚಿಮದತುದಿಯ ಮೇಲೆ ಇರಬೇಕು ॥

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।
ಧಿಯೋಯೋ ನಃ ಪ್ರಚೋದಯಾತ್ ॥

ಇನ್ನೊಮ್ಮೆ ಬಲ ಕೈಯಲ್ಲಿ ನೀರನ್ನು ಹಾಕಿಕೊಂಡು, ಭೋಜನ ಪಾತ್ರೆಯ ಈಶಾನ್ಯದಿಂದ ಆರಂಭಿಸಿ ಪ್ರದಕ್ಷಿಣೆಯಾಗಿ ಪುನಃ ಈಶಾನ್ಯದವರೆಗೆ ಆ ನೀರನ್ನು ಕೆಳಗಿನ ಮಂತ್ರವನ್ನು ಹೇಳುತ್ತಾ ಹಾಕಬೇಕು, ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು, ಆಹಾರಪಾತ್ರೆಯ ಪಶ್ಚಿಮದ ತುದಿಯ ಮೇಲೆ ಇರಬೇಕು ॥

ಓಂ ಸತ್ಯಂತ್ವರ್ತೇನ ಪರಿಷಿಂಚಾಮಿ । (ರಾತ್ರಿಯಲ್ಲಿ, ಋತಂ ತ್ವಾ ಸತ್ಯೇನ
ಪರಿಷಿಂಚಾಮಿ) ॥

ಆಮೇಲೆ ಆಹಾರಪಾತ್ರೆಯ ಬಲಪಕ್ಕದ ನೆಲದಮೇಲೆ ಕೆಳಗಿನ ಒಂದೊಂದು ವಾಕ್ಯವನ್ನು ಹೇಳುತ್ತಾ ಸ್ವಲ್ಪಸ್ವಲ್ಪ ಅನ್ನವನ್ನು ಪಶ್ಚಿಮದಿಂದ ಪೂರ್ವಕ್ಕೆ ಸಾಲಾಗಿ ಒಂದಕ್ಕೊಂದು ತಗುಲದ ರೀತಿಯಲ್ಲಿ ಇಡಬೇಕು, ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು ಆಹಾರಪಾತ್ರೆಯ ಪಶ್ಚಿಮದ ತುದಿಯಮೇಲೆ ಇರಬೇಕು ॥

ಓಂ ಚಿತ್ರಾಯ ಸ್ವಾಹಾ ।

ಓಂ ಚಿತ್ರಗುಪ್ತಾಯ ಸ್ವಾಹಾ ।

ಓಂ ಯಮಾಯ ಸ್ವಾಹಾ ।

ಓಂ ಧರ್ಮರಾಜಾಯ ಸ್ವಾಹಾ ।

ಓಂ ಸರ್ವಭೂತೇಭ್ಯಃ ಸ್ವಾಹಾ ।

ಹೀಗೆ ಇಟ್ಟಂತಹ ಅನ್ನದ ಗುಂಪುಗಳ ಸಾಲಿನ ಮೇಲೆ ಪಶ್ಚಿಮದಿಂದ ಪೂರ್ವಕ್ಕೆ ನೀರನ್ನು ಬಲಕೈಯಿಂದ ಹಾಕುತ್ತಾ, ಕೆಳಗಿನ ವಾಕ್ಯವನ್ನು ಹೇಳಬೇಕು ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು ಆಹಾರಪಾತ್ರೆಯ ಪಶ್ಚಿಮದತುದಿಯ ಮೇಲೆ ಇರಬೇಕು ॥

ಓಂ ಶ್ರೀ ಕೃಷ್ಣಾರ್ಪಣಮಸ್ತು ।

ಕೆಳಗಿನ ವಾಕ್ಯವನ್ನು ಹೇಳುತ್ತಾ, ಸಕಲದೇವತೆಗಳೂ ನೆಲೆಸಿರುವ ಹಸುವನ್ನು ನೆನಪಿಸಿಕೊಳ್ಳಬೇಕು ॥

ಓಂ ಕಾಮಧೇನೂಂ ಸ್ಮರಾಮಿ ।

ನಂತರ ಬಲಹಸ್ತದಲ್ಲಿ ನೀರನ್ನು ಇಟ್ಟುಕೊಂಡು, ಕೆಳಗಿನ ವಾಕ್ಯವನ್ನು ಹೇಳಿ, ಆ ನೀರನ್ನು ಕುಡಿಯಬೇಕು ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು ಆಹಾರಪಾತ್ರೆಯ ಪಶ್ಚಿಮದ ತುದಿಯಮೇಲೆ ಇರಬೇಕು ॥

ಅಮೃತಮಸ್ತು । ಓಂ ಅಮೃತೋಽಪಸ್ತರಣಮಸಿ ।

ಕೆಳಗಿನ ಒಂದೊಂದು ಮಂತ್ರಗಳನ್ನು ಹೇಳಿ, ಸ್ವಲ್ಪಸ್ವಲ್ಪ ಅನ್ನವನ್ನು ಬಾಯಿಗೆ ಹಾಕಿಕೊಂಡು ನುಂಗಬೇಕು ॥

ಓಂ ಪ್ರಾಣಾಯ ಸ್ವಾಹಾ ।

ಓಂ ಅಪಾನಾಯ ಸ್ವಾಹಾ ।

ಓಂ ವ್ಯಾನಾಯ ಸ್ವಾಹಾ ।

ಓಂ ಉದಾನಾಯ ಸ್ವಾಹಾ ।

ಓಂ ಸಮಾನಾಯ ಸ್ವಾಹಾ ।

ಓಂ ಬ್ರಹ್ಮಣೇ ಸ್ವಾಹಾ ।

ನಂತರ ಮೌನದಿಂದ ಅಂದರೆ ಕೇವಲ ದೇಹದ ಮೌನದಿಂದಲ್ಲದೇ ಮಾನಸಿಕ ಮೌನದಿಂದಲೂ ಇದ್ದು (ಮೌನವೆಂದರೆ – ಲೌಕಿಕ, ಪ್ರಾಪಂಚಿಕ ವಿಷಯಗಳನ್ನು ದೇಹ ಹಾಗೂ ಮನಸ್ಸಿಗೆ ತಂದುಕೊಳ್ಳದೇ ಇರುವುದೇ ಮೌನವು, ಹಾಗೆಯೇ ಭಗವಂತನ ಮಾಹಾತ್ಮೆಗಳನ್ನು ಬಾಯಿ ಹಾಗೂ ಮನಸ್ಸಿನಿಂದ ವ್ಯಕ್ತಪಡಿಸಿದಾಗಲೂ ಅದೂಸಹಾ ಮೌನವೇ ಆಗಿರುತ್ತದೆ) ಭೋಜನವನ್ನು ಮಾಡಬೇಕು ।

ಭೋಜನವಾದ ನಂತರ ಬಲಕೈಯಲ್ಲಿ ನೀರನ್ನು ಇಟ್ಟುಕೊಂಡು, ಕೆಳಗಿನ ಮಂತ್ರವನ್ನು ಹೇಳಿ ಕುಡಿಯಬೇಕು, ಹಾಗೆ ಮಾಡುವ ಸಮಯದಲ್ಲಿ ಎಡಕೈಯ ಕಿರುಬೆರಳಿನ ಪಕ್ಕದಬೆರಳು ಆಹಾರಪಾತ್ರೆಯ ಪಶ್ಚಿಮದ ತುದಿಯಮೇಲೆ ಇರಬೇಕು ॥

ಓಂ ಅಮೃತಾಪಿಧಾನಮಸಿ ॥

ಆಮೇಲೆ ಕೈ, ಬಾಯಿ, ಕಾಲುಗಳನ್ನು ತೊಳೆದುಕೊಂಡು, 2 ಆಚಮನಗಳನ್ನು ಮಾಡುವುದು ॥

****

ಭಾಗ – 3

1. ಸಂಕಲ್ಪ
2. ಗಣಪತಿಪೂಜೆ
3. ಪುಣ್ಯಾಹ ಪ್ರಯೋಗ
4. ಶೋಭನನಾಂದೀ ಪ್ರಯೋಗ
5. ಅಂಕುರಾರೋಪಣ ಪ್ರಯೋಗ
6. ರಕ್ಷಾಬಂಧನ ಪ್ರಯೋಗ
7. ಅಗ್ನಿಮುಖ(ಹೋಮ) ಪ್ರಯೋಗ

ಅನುಜ್ಞೆ –

ಫಲತಾಂಬೂಲ ಸಹಿತಂ ಪರಿಷದ್ದಕ್ಷಿಣಾಂ ಗೃಹೀತ್ವಾ, ಬ್ರಾಹ್ಮಣಾನ್ ಪ್ರಾರ್ಥ್ಯ ॥

ದಕ್ಷಿಣೆ ಫಲತಾಂಬೂಲಗಳಿರುವ ತಟ್ಟೆಯನ್ನು ಹಿಡಿದು ನಿಂತುಕೊಂಡು, ಬ್ರಾಹ್ಮಣರನ್ನುದ್ದೇಶಿಸಿ ಕೆಳಗಿನ ವಾಕ್ಯಗಳನ್ನು ಹೇಳುವುದು ॥

ನಮಃ ಸದಸೇ । ನಮಃ ಸದಸಸ್ಪತಯೇ । ನಮಃ ಸಖೀನಾಂ । ಪುರೋಗಾಣಾಂ ಚಕ್ಷುಷೇ । ನಮೋದಿವೇ । ನಮಃ ಪೃಥಿವ್ಯೈ ॥

ಸಪ್ರಥ ಸಭಾಂ ಮೇ ಗೋಪಾಯ । ಯೇ ಚ ಸಭ್ಯಾಸ್ಸಭಾಸದಃ । ತಾನಿಂದ್ರಿಯಾವತಃ ಕುರು । ಸರ್ವಮಾಯುರುಪಾಸತಾಮ್ । ಸರ್ವೇಭ್ಯೋ ಮಹಾಜನೇಭ್ಯೋ ನಮಃ ॥

ಅಶೇಷೇ, ಹೇ(ಸಭ್ಯಾಃ) ಪರಿಷತ್ ಭವತ್ಪಾದಮೂಲೇ, ಮಯಾ ಸಮರ್ಪಿತಾಂ, ಇಮಾಂ ಸೌವರ್ಣೀಂ, ಅಲ್ಪೀಯಸೀಮಪಿ ದಕ್ಷಿಣಾಂ, ಯಥೋಕ್ತ ದಕ್ಷಿಣಾಮಿವ ಸ್ವೀಕೃತ್ಯ, ...ನಕ್ಷತ್ರೇ .....ರಾಶೌ ಜಾತಸ್ಯ .....ನಾಮಧೇಯಸ್ಯ ಮಯಾ ಕರಿಷ್ಯಮಾಣ.....ಆಖ್ಯಂ ಕರ್ಮ ಕರ್ತುಂ ಯೋಗ್ಯತಾಸಿದ್ಧಿಮನುಗೃಹಾಣ ॥

ಅದಾಗಿ, ಈ ಸಭೆಯಲ್ಲಿರುವ ತಮ್ಮಗಳ ಚರಣಗಳಲ್ಲಿ ನನ್ನಿಂದ ಸಮರ್ಪಿತವಾಗುತ್ತಿರುವ ಈ ದಕ್ಷಿಣೆಯು ಕಡಿಮೆಯಿದ್ದರೂ ಸಹ, ಇದನ್ನೇ ಸರಿಯಾದ ದಕ್ಷಿಣೆಯಂದು ಭಾವಿಸಿ ಸ್ವೀಕರಿಸಿ, ಈ ನಕ್ಷತ್ರ ರಾಶಿಗಳಲ್ಲಿ ಜನಿಸಿರುವ ನಾನು ಮಾಡಲಿರುವ, ಈ ಹೆಸರಿನ ಕರ್ಮವನ್ನು ಮಾಡಲು ಯೋಗ್ಯತೆಯನ್ನು ಈ ಸಭೆಯು ಅನುಗ್ರಹಿಸಬೇಕು, ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಬೇಕು ॥

ಶತಮಾನಂ ಭವತಿ ಶತಾಯುಃ ಪುರುಷಶ್ಶತೇಂದ್ರಿಯ ಆಯುಷ್ಯೇವೇಂದ್ರಿಯೇ ಪ್ರತಿತಿಷ್ಠತಿ ॥ ಯೋಗ್ಯತಾ ಸಿದ್ಧಿರಸ್ತು, ಸುಮುಹೂರ್ತಮಸ್ತು, ಇತಿ ಪ್ರತಿವಚನಂ ॥

ಬ್ರಾಹ್ಮಣರು, ಮೇಲಿನ ಮಂತ್ರದಿಂದ ಪವಿತ್ರವನ್ನು ಕೊಟ್ಟು। ಯೋಗ್ಯತೆಯು ಸಿದ್ಧಿಸಲಿ, ಸುಮುಹೂರ್ತವಾಗಿರಲೆಂದು ಬ್ರಾಹ್ಮಣರು ಕರ್ತೃಗಳಿಗೆ ಆಶೀರ್ವದಿಸಬೇಕು ॥

ಪ್ರೋಕ್ಷಣೆ –

ಪೂರ್ವಾಭಿಮುಖವಾಗಿ ಆಸನದ ಮೇಲೆ ಕುಳಿತು, ಈ ಶ್ಲೋಕವನ್ನು ಹೇಳಿಕೊಳ್ಳುತ್ತಾ, ಕರ್ತೃವಿನ ಆಚಮನಪಾತ್ರೆಯಿಂದ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು, ಕೈಗೆ ಹಾಕಿಕೊಂಡು, ಶರೀರಕ್ಕೆ ಪ್ರೋಕ್ಷಿಸಿಕೊಳ್ಳಬೇಕು ॥

ಅಪವಿತ್ರ: ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ। ಯ: ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ: ಶುಚಿ: ॥

ಆಸನಶುದ್ಧಿ –

(ಸ್ವಲ್ಪನೀರನ್ನು ಆಸನದಕೆಳಗೆ ಹಾಕಿ, ಆ ಜಾಗವನ್ನು ಹಿಡಿದುಕೊಂಡು, ಕೆಳಗಿನ ಶ್ಲೋಕವನ್ನು ಹೇಳುವುದು)

ಪೃಥ್ವಿ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ ಧೃತಾ। ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರುಚಾಸನಮ್ ॥ ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿ ಸಂಸ್ಥಿತಾ: । ಯೇ ಭೂತಾ ವಿಘ್ನಕರ್ತಾರಸ್ತೇನಶ್ಯಂತು ಶಿವಾಜ್ಞಯಾ ॥ ಅಪಕ್ರಾಮಂತು ಭೂತಾದ್ಯಾಸ್ಸರ್ವೇ ತೇ ಭೂಮಿಭಾರಕಾ: । ಸರ್ವೇಷಾಮವಿರೋಧೇನ ಬ್ರಹ್ಮಕರ್ಮ ಸಮಾರಭೇ ॥ ತೀಕ್ಷ್ಣದಂಷ್ಟ್ರ ಮಹಾಕಾಯ ಕಲ್ಪಾಂತ ದಹನೋಪಮ । ಭೈರವಾಯ ನಮಸ್ತುಭ್ಯಂ ಅನುಜ್ಞಾಂ ದಾತುಮರ್ಹಸಿ ॥

ಆಚಮನ –

ಕರ್ತೃ ಆಚಮ್ಯಪಾತ್ರೆ, ದೇವತಾಚಮ್ಯಪಾತ್ರೆ, ಕರ್ತೃ ಅರ್ಘ್ಯಪಾತ್ರೆ, ದೇವತಾರ್ಘ್ಯಪಾತ್ರೆಗಳನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವುದು ॥

ಕರ್ತೃವಿನ ಆಚಮ್ಯ ಪಾತ್ರೆಯಿಂದ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು, ಅದನ್ನು ಬಲಕೈಯಲ್ಲಿ ಹಾಕಿಕೊಂಡು ಕೆಳಗಿನ ಒಂದೊಂದು ನಾಮಗಳನ್ನು ಹೇಳಿಕೊಂಡು

ಒಮ್ಮೊಮ್ಮೆ ಕುಡಿಯಬೇಕು. 4 ನೇ ನಾಮವನ್ನು ಹೇಳಿ ನೀರನ್ನು ಕರ್ತೃವಿನ ಅರ್ಘ್ಯಪಾತ್ರೆಗೆ ಹಾಕಬೇಕು ॥

ಕೇಶವಾಯ ನಮ: । ನಾರಾಯಣಾಯ ನಮ: । ಮಾಧವಾಯ ನಮ: । ಗೋವಿಂದಾಯ ನಮ: ॥

((ಕೈ ತೊಳೆದುಕೊಂಡು, ಮುಂದಿನ ಒಂದೊಂದು ನಾಮಗಳನ್ನು ಹೇಳುತ್ತಾ, ದೇಹದ ಒಂದೊಂದು ಅಂಗಗಳನ್ನು ಮುಟ್ಟಬೇಕು))

ವಿಷ್ಣವೇ ನಮ: – ಬಲಮೂಗು, ಎಡಮೂಗು ॥

ಮಧುಸೂದನಾಯ ನಮ: – ಬಲಕಣ್ಣು, ಎಡಕಣ್ಣು ॥

ತ್ರಿವಿಕ್ರಮಾಯ ನಮ: – ಬಲಕಿವಿ, ಎಡಕಿವಿ ॥

ವಾಮನಾಯ ನಮ: – ಹೊಕ್ಕಳು ॥

ಶ್ರೀಧರಾಯ ನಮ: – ಹೃದಯ ॥

ಹೃಷೀಕೇಶಾಯ ನಮ: – ತಲೆ ॥

ಪದ್ಮನಾಭಾಯ ನಮ: – ಬಲಹೆಗಲು ॥

ದಾಮೋದರಾಯ ನಮ: – ಎಡಹೆಗಲು ॥ (ಈ ರೀತಿ 2 ಸಲ ಮಾಡಬೇಕು)

ಪ್ರಾಣಾಯಾಮ –

ಪವಿತ್ರವನ್ನು ಹಾಕಿಕೊಂಡು, ತರ್ಜನೀ, ಮಧ್ಯಮ ಬೆರಳುಗಳನ್ನು ಮಡಿಸಿಕೊಂಡು ಅಂಗುಷ್ಠ ಅನಾಮಿಕ ಕನಿಷ್ಠ ಬೆರಳುಗಳಿಂದ ಮೂಗಿನ ಎಡರಂಧ್ರದಿಂದ ಗಾಳಿಯನ್ನು ತೆಗೆದುಕೊಂಡು, ತುದಿಯನ್ನು ಮುಚ್ಚಿದಂತೆ ಹಿಡಿದುಕೊಂಡು ಗಾಳಿಯನ್ನು ಒಳಗೆ ನಿಲ್ಲಿಸಿಕೊಂಡು, ಮನಸ್ಸಿನಿಂದ ಕೆಳಗಿನಪ್ರಾಣಾಯಾಮ ಮಂತ್ರಗಳನ್ನು ಜಪಿಸಿ, ಬಲರಂಧ್ರದಿಂದ ಗಾಳಿಯನ್ನು ನಿಧಾನವಾಗಿ ಹೊರಗೆ ಬಿಡಬೇಕು । ಹೀಗೆ ಮಾಡಿದರೆ 1 ಪ್ರಾಣಾಯಾಮ ಆಗುತ್ತದೆ ॥

ಓಂ ಭೂಃ ಓಂ ಭುವಃ ಓಗ್ಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಗ್ಂ ಸತ್ಯಂ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥ ಓಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ಘಂಟಾನಾದ –

ಈ ಕೆಳಗಿನ ವಾಕ್ಯವನ್ನುಹೇಳಿ, ಘಂಟಾನಾದ ಮಾಡುವುದು ॥

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ॥ ಕುರ್ವೇ ಘಂಟಾರವಂ ತತ್ರ ದೇವತಾऽಹ್ವಾನ ಲಾಂಛನಮ್ ॥

ದೀಪಪೂಜಾ –

ಈ ಕೆಳಗಿನ ವಾಕ್ಯಗಳನ್ನುಹೇಳಿ, ದೀಪದಬುಡಕ್ಕೆ ಅರಿಶಿಣ, ಕುಂಕುಮ, ಹೂ, ಅಕ್ಷತೆಗಳನ್ನು ಪೂಜಿಸುವುದು ॥

ಭೋ ದೀಪದೇವೀ ರೂಪಸ್ತ್ವಂ ಕರ್ಮಸಾಕ್ಷೀ ಹ್ಯವಿಘ್ನಕೃತ್ । ಯಾವತ್ಕರ್ಮ ಸಮಾಪ್ತಿಸ್ಯಾತ್ ತಾವತ್ತ್ವಂ ಸುಸ್ಥಿರೋ ಭವ ॥ ದೀಪದೇವತಾಯೈ ನಮೋನಮಃ ಜ್ವಲ ಉಜ್ವಲ ಪ್ರಜ್ವಲ ॥

1. ಸಂಕಲ್ಪ

ಹೂ, ಅಕ್ಷತೆಗಳನ್ನು ಎಡಕೈಯಲ್ಲಿ ಇಟ್ಟುಕೊಂಡು, ಬಲಕೈಯನ್ನು ಅದರ ಮೇಲೆ ಮುಚ್ಚಿಕೊಂಡು, ಕೆಳಗೆ ತಿಳಿಸಿರುವಂತೆ ಹೇಳಬೇಕು ॥

ಶುಭೇ, ಶೋಭನೇಮುಹೂರ್ತೇ, ಅದ್ಯಬ್ರಹ್ಮಣಃ, ದ್ವಿತೀಯಪರಾರ್ಧೇ, ಶ್ವೇತವರಾಹಕಲ್ಪೇ, ವೈವಸ್ವತಮನ್ವಂತರೇ, ಅಷ್ಟಾವಿಂಶತಿತಮೇ ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡಕಾರಣ್ಯೇ, ಗೋದಾವರ್ಯಾಃ ದಕ್ಷಿಣೇತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೇ, ಮೇರೋರ್ದಕ್ಷಿಣೇಪಾರ್ಶ್ವೇ, ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೇ, ಚಾಂದ್ರಮಾನೇನ, ಪ್ರಭವಾದಿ ಷಷ್ಟ್ಯಾ ಸ್ಸಂವತ್ಸರಾಣಾಂ ಮಧ್ಯೇ, ಶ್ರೀಮತ್....ನಾಮಸಂವತ್ಸರೇ, ...ಅಯನೇ, ...ಋತೌ, ...ಮಾಸೇ, ...ಪಕ್ಷೇ, ...ಶುಭತಿಥೌ, ...ವಾಸರ ಯುಕ್ತಾಯಾಂ, ...ನಕ್ಷತ್ರಯುಕ್ತಾಯಾಂ, ...ಯೋಗ, ...ಕರಣ, ಏವಂಗುಣ ವಿಶೇಷಣ ವಿಶಿಷ್ಟಾಯಾಂ, ಶುಭತಿಥೌ, ಮಮಉಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ...ಗೋತ್ರೇ .....ನಕ್ಷತ್ರೇ, ...ರಾಶೌ ಜಾತಸ್ಯ, ...ನಾಮಧೇಯಸ್ಯ । .....ನಕ್ಷತ್ರೇ, ...ರಾಶೌ ಜಾತಾಯಾಃ .....ನಾಮ್ನ್ಯಾಃ, ಮಮ ಧರ್ಮಕಾಂತಾಯಾಃ । .....ನಕ್ಷತ್ರೇ,.....ರಾಶೌ ಜಾತಸ್ಯ .....ನಾಮಧೇಯಸ್ಯ, ಮಮ ಕುಮಾರಸ್ಯ । .....ನಕ್ಷತ್ರೇ,.....ರಾಶೌ ಜಾತಾಯಾಃ.....ನಾಮ್ನ್ಯಾಃ ಮಮ ಕುಮಾರ್ಯಾಃ । .....ಗೋತ್ರೇ .....ನಕ್ಷತ್ರೇ,.....ರಾಶೌ ಜಾತಸ್ಯ .....ನಾಮಧೇಯಸ್ಯ ಮಮ ಜನಕಸ್ಯ । .....ನಕ್ಷತ್ರೇ,.....ರಾಶೌ ಜಾತಾಯಾಃ.....ನಾಮ್ನ್ಯಾಃ, ಮಮ ಜನನ್ಯಾಃ ।

ಅಸ್ಮಾಕಂ ಸಹ ಕುಟುಂಬಾನಾಂ ಚ ಕ್ಷೇಮ, ಸ್ಥೈರ್ಯ, ವಿಜಯ, ವೀರ್ಯ, ಅಭಯ, ಆಯುರಾರೋಗ್ಯ ಐಶ್ವರ್ಯ ಅಭಿವೃದ್ಧ್ಯರ್ಥಂ । ಧರ್ಮಾರ್ಥ ಕಾಮ ಮೋಕ್ಷ ಚತುರ್ವಿಧ ಫಲ ಪುರುಷಾರ್ಥ ಸಿದ್ಧ್ಯರ್ಥಂ । ಸಕಲ ಅಪಮೃತ್ಯು ಪೀಡಾ–ಪರಿಹಾರ ದ್ವಾರಾ ದೀರ್ಘಾಯುಷ್ಯಾಭಿವೃದ್ಧ್ಯರ್ಥಂ । ಅಚಂಚಲ ಭಕ್ತಿ, ಜ್ಞಾನ, ನಿಷ್ಠಾ ಸಿದ್ಧ್ಯರ್ಥಂ । ಮಮ ಸಮಸ್ತ ಅಸದ್ವೃತ್ತಿ ನಿವಾರಣದ್ವಾರಾ, ಸಕಲ ಸದ್ವೃತ್ತಿ ಉದ್ಬೋಧನಾರ್ಥಂ ।

ಸಮಸ್ತ ಸನ್ಮಂಗಳಾವಾಪ್ತ್ಯರ್ಥಂ। ಜ್ಞಾನತಃ ಅಸತ್‌ಕೃತಾನಾಂ, ಅಜ್ಞಾನತಃ ಅಸತ್‌ಕೃತಾನಾಂ, ಸರ್ವೇಷಾಂ ಪಾಪಾನಾಂ ಅಪನೋದನದ್ವಾರಾ ಸದ್ವಿದ್ಯಾ ಸದ್ಬುದ್ಧಿ ಸತ್ಸಂಸ್ಕಾರ ಪ್ರಾಪ್ತ್ಯರ್ಥಂ। ಮಮ ಚಿತ್ತ ಶುದ್ಧ್ಯರ್ಥಂ। ಸಮಸ್ತದೇವತಾ ಅನುಗ್ರಹಸಿದ್ಧ್ಯರ್ಥಂ। ((ಮಮ .....ಉದ್ದಿಶ್ಯ .....ಸಂಸ್ಕಾರಾಖ್ಯಂ ಕರ್ಮ, ಆಚಾರ್ಯಾದಿ ಋತ್ವಿಜ್ಮುಖೇನ ಅನ್ಯೋನ್ಯಸಾಹಾಯ್ಯೇನ ಚ ಕರಿಷ್ಯೇ–ಕಾರಯಿಷ್ಯೇ)) ಅಥವಾ ((.....ದೇವತಾ ಶಾಂತ್ಯಾಖ್ಯಂ ಕರ್ಮ, ಆಚಾರ್ಯಾದಿ ಋತ್ವಿಜ್ಮುಖೇನ ಅನ್ಯೋನ್ಯಸಾಹಾಯ್ಯೇನ ಚ ಕರಿಷ್ಯೇ – ಕಾರಯಿಷ್ಯೇ)) ॥

ತದಂಗತದಾದೌ, ಋತ್ವಿಗ್ವರಣಂ / ಕಲಶಪೂಜಾಂ / ಗಣಪತಿಪೂಜಾಂ / ಪುಣ್ಯಾಹವಾಚನಂ / ಮಾತೃಕಾದೇವತಾ ಪೂಜಾಂ / ನಾಂದೀ ಸಮಾರಾಧನಂ / ಅಂಕುರಾರೋಪಣಂ / ರಕ್ಷಾಬಂಧನಾಖ್ಯಂ ಕರ್ಮಾಣಿ ಚ ಕರಿಷ್ಯೇ ॥

ಮೇಲೆ ತಿಳಿಸಿರುವಂತೆ ಸಂಕಲ್ಪವನ್ನು ಹೇಳಿಕೊಂಡು, ದೇವತಾ ಆಚಮ್ಯ ಪಾತ್ರೆಯಿಂದ ಒಂದು ಉದ್ಧರಣೆ ನೀರನ್ನು ಕೈಯಲ್ಲಿರುವ ಹೂ, ಅಕ್ಷತೆಗಳೊಂದಿಗೆ ದೇವತಾ ಅರ್ಘ್ಯಪಾತ್ರೆಗೆ ಬಿಡುವುದು ॥

ಋತ್ವಿಗ್ವರಣಂ –

ಪೂರ್ವೋಕ್ತ ಸಕಲಕಾಮನಾಸಿದ್ಧ್ಯರ್ಥಂ, ಪೂರ್ವೋಕ್ತ .....ಕರ್ಮಣಿ, (ಅಥವಾ ಪೂರ್ವೋಕ್ತ ತತ್ತದ್ದೇವತಾ ಪೂಜಾ, ಜಪ, ಹೋಮಾರ್ಥಂ) ಆಚಾರ್ಯತ್ವಂ ಕುರು ಆಚಾರ್ಯಂ ತ್ವಾಮಹಂ ವೃಣೇ / ಬ್ರಹ್ಮತ್ವಂ ಕುರು ಬ್ರಹ್ಮಾಣಂ ತ್ವಾಮಹಂ ವೃಣೇ / ಋತ್ವಿಜಂ ತ್ವಾಮಹಂ ವೃಣೇ ॥ ವೃತೋಸ್ಮಿ ಕರಿಷ್ಯಾಮಿ ಇತಿ ಪ್ರತಿವಚನಂ ॥

ಈ ಮೇಲಿನಂತೆ ಹೇಳಿ, ಆಚಾರ್ಯ ಮುಂತಾದ ಋತ್ವಿಜರಿಗೆ ದರ್ಭೆ ಮತ್ತು ದಕ್ಷಿಣೆಗಳನ್ನು ಕೊಟ್ಟು, ಸಂಕಲ್ಪಿತಕರ್ಮವನ್ನು ಮಾಡಲು ಆಹ್ವಾನಿಸಬೇಕು ॥ ಋತ್ವಿಜರು ಒಪ್ಪಿಗೆಯನ್ನು ಮೇಲಿರುವಂತೆ ತಿಳಿಸಬೇಕು ॥

ಕಲಶಪೂಜಾ –

ಕಲಶದ ಹೊರಭಾಗಕ್ಕೆ ಪೂರ್ವದಿಂದ ಪ್ರದಕ್ಷಿಣಾಕಾರವಾಗಿ ನಾಲ್ಕೂ ದಿಕ್ಕುಗಳಿಗೆ ಗಂಧವನ್ನು ಹಚ್ಚುವುದು, ಕಲಶದಜಲಕ್ಕೆ ಗಂಧ, ಅಕ್ಷತೆ, ಹೂವು, ತುಳಸಿ, ಅರಿಶಿಣ ಕುಂಕುಮಗಳನ್ನು ಹಾಕುವುದು, ಕಲಶವನ್ನು ಹಿಡಿದು ನಾಲ್ಕು ಸಲ ಗಾಯತ್ರೀ ಮಂತ್ರವನ್ನು ಜಪಿಸುವುದು ಹಾಗೂ ಈ ಕೆಳಗಿನ ಮಂತ್ರಗಳನ್ನು ಹೇಳುವುದು ॥

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಾಸ್ಸಮಾಶ್ರಿತಾಃ । ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾ: । ಕುಕ್ಷೌ ತು ಸಾಗರಾಸ್ಸರ್ವೇ ಸಪ್ತದ್ವೀಪಾ ವಸುಂಧರಾ । ಋಗ್ವೇದೋsಥಯಜುರ್ವೇದಃ ಸಾಮವೇದೋಹ್ಯಥರ್ವಣಃ । ಅಂಗೈಶ್ಚ ಸಹಿತಾಸ್ಸರ್ವೇ ಕಲಶಾಂಬು ಸಮಾಶ್ರಿತಾಃ । ಆಯಾಂತು ದೇವಪೂಜಾರ್ಥಂ ದುರಿತಕ್ಷಯಕಾರಕಾಃ । ಸರ್ವೇ ಸಮುದ್ರಾಃ ಸರಿತಸ್ತೀರ್ಥಾನಿ ಜಲದಾನದಾಃ । ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ । ನರ್ಮದೇ ಸಿಂಧು ಕಾವೇರಿ ಜಲೇsಸ್ಮಿನ್ ಸನ್ನಿಧಿಂ ಕುರು ॥

ಓಂ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಗ್ಂ ಸಚತಾ ಪರುಷ್ಣಿಯಾ । ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

ಆಪೋ ವಾ ಇದಗ್ಂ ಸರ್ವಂ ವಿಶ್ವಾ ಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪೋsನ್ನಮಾಪೋsಮೃತಮಾಪಃ ಸಮ್ರಾಡಾಪೋ ವಿರಾಡಾಪಃ ಸ್ವರಾಡಾಪಶ್ಛಂದಾಗ್ಸ್ಯಾಪೋ ಜ್ಯೋತೀಗ್ಷ್ಯಾಪೋ ಯಜೂಗ್ಷ್ಯಾಪಃ ಸತ್ಯಮಾಪಸ್ಸರ್ವಾ ದೇವತಾ ಆಪೋ ಭೂರ್ಭುವಸ್ಸುವರಾಪ ಓಮ್ ॥

ಅಸ್ಮಿನ್ ಕಲಶೇ ಗಂಗಾದಿ ಸರ್ವತೀರ್ಥಾನ್ಯಾವಾಹಯಾಮಿ ॥

ಕಲಶದ ನೀರನ್ನು ದೇವರಿಗೆ ಪ್ರೋಕ್ಷಿಸುವುದು, ಆಚಮನಪಾತ್ರೆಗಳಿಗೆ ಹಾಕುವುದು, ಪೂಜಾದ್ರವ್ಯಗಳಿಗೆ ಪ್ರೋಕ್ಷಿಸುವುದು, ನಮಗೂ ಪ್ರೋಕ್ಷಿಸಿಕೊಳ್ಳುವುದು, ದೇವತಾಅರ್ಘ್ಯ ಪಾತ್ರೆಗೂ ಸ್ವಲ್ಪ ಹಾಕುವುದು ॥

ಆತ್ಮಪೂಜೆ –

ಕೆಳಗಿನ ಶ್ಲೋಕದಿಂದ, ಅಹಂಬ್ರಹ್ಮತತ್ವವನ್ನು(ಆತ್ಮನನ್ನು) ಧ್ಯಾನಿಸುವುದು ॥

ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸನಾತನಃ ।
ತ್ಯಜೇದಜ್ಞಾನ ನಿರ್ಮಾಲ್ಯಂ ಸೋಽಹಂ ಭಾವೇನ ಪೂಜಯೇತ್ ॥

ಪೀಠಪೂಜಾಂ ಕರಿಷ್ಯೇ –

ಪೀಠಕ್ಕೆ ಅಕ್ಷತೆಯನ್ನು ಕೆಳಗಿನ ಪ್ರತೀನಾಮವನ್ನು ಹೇಳಿ ಹಾಕುವುದು ॥

ಆಧಾರ ಶಕ್ತ್ಯೈ ನಮಃ । ಮೂಲಪ್ರಕೃತ್ಯೈ ನಮಃ । ಕೂರ್ಮಾಯ ನಮಃ । ಅನಂತಾಯ ನಮಃ । ಪೃಥಿವ್ಯೈ ನಮಃ । ಕ್ಷೀರಸಾಗರಾಯ ನಮಃ । ರತ್ನದ್ವೀಪಾಯ ನಮಃ । ಭೂಮ್ಯೈ ನಮಃ ॥

ಮಂಟಪಪೂಜಾಂ ಕರಿಷ್ಯೇ –

ಮಂಟಪಕ್ಕೆ ಅಕ್ಷತೆಯನ್ನು ಕೆಳಗಿನ ಪ್ರತೀನಾಮವನ್ನೂ ಹೇಳಿ ಹಾಕುವುದು ॥

ರತ್ನಮಂಟಪಾಯ ನಮಃ । ಶ್ವೇತಮಂಟಪಾಯ ನಮಃ । ಶೃಂಗಾರಮಂಟಪಾಯ ನಮಃ । ಐಶ್ವರ್ಯಮಂಟಪಾಯ ನಮಃ । ಸುವರ್ಣಮಂಟಪಾಯ ನಮಃ ॥

ದ್ವಾರಪಾಲಕಪೂಜಾಂ ಕರಿಷ್ಯೇ –

ಕೆಳಗೆ ತಿಳಿಸಿರುವ ದಿಕ್ಕುಗಳಿಗೆ ಅಕ್ಷತೆಯನ್ನು ಹಾಕುವುದು ॥

ಪೂರ್ವದ್ವಾರೇ ದ್ವಾರಶ್ರಿಯೈನಮಃ – ಧಾತ್ರೇನಮಃ, ವಿಧಾತ್ರೇನಮಃ ।

ದಕ್ಷಿಣದ್ವಾರೇ ದ್ವಾರಶ್ರಿಯೈನಮಃ – ಗುಹಾಯನಮಃ, ಗಣಪತಯೇನಮಃ ।

ಪಶ್ಚಿಮದ್ವಾರೇ ದ್ವಾರಶ್ರಿಯೈನಮಃ – ನಂದೀಶ್ವರಾಯನಮಃ, ಕ್ಷೇತ್ರಪಾಲಾಯನಮಃ ।

ಉತ್ತರದ್ವಾರೇ ದ್ವಾರಶ್ರಿಯೈನಮಃ – ಚಂಡೀಶ್ವರಾಯನಮಃ, ಭೃಂಗೀಶ್ವರಾಯನಮಃ ।

ಊರ್ಧ್ವದ್ವಾರೇ ದ್ವಾರಶ್ರಿಯೈನಮಃ – ಆಕಾಶಾಯನಮಃ, ಅಂತರಿಕ್ಷಾಯನಮಃ ।
ಅಧೋದ್ವಾರೇ ದ್ವಾರಶ್ರಿಯೈನಮಃ – ಭೂಮ್ಯೈನಮಃ, ಪಾತಾಲಾಯನಮಃ ॥

2. ಶ್ರೀ ಮಹಾಗಣಪತಿಪೂಜೆ

ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ, ಮಹಾಗಣಪತಿಪೂಜಾಂ ಕರಿಷ್ಯೇ ॥

ದೇವತಾಚಮನಪಾತ್ರೆಯಿಂದ, ಅರ್ಘ್ಯಪಾತ್ರೆಗೆ ನೀರುಬಿಟ್ಟು, ಹೂವು ಅಕ್ಷತೆಗಳನ್ನು ಹಿಡಿದುಕೊಂಡು ಈ ಕೆಳಗಿನ ಮಂತ್ರಗಳನ್ನು ಹೇಳಿ, ಗಣಪತಿಗೆ ಸಮರ್ಪಿಸಿ, ಆವಾಹಿಸುವುದು ಹಾಗೂ ಕೆಳಗೆತಿಳಿಸಿರುವ ಉಳಿದ ಉಪಚಾರಗಳನ್ನೂ ನೆರವೇರಿಸುವುದು ॥

ಓಂ ಗಣಾನಾಂ ತ್ವಾ ಗಣಪತಿಗ್ಂ ಹವಾಮಹೇ ಕವಿಂ ಕವೀನಾಮುಪ ಮಶ್ರವಸ್ತಮಮ್ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆನಃ ಶೃಣ್ವನ್ನೂತಿಭಿಸ್ಸೀದ
ಸಾದನಮ್ ॥

ಓಂ ಮಹಾಗಣಪತಯೇನಮಃ, ಧ್ಯಾಯಾಮಿ, ಆವಾಹಯಾಮಿ / ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ / ವಸ್ತ್ರಂಸಮರ್ಪಯಾಮಿ / ಉಪವಸ್ತ್ರಂಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ /

ನಾಮಪೂಜಾಂ ಕರಿಷ್ಯೇ –

ಕೆಳಗಿನ ನಾಮಗಳನ್ನು ಹೇಳುತ್ತಾ, ಹೂ ಅಕ್ಷತೆಗಳನ್ನು ಗಣಪತಿಗೆ ಪೂಜಿಸಬೇಕು ॥

ಓಂ ಸುಮುಖಾಯ ನಮಃ । ಓಂ ಏಕದಂತಾಯ ನಮಃ । ಓಂ ಕಪಿಲಾಯ ನಮಃ । ಓಂ ಗಜಕರ್ಣಕಾಯ ನಮಃ । ಓಂ ಲಂಬೋದರಾಯ ನಮಃ । ಓಂ ವಿಕಟಾಯ ನಮಃ । ಓಂ ವಿಘ್ನರಾಜಾಯ ನಮಃ । ಓಂ ಗಣಾಧಿಪಾಯ ನಮಃ । ಓಂ ಧೂಮಕೇತವೇ ನಮಃ । ಓಂ ಗಣಾಧ್ಯಕ್ಷಾಯ ನಮಃ । ಓಂ ಫಾಲಚಂದ್ರಾಯ ನಮಃ । ಓಂ ಗಜಾನನಾಯ ನಮಃ ।

ಓಂ ಮೂಷಕವಾಹನಾಯ ನಮಃ । ಓಂ ಕುಮಾರಗುರವೇ ನಮಃ ।
ಓಂ ಸರ್ವಸಿದ್ಧಿಪ್ರದಾಯಕಾಯ ನಮಃ । ಓಂ ಶ್ರೀ ಮಹಾಗಣಪತಯೇ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ / ನೈವೇದ್ಯಂ ಸಮರ್ಪಯಾಮಿ / ತಾಂಬೂಲಂ ಸಮರ್ಪಯಾಮಿ / ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ / ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ / ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ / ಪ್ರಸನ್ನಾರ್ಘ್ಯಂ ಸಮರ್ಪಯಾಮಿ /

ಪ್ರಾರ್ಥನಾಂ ಕರಿಷ್ಯೇ –
ಅಗಜಾನನ ಪದ್ಮಾರ್ಕಂ ಗಜಾನನಮಹರ್ನಿಶಂ । ಅನೇಕದಂ ತಂ ಭಕ್ತಾನಾಂ ಏಕದಂತಂ ಉಪಾಸ್ಮಹೇ ॥

ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ । ನಿರ್ವಿಘ್ನಂ ಕುರುಮೇ ದೇವ ಸರ್ವ ಕಾರ್ಯೇಷು ಸರ್ವದಾ ॥

ಓಂ ಮಹಾಗಣಪತಯೇನಮಃ ಪ್ರಾರ್ಥಯಾಮಿ, ಸರ್ವವಿಘ್ನಹರೋಭವ ॥
ಸರ್ವೋಪಚಾರಪೂಜಾಂ ಸಮರ್ಪಯಾಮಿ । ಅನಯಾಪೂಜಯಾ ಶ್ರೀ ಮಹಾಗಣಪತಿಃ ಪ್ರೀಯತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆನೀರನ್ನು, ದೇವತಾ ಆಚಮ್ಯಪಾತ್ರೆಯಿಂದ ದೇವತಾರ್ಘ್ಯ ಪಾತ್ರೆಗೆ ಹಾಕುವುದು । ಗಣಪತಿಯ ಪ್ರಸಾದವನ್ನು ತೆಗೆದುಕೊಳ್ಳುವುದು ॥

3. ಪುಣ್ಯಾಹಪ್ರಯೋಗ:

ಸ್ಥಳಶುದ್ಧ್ಯರ್ಥಂ, ದ್ರವ್ಯಶುದ್ಧ್ಯರ್ಥಂ, ಭಾಂಡಭಾಜನಶುದ್ಧ್ಯರ್ಥಂ, ಪುಣ್ಯಾಹವಾಚನಂ ಕರಿಷ್ಯೇ । ತದಾದೌ ಭೂಪ್ರಾರ್ಥನಾದಿ ಕಲಶಸ್ಥಾಪನಂ ಕರಿಷ್ಯೇ ॥

ಮೇಲಿನ ವಾಕ್ಯಗಳನ್ನು ಹೇಳಿ, ಕಲಶಸ್ಥಾಪನೆಯ ವಿಧಾನವನ್ನು ಕೆಳಗಿರುವಂತೆ ಆರಂಭಿಸಬೇಕು ॥

ಭೂ ಪ್ರಾರ್ಥನಾದಿ ಕಲಶಸ್ಥಾಪನೆ –

ಪುಣ್ಯಾಹದ ಕಲಶಗಳನ್ನು ದರ್ಭೆಯಿಂದ ಸ್ಪರ್ಶಿಸಿಕೊಂಡು, ಕೆಳಗಿನ ಮಂತ್ರಗಳನ್ನು ಹೇಳುವುದು ॥

ಓಂ ಮಹೀದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಮ್ । ಪಿಪೃತಾಂನೋ ಭರೀಮಭಿಃ (ಭೂಮಿ) ॥

ಓಷಧಯಃ ಸಂವದಂತೇ ಸೋಮೇನ ಸಹರಾಜ್ಞಾ । ಯಸ್ಮೈ ಕರೋತಿ ಬ್ರಾಹ್ಮಣಸ್ತ್ವಂ ರಾಜನ್ ಪಾರಯಾಮಸಿ (ಧಾನ್ಯರಾಶಿ) ॥

ಓಂ ಆಜಿಘ್ರ ಕಲಶಂ ಮಹ್ಯುರುಧಾರಾ ಪಯಸ್ವತ್ಯಾತ್ವಾ ವಿಶಂತ್ವಿಂದವಸ್ಸಮುದ್ರಮಿವ ಸಿಂಧವಸ್ಸಾಮಾ ಸಹಸ್ರ ಆಭಜ ಪ್ರಜಯಾ ಪಶುಭಿಸ್ಸಹ ಪುನರ್ಮಾವಿಶತಾದ್ರಯಿಃ (ಕಲಶ) ॥

ಓಂ ತಂತುಂತನ್ವನ್ ರಜಸೋ ಭಾನುಮನ್ವಿಹಿ ಜ್ಯೋತಿಷ್ಮತಃ ಪಥೋ ರಕ್ಷ ಧಿಯಾ ಕೃತಾನ್ । ಅನುಲ್ಬಣಂ ವಯತ ಜೋಗುವಾ ಮಪೋ ಮನುರ್ಭವ ಜನಯಾ ದೈವ್ಯಂ ಜನಮ್ (ದಾರ) ॥

ಓಂ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಗ್ಂ ಸಚತಾ ಪರುಷ್ಣಿಯಾ । ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ (ಜಲ) ॥

ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ (ಗೋಮೂತ್ರ) ॥

ಓಂ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ । ಈಶ್ವರೀಗ್ಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ (ಗೋಮಯ) ॥

ಓಂ ಆಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣಿಯಮ್ । ಭವಾ ವಾಜಸ್ಯ ಸಂಗಥೇ (ಹಾಲು) ॥

ಓಂ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾ ಕರತ್ಪ್ರಣ ಆಯೂಗ್ಂಷಿ ತಾರಿಷತ್(ಮೊಸರು) ॥

ಓಂ ಶುಕ್ರಮಸಿ ಜ್ಯೋತಿರಸಿ ತೇಜೋಽಸಿ ದೇವೋ ವಸ್ಸವಿತೋತ್ಪುನಾತ್ವಚ್ಛಿದ್ರೇಣ ಪವಿತ್ರೇಣ ವಸೋಸ್ಸೂರ್ಯಸ್ಯ ರಶ್ಮಿಭಿಃ (ತುಪ್ಪ) ॥

ದೇವಸ್ಯತ್ವಾ ಸವಿತುಃ ಪ್ರಸವೇ ಅಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್ (ಕುಶೋದಕ) ॥

ಓಂ ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ । ಮಾಧ್ವೀರ್ನಃ ಸಂತ್ವೋಷಧೀಃ । ಮಧುನಕ್ತಮುತೋಷಸಿ ಮಧುಮತ್ಪಾರ್ಥಿವಗ್ಂ ರಜಃ । ಮಧು ದ್ಯೌರಸ್ತು ನಃ ಪಿತಾ । ಮಧುಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ । ಮಾಧ್ವೀರ್ಗಾವೋ ಭವಂತು ನಃ(ಜೇನು) ॥

ಓಂ ತಾನಃ ಶಿವಾಃ ಶರ್ಕರಾಸ್ಸಂತು ಸರ್ವಾಃ । ಅಗ್ನೇ ರೇತಶ್ಚಂದ್ರಗ್ಂ ಹಿರಣ್ಯಮ್ । ಅದ್ಭ್ಯಃ ಸಂಭೂತಮಮೃತಂ ಪ್ರಜಾಸು । ತತ್ಸಂಭರನ್ನುತ್ತರತೋ ನಿಧಾಯ । ಅತಿ ಪ್ರಯಚ್ಛಂದುರಿತಿಂ ತರೇಯಮ್(ಸಕ್ಕರೆ) ॥

ಓಂ ಆಯನೇತೇ ಪರಾಯಣೇ ದೂರ್ವಾರೋಹಂತು ಪುಷ್ಪಿಣೀಃ । ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ (ಹೂ, ದೂರ್ವೆ, ಪತ್ರೆ) ॥

ಓಂ ಅಗ್ನೇರೇತಶ್ಚಂದ್ರಗ್ಂ ಹಿರಣ್ಯಮ್ । ಅದ್ಭ್ಯಃ ಸಂಭೂತ ಮಮೃತಂ ಪ್ರಜಾಸು । ತತ್ಸಂಭರನ್ ಉತ್ತರತೋ ನಿಧಾಯು । ಅತಿ ಪ್ರಯುಚ್ಛನ್ ದುರಿತಿಂತರೇಯಮ್(ಹಿರಣ್ಯ) ॥

ಓಂ ಅಶ್ವತ್ಥೇವೋ ನಿಶದನಂ ಪರ್ಣೇವೋ ವಸತಿಃಕೃತಾ । ಗೋಭಾಜ ಇತ್ಕಿಲಾಸಥ ಯತ್ಸನವಥ ಪೂರುಷಂ(ಪಲ್ಲವ) ॥

ಓಂ ಪವಿತ್ರವಂತಃ ಪರಿ ವಾಜಮಾಸತೇ । ಪಿತೈಷಾಂ ಪ್ರತ್ನೋ ಅಭಿರಕ್ಷತಿ ವ್ರತಮ್ । ಮಹಸ್ಸಮುದ್ರಂ ವರುಣಸ್ತಿರೋದಧೇ । ಧೀರಾ ಇಚ್ಛೇಕುರ್ಧರುಣೇಷ್ವಾರಭಮ್ । ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ । ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ । ಅತಪ್ತ ತನೂರ್ನ ತದಾಮೋ ಅಶ್ನತೇ । ಶೃತಾಸ ಇದ್ವಹಂತಸ್ತತ್ಸಮಾಶತ (ದರ್ಭೆಯಕೂರ್ಚ) ॥

ಓಂ ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ । ಬೃಹಸ್ಪತಿ ಪ್ರಸೂತಾಸ್ತಾನೋ ಮುಂಚಂತ್ವಗ್ಂ ಹಸಃ (ತೆಂಗಿನಕಾಯಿ) ॥

ಓಂ ವಾಸೋ ದದಾತಿ । ಸರ್ವದೇವತ್ಯಂ ವೈ ವಾಸಃ । ಸರ್ವಾ ಏವ ದೇವತಾಃ ಪ್ರೀಣಾತಿ (ವಸ್ತ್ರ) ॥

ಓಂ ಪೂರ್ಣಾ ದರ್ವಿಪರಾ ಪತಸುಪೂರ್ಣಾ ಪುನರಾಪತ । ವಸ್ನೇವ ವಿಕ್ರೀಣಾವಹಾ ಇಷಮೂರ್ಜಗ್ಂ ಶತಕ್ರತೋ ॥

ಓಂ ಇಮಂ ಮೇ ವರುಣ ಶ್ರುಧೀಹವ ಮದ್ಯಾ ಚ ಮೃಡಯ । ತ್ವಾಮವಸ್ಯು ರಾಚಕೇ ॥
ಓಂ ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ ।
ಅಹೇಡಮಾನೋ ವರುಣೇಹಬೋಧ್ಯುರುಶಗ್ಂ ಸಮಾನ ಆಯುಃ ಪ್ರಮೋಷೀಃ ॥

ಕೆಳಗಿನ ವಾಕ್ಯಗಳಿಂದ, ಕಲಶಕ್ಕೆ ಅಕ್ಷತೆಯನ್ನು ಪೂಜಿಸಿ, ವರುಣದೇವನನ್ನು ಆವಾಹಿಸುವುದು ॥

ಓಂ ಭೂಃ ವರುಣಮಾವಾಹಯಾಮಿ । ಓಂ ಭುವಃ ವರುಣಮಾವಾಹಯಾಮಿ । ಓಗ್ಂಸುವಃ ವರುಣಂ ಆವಾಹಯಾಮಿ । ಓಂ ಭೂರ್ಭುವಸ್ಸುವಃ ವರುಣಂ ಆವಾಹಯಾಮಿ ॥

ವರುಣದೇವನಿಗೆ, ಕೆಳಗೆ ತಿಳಿಸಿರುವಂತೆ ಉಪಚಾರ ಪೂಜೆಗಳನ್ನು ಮಾಡುವುದು ॥

ಓಂ ವರುಣಾಯನಮಃ, ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ /

ವಸ್ತ್ರಂಸಮರ್ಪಯಾಮಿ / ಉಪವಸ್ತ್ರಂಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ /

ನಾಮಪೂಜಾಂ ಕರಿಷ್ಯೇ –

ಕೆಳಗಿನ ನಾಮಗಳನ್ನು ಹೇಳುತ್ತಾ, ಹೂ ಅಕ್ಷತೆಗಳನ್ನು ವರುಣನಿಗೆ ಪೂಜಿಸಬೇಕು ॥

ವರುಣಾಯ ನಮಃ । ಪ್ರಚೇತಸೇ ನಮಃ । ಸ್ವರೂಪಿಣೇ ನಮಃ । ಅಪಾಂಪತಯೇ ನಮಃ । ಮಕರವಾಹನಾಯ ನಮಃ । ತೀರ್ಥರಾಜಾಯ ನಮಃ । ಜಲಾಧಿಪತಯೇ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ / ನೈವೇದ್ಯಂ ಸಮರ್ಪಯಾಮಿ / ತಾಂಬೂಲಂ ಸಮರ್ಪಯಾಮಿ / ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ / ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ / ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ / ಪ್ರಸನ್ನಾರ್ಘ್ಯಂ ಸಮರ್ಪಯಾಮಿ / ಪ್ರಾರ್ಥಯಾಮಿ, ನಮಸ್ಕರೋಮಿ / ಸರ್ವೋಪಚಾರಪೂಜಾಂ ಸಮರ್ಪಯಾಮಿ / ಅನಯಾಪೂಜಯಾ ಶ್ರೀವರುಣಃ ಪ್ರೀಯತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆನೀರನ್ನು, ದೇವತಾ ಆಚಮ್ಯಪಾತ್ರೆಯಿಂದ ದೇವತಾರ್ಘ್ಯ ಪಾತ್ರೆಗೆ ಹಾಕುವುದು ॥

ಬ್ರಾಹ್ಮಣಾನಾಂ ಅಕ್ಷತಾನ್ ಪ್ರದಾಯ । ಪುಣ್ಯಾಹಾಂಗಂ ನಾನಾಗೋತ್ರಾನ್ ಬ್ರಾಹ್ಮಣಾನ್ ಹಿರಣ್ಯೇನ ಭೋಜಯಿಷ್ಯೇ । ಇತಿ ಯತ್ಕಿಂಚಿತ್ ಹಿರಣ್ಯಂ ಸಾಕ್ಷತೋದಕಂ ಪಾತ್ರೇ ನಿನೀಯ ॥

ಬ್ರಾಹ್ಮಣರ ಕೈಗೆ ಅಕ್ಷತೆಯನ್ನು ಕೊಡುವುದು । ಪುಣ್ಯಾಹಾಂಗವಾಗಿ ನಾನಾಗೋತ್ರದ ಬ್ರಾಹ್ಮಣರಿಗೆ ಯಥಾಶಕ್ತಿ ಹಿರಣ್ಯದಿಂದ ಉಪಚರಿಸುತ್ತೇನೆ ಎಂದು, ನೀರು ಅಕ್ಷತೆಯೊಂದಿಗೆ ಹಿರಣ್ಯವನ್ನು ಪಾತ್ರೆಯಲ್ಲಿ ಹಾಕಬೇಕು । ಅದನ್ನು ಬ್ರಾಹ್ಮಣರಿಗೆ ಕೊಡಬೇಕು ॥

ಭವದ್ಭಿಃ ಅನುಜ್ಞಾತಃ ಪುಣ್ಯಂ ಪುಣ್ಯಾಹಂ ವಾಚಯಿಷ್ಯೇ । ವಾಚ್ಯತಾಂ ಇತಿ ಪ್ರತಿವಚನಂ ॥
ನಿಮ್ಮಿಂದ ಒಪ್ಪಿಗೆಯನ್ನು ಪಡೆದು, ಪುಣ್ಯಾಹ ಕರ್ಮವನ್ನು ಮಾಡುತ್ತಿದ್ದೇನೆ, ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಬೇಕು । ಒಪ್ಪಿಗೆಯನ್ನು ಕೊಟ್ಟಿದ್ದೇವೆ ಮಾಡಿ, ಎಂಬುದು ಬ್ರಾಹ್ಮಣರ ಮಾತು ॥

ಓಂ ಯತ್ಪುಣ್ಯಂ ನಕ್ಷತ್ರಂ । ತದ್ಬಟ್ಕುರ್ವೀತೋಪವ್ಯುಷಮ್ । ಯದಾ ವೈ ಸೂರ್ಯ ಉದೇತಿ । ಅಥ ನಕ್ಷತ್ರಂ ನೈತಿ । ಯಾವತಿ ತತ್ರ ಸೂರ್ಯೋ ಗಚ್ಛೇತ್ । ಯತ್ರ ಜಘನ್ಯಂ ಪಶ್ಯೇತ್ । ತಾವತಿ ಕುರ್ವೀತ ಯತ್ಕಾರೀಸ್ಯಾತ್ । ಪುಣ್ಯಾಹ ಏವ ಕುರುತೇ ॥

ಓಂತಾನಿ ವಾ ಏತಾನಿ ಯಮನಕ್ಷತ್ರಾಣಿ । ಯಾನ್ಯೇವ ದೇವ ನಕ್ಷತ್ರಾಣಿ । ತೇಷು ಕುರ್ವೀತ ಯತ್ಕಾರೀಸ್ಯಾತ್ । ಪುಣ್ಯಾಹ ಏವ ಕುರುತೇ ॥

ಕರ್ಮಣಃ ಪುಣ್ಯಾಹಂ ಭವಂತೋಬ್ರುವಂತು ॥
ಮೇಲಿನವಾಕ್ಯವನ್ನು ಹೇಳಿ, ಕರ್ತೃವು ಅಕ್ಷತೆಯನ್ನು ಬ್ರಾಹ್ಮಣರ ಮೇಲೆ ಹಾಕುವುದು ॥

ಪುಣ್ಯಾಹಂ ಕರ್ಮಣೋಸ್ತು ಇತಿ ಪ್ರತಿವಚನಂ ॥
ಮೇಲಿನವಾಕ್ಯವನ್ನು ಹೇಳಿ, ಅಕ್ಷತೆಯನ್ನು ಬ್ರಾಹ್ಮಣರು ಕಲಶದ ಮತ್ತು ಕರ್ತೃವಿನ ಮೇಲೆ ಹಾಕುವುದು ॥

ಓಂಸ್ವಸ್ತಿನ ಇಂದ್ರೋ ವೃದ್ಧಶ್ರವಾಃ । ಸ್ವಸ್ತಿನಃ ಪೂಷಾ ವಿಶ್ವವೇದಾಃ । ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟ ನೇಮಿಃ । ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಓಂಅಷ್ಟೌದೇವಾ ವಸವಸ್ಸೋವ್ಯಾಸಃ । ಚತಸ್ರೋ ದೇವೀ ರಜರಾ ಶ್ರವಿಷ್ಠಾಃ । ತೇ ಯಜ್ಞಂ ಪಾಂತು ರಜಸಃ ಪರಸ್ತಾತ್ । ಸಂವತ್ಸರೀಣ ಮಮೃತಗ್ಂ ಸ್ವಸ್ತಿ ॥

ಕರ್ಮಣೇ ಸ್ವಸ್ತಿ ಭವಂತೋಬ್ರುವಂತು ॥

ಮೇಲಿನವಾಕ್ಯವನ್ನು ಹೇಳಿ, ಕರ್ತೃವು ಅಕ್ಷತೆಯನ್ನು ಬ್ರಾಹ್ಮಣರ ಮೇಲೆ ಹಾಕುವುದು ॥

ಸ್ವಸ್ತಿಕರ್ಮಣೇಸ್ತು, ಇತಿ ಪ್ರತಿವಚನಂ ॥

ಮೇಲಿನವಾಕ್ಯವನ್ನು ಹೇಳಿ ಅಕ್ಷತೆಯನ್ನು ಬ್ರಾಹ್ಮಣರು ಕಲಶದ ಮತ್ತು ಕರ್ತೃವಿನ ಮೇಲೆ ಹಾಕುವುದು ॥

ಓಂ ಋದ್ಧ್ಯಸ್ಮ ಹವ್ಯೈರ್ನಮಸೋಪಸದ್ಯ । ಮಿತ್ರಂ ದೇವಂ ಮಿತ್ರಧೇಯಂ ನೋ ಅಸ್ತು । ಅನೂರಾಧಾನ್, ಹವಿಷಾ ವರ್ಧಯಂತಃ । ಶತಂ ಜೀವೇಮ ಶರದ ಸ್ಸವೀರಾಃ ।

ಓಂ ತ್ರೀಣಿತ್ರೀಣಿ ವೈ ದೇವಾನಾ ಮೃದ್ಧಾನಿ । ತ್ರೀಣಿ ಛಂದಾಗ್ಂಸಿ । ತ್ರೀಣಿ ಸವನಾನಿ । ತ್ರಯ ಇಮೇ ಲೋಕಾಃ । ಋಧ್ಯಾ ಮೇವ ತದ್ವೀರ್ಯ ಏಷು ಲೋಕೇಷು ಪ್ರತಿ ತಿಷ್ಠತಿ ॥

ಕರ್ಮಣಃ ಋದ್ಧಿಂ ಭವಂತೋಬ್ರುವಂತು ॥

ಮೇಲಿನವಾಕ್ಯವನ್ನು ಹೇಳಿ, ಕರ್ತೃವು ಅಕ್ಷತೆಯನ್ನು ಬ್ರಾಹ್ಮಣರ ಮೇಲೆ ಹಾಕುವುದು ॥

ಕರ್ಮಋದ್ಧ್ಯತಾಂ ಇತಿ ಪ್ರತಿವಚನಂ । ಋದ್ಧಿಃ ಸಮೃದ್ಧಿಃ ಶಾಂತಿಃ ಪುಷ್ಟಿಃ ತುಷ್ಟಿಃ ಚಾಸ್ತು ಇತಿ ಪ್ರತಿವಚನಂ ॥

ಮೇಲಿನವಾಕ್ಯವನ್ನು ಹೇಳಿ, ಅಕ್ಷತೆಯನ್ನು ಬ್ರಾಹ್ಮಣರು ಕಲಶದ ಮತ್ತು ಕರ್ತೃವಿನ ಮೇಲೆ ಹಾಕುವುದು ॥

ಉತ್ತರಸ್ಥ ಪುಣ್ಯಾಹಕಲಶೋದಕೇನ, "ಶಾಂತಿರಸ್ತು...." ಇತ್ಯಾದಿಭಿಃ ಪಾತ್ರಾಂತರೇ ಕಿಂಚಿತ್ಕಿಂಚಿತ್ ನಿನೀಯಾತ್ ॥

ಪುಣ್ಯಾಹದ ಉತ್ತರಕಲಶದ ನೀರನ್ನು (ಕಲಶವನ್ನು ಎತ್ತದೇ), ಅದರ ಉತ್ತರಕ್ಕೆ ಬೇರೊಂದು ಪಾತ್ರೆಯನ್ನು ಇಟ್ಟುಕೊಂಡು, ಅದಕ್ಕೆ "ಶಾಂತಿರಸ್ತು" ಇತ್ಯಾದಿ ಈ ಕೆಳಗಿನವಾಕ್ಯಗಳನ್ನು ಹೇಳುತ್ತಾ, ಉದ್ಧರಣೆಯಿಂದ ಸ್ವಲ್ಪಸ್ವಲ್ಪ ಹಾಕುತ್ತಿರಬೇಕು ॥

ಶಾಂತಿರಸ್ತು, ಪುಷ್ಟಿರಸ್ತು, ತುಷ್ಟಿರಸ್ತು, ವೃದ್ಧಿರಸ್ತು, ಅವಿಘ್ನಮಸ್ತು, ಆಯುಷ್ಯಮಸ್ತು, ಆರೋಗ್ಯಮಸ್ತು, ಸ್ವಸ್ತ್ಯಸ್ತು, ಶಿವಂ ಕರ್ಮಾಸ್ತು, ಕರ್ಮಸಮೃದ್ಧಿರಸ್ತು, ಪುತ್ರಸಮೃದ್ಧಿರಸ್ತು, ವೇದಶಾಸ್ತ್ರ ಸಮೃದ್ಧಿರಸ್ತು, ಧನಧಾನ್ಯ ಸಮೃದ್ಧಿರಸ್ತು, ಇಷ್ಟಸಂಪದಸ್ತು, ಪುಣ್ಯಾಹಸಮೃದ್ಧಿರಸ್ತು, ಶುಭಂಕರ್ಮಾಸ್ತು, ಪ್ರಜಾಪತಿಃ ಪ್ರೀಯತಾಂ,

ಐಶಾನ್ಯಾಂ ಬಹಿರ್ದೇಶೇ ಅರಿಷ್ಟನಿರಸನಮಸ್ತು ॥

ಈ ಮೇಲಿನ ಒಂದುವಾಕ್ಯಕ್ಕೆ, ಈಶಾನ್ಯದಿಕ್ಕಿಗೆ ನೆಲದಮೇಲೆ ನೀರನ್ನು ಹಾಕಬೇಕು ॥

ನೈಋತ್ಯಾಂಯತ್ತಾಪಂ ತತ್ಪ್ರತಿಹತಮಸ್ತು । ಅಪ ಉಪಸ್ಪೃಶ್ಯ ॥

ಈ ಮೇಲಿನ ಒಂದುವಾಕ್ಯಕ್ಕೆ, ಕಲಶದ ಹೊರಗೆ ನೈಋತ್ಯದಿಕ್ಕಿಗೆ ನೆಲದಮೇಲೆ ನೀರನ್ನು ಹಾಕಬೇಕು । ಕರ್ತೃವಿನ ಆಚಮ್ಯಪಾತ್ರೆಯಿಂದ ಕೈ ತೊಳೆದುಕೊಳ್ಳುವುದು ॥

ನಂತರ ಕೆಳಗಿನ ವಾಕ್ಯಗಳನ್ನು ಹೇಳುತ್ತಾ, ಪುನಃ ಕಲಶದ ಉತ್ತರದಲ್ಲಿರುವ ಪಾತ್ರೆಯೊಳಕ್ಕೇ ನೀರನ್ನು ಬಿಡಬೇಕು ॥

ಶುಭಾನಿ ವರ್ಧಂತಾಮ್ । ಯಚ್ಛ್ರೇಯಸ್ತದಸ್ತು । ಸರ್ವಸಂಪತ್ ಸಮೃದ್ಧಿರಸ್ತು । ಗೋತ್ರಾಭಿವೃದ್ಧಿರಸ್ತು । ಉತ್ತರೇ ಕರ್ಮಣ್ಯವಿಘ್ನಮಸ್ತು । ಉತ್ತರೋತ್ತರಮಹರಹರಭಿವೃದ್ಧಿರಸ್ತು । ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು । ಗೋ ಬ್ರಾಹ್ಮಣೇಭ್ಯಃ ಶುಭಂ ಭವತು ॥

ಸ್ಪೃಷ್ಟ್ವಾ ಜಪೇತ್ ॥

ಪುಣ್ಯಾಹಕಲಶಗಳನ್ನು ದರ್ಭೆಯಿಂದ ಮುಟ್ಟಿಕೊಂಡು, ಈ ಕೆಳಗಿನ ಮಂತ್ರಗಳನ್ನು ಹೇಳುವುದು ॥

ಓಂ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾ
ಕರತ್ಪ್ರಣ ಆಯೂಗ್ಂಷಿ ತಾರಿಷತ್ ॥ ಆಪೋ ಹಿ ಷ್ಠಾ ಮಯೋಭುವಸ್ತಾ ನ
ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ
ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವೋ
ಯಸ್ಯ ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥

ಓಂ ಹಿರಣ್ಯವರ್ಣಾಶ್ಶುಚಯಃ ಪಾವಕಾ ಯಾಸು ಜಾತಃ ಕಶ್ಯಪೋಯಾಸ್ವಿಂದ್ರಃ ।
ಅಗ್ನಿಂ ಯಾ ಗರ್ಭಂ ದಧಿರೇ ವಿರೂಪಾಸ್ತಾ ನ ಆಪಶ್ಶಗ್ಂ ಸ್ಯೋನಾ ಭವಂತು ।
ಯಾಸಾಗ್ಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯಞ್ಜನಾನಾಮ್ ।
ಮಧುಶ್ಚುತಶ್ಶುಚಯೋ ಯಾಃ ಪಾವಕಾಸ್ತಾನ ಆಪಶ್ಶಗ್ಂ ಸ್ಯೋನಾ ಭವಂತು ।
ಯಾಸಾಂ ದೇವಾ ದಿವಿ ಕೃಣ್ವಂತಿ ಭಕ್ಷಂ ಯಾ ಅಂತರಿಕ್ಷೇ ಬಹುಧಾ ಭವಂತಿ ।
ಯಾಃ ಪೃಥಿವೀಂ ಪಯಸೋಂದಂತಿ ಶುಕ್ರಾಸ್ತಾನ ಆಪಶ್ಶಗ್ಂ ಸ್ಯೋನಾ ಭವಂತು ।
ಶಿವೇನ ಮಾ ಚಕ್ಷುಷಾ ಪಶ್ಯತಾಪಶ್ಶಿವಯಾ ತನುವೋಪಸ್ಪೃಶತ ತ್ವಚಂ ಮೇ ।
ಸರ್ವಾಗ್ಂ ಅಗ್ನೀಗ್ಂ ರಪ್ಸುಷದೋ ಹುವೇವೋ ಮಯಿ ವರ್ಚೋ ಬಲಮೋಜೋ
ನಿಧತ್ತ ।

ಪವಮಾನಃ ಸುವರ್ಜನಃ । ಪವಿತ್ರೇಣ ವಿಚರ್ಷಣಿಃ । ಯಃ ಪೋತಾ ಸ ಪುನಾತು
ಮಾ ॥ ಪುನಂತು ಮಾ ದೇವಜನಾಃ । ಪುನಂತು ಮನವೋ ಧಿಯಾ । ಪುನಂತು
ವಿಶ್ವ ಆಯವಃ । ಜಾತವೇದಃ ಪವಿತ್ರವತ್ । ಪವಿತ್ರೇಣ ಪುನಾಹಿ ಮಾ । ಶುಕ್ರೇಣ
ದೇವದೀದ್ಯತ್ । ಅಗ್ನೇ ಕ್ರತ್ವಾ ಕ್ರತೂಗ್ಂರನು । ಯತ್ತೇ ಪವಿತ್ರಮರ್ಚಿಷಿ ।

ಅಗ್ನೇ ವಿತತಮನ್ತರಾ । ಬ್ರಹ್ಮತೇನ ಪುನೀಮಹೇ । ಉಭಾಭ್ಯಾಂ ದೇವ ಸವಿತಃ । ಪವಿತ್ರೇಣ ಸವೇನ ಚ । ಇದಂ ಬ್ರಹ್ಮ ಪುನೀಮಹೇ । ವೈಶ್ವದೇವೀ ಪುನತೀ ದೇವ್ಯಾಗಾತ್ । ಯಸ್ಯೈ ಬಹ್ವೀಸ್ತನುವೋ ವೀತಪೃಷ್ಠಾಃ । ತಯಾ ಮದಂತ ಸ್ಸಧಮಾದ್ಯೇಷು । ವಯಗ್ಂ ಸ್ಯಾಮ ಪತಯೋ ರಯೀಣಾಮ್ । ವೈಶ್ವಾನರೋ ರಶ್ಮಿಭಿರ್ಮಾ ಪುನಾತು । ವಾತಃ ಪ್ರಾಣೇ ನೇಷಿರೋ ಮಯೋಭೂಃ । ದ್ಯಾವಾಪೃಥಿವೀ ಪಯಸಾ ಪಯೋಭಿಃ । ಋತಾವರೀ ಯಜ್ಞಿಯೇ ಮಾ ಪುನೀತಾಮ್ । ಬೃಹದ್ಭಿಸ್ಸವಿತಸ್ತ್ವಭಿಃ । ವರ್ಷಿಷ್ಠೈರ್ದೇವ ಮನ್ವಭಿಃ । ಅಗ್ನೇ ದಕ್ಷೈಃ ಪುನಾಹಿಮಾ । ಯೇನದೇವಾ ಅಪುನತ । ಯೇನಾಪೋ ದಿವ್ಯಂಕಶಃ । ತೇನ ದಿವ್ಯೇನ ಬ್ರಹ್ಮಣಾ । ಇದಂ ಬ್ರಹ್ಮ ಪುನೀಮಹೇ । ಯಃ ಪಾವಮಾನೀರಧ್ಯೇತಿ ॥ ಋಷಿಭಿ ಸ್ಸಂಭೃತಗ್ಂರಸಮ್ । ಸರ್ವಗ್ಂ ಸ ಪೂತಮಶ್ನಾತಿ । ಸ್ವದಿತಂ ಮಾತರಿಶ್ವನಾ । ಪಾಪಮಾನೀರ್ಯೋ ಅಧ್ಯೇತಿ । ಋಷಿಭಿಸ್ಸಂಭೃತಗ್ಂರಸಮ್ ॥ ತಸ್ಮೈ ಸರಸ್ವತೀ ದುಹೇ । ಕ್ಷೀರಗ್ಂ ಸರ್ಪಿರ್ಮಧೂದಕಮ್ । ಪಾವಮಾನೀಸ್ಸ್ವಸ್ತ್ಯಯನೀಃ । ಸುದುಘಾ ಹಿ ಪಯಸ್ವತೀಃ । ಋಷಿಭಿಸ್ಸಂಭೃತೋ ರಸಃ । ಬ್ರಾಹ್ಮಣೇಷ್ವಮೃತಗ್ಂ ಹಿತಮ್ । ಪಾವಮಾನೀರ್ದಿಶಂತು ನಃ । ಇಮಂ ಲೋಕಮಥೋ ಅಮುಮ್ । ಕಾಮಾನ್ಥ್ಸಮರ್ಧಯಂತು ನಃ । ದೇವೀರ್ದೇವೈಸ್ಸಮಾಭೃತಾಃ । ಪಾವಮಾನೀಸ್ಸ್ವಸ್ತ್ಯಯನೀಃ । ಸುದುಘಾ ಹಿ ಘೃತಶ್ಚುತಃ । ಋಷಿಭಿಸ್ಸಂಭೃತೋ ರಸಃ । ಬ್ರಾಹ್ಮಣೇಷ್ವ ಮೃತಗ್ಂ ಹಿತಮ್ ॥ ಯೇನ ದೇವಾಃ ಪವಿತ್ರೇಣ । ಆತ್ಮಾನಂ ಪುನತೇ ಸದಾ । ತೇನ ಸಹಸ್ರ ಧಾರೇಣ । ಪಾವಮಾನ್ಯಃ ಪುನಂತು ಮಾ ।

ಪ್ರಾಜಾಪತ್ಯಂ ಪವಿತ್ರಮ್ । ಶತೋದ್ಯಾಮಗ್ಂ ಹಿರಣ್ಮಯಮ್ । ತೇನ ಬ್ರಹ್ಮವಿದೋ ವಯಮ್ । ಪೂತಂ ಬ್ರಹ್ಮಪುನೀಮಹೇ । ಇಂದ್ರಸ್ಸುನೀತೀ ಸಹ ಮಾ ಪುನಾತು । ಸೋಮಸ್ಸ್ವಸ್ತ್ಯಾ ವರುಣಸ್ಸಮೀಚ್ಯಾ । ಯಮೋ ರಾಜಾ ಪ್ರಮೃಣಾಭಿಃ ಪುನಾತು ಮಾ । ಜಾತವೇದಾ ಮೋರ್ಜಯಂತ್ಯಾ ಪುನಾತು ॥ ಓಂ ಭೂರ್ಭುವಸ್ಸುವಃ ॥

ಓಂ ತಚ್ಛಂ ಯೋರಾವೃಣೀಮಹೇ । ಗಾತುಂ ಯಜ್ಞಾಯ । ಗಾತುಂ ಯಜ್ಞಪತಯೇ । ದೈವೀ ಸ್ವಸ್ತಿರಸ್ತು ನಃ । ಸ್ವಸ್ತಿರ್ಮಾನುಷೇಭ್ಯಃ । ಊರ್ಧ್ವಂ ಜಿಗಾತು ಭೇಷಜಮ್ । ಶಂ ನೋ ಅಸ್ತು ದ್ವಿಪದೇ । ಶಂ ಚತುಷ್ಪದೇ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಪುಣ್ಯಾಹದ ಉತ್ತರಕಲಶದಲ್ಲಿರುವ ತೀರ್ಥವನ್ನು ಉದ್ಧರಣೆಯಿಂದ ಬೇರೊಂದು ಪಾತ್ರೆಗೆ ಹಾಕಿಕೊಂಡು, ಮಂತ್ರದಿಂದ ಕರ್ತೃಗಳಿಗೆ, ಕರ್ಮಸ್ಥಳಕ್ಕೆ, ದ್ರವ್ಯಗಳಿಗೆ ಪ್ರೋಕ್ಷಿಸಿ ನಂತರ ಆ ತೀರ್ಥವನ್ನು ಪ್ರಾಶನ ಮಾಡುವುದು । ಅಂದು ಆರಾಧಿಸಲ್ಪಟ್ಟ ಎಲ್ಲಾ ದೇವತೆಗಳ ಉದ್ವಾಸನೆಯ ಸಮಯದಲ್ಲೇ ಪುಣ್ಯಾಹ ಕಲಶಗಳನ್ನೂ ವಿಸರ್ಜಿಸಬೇಕು । ಅಲ್ಲಿಯವರೆವಿಗೂ ಪುಣ್ಯಾಹಕಲಶಗಳನ್ನು ಎತ್ತುವುದಾಗಲೀ, ಬೇರೆಡೆಗೆ ಸಾಗಿಸುವುದಾಗಲೀ ಮಾಡುವುದು ಶಾಸ್ತ್ರವಿರೋಧವು ॥

****

ವಿಮರ್ಶೆ :

ಪಿತೃಕರ್ಮದಲ್ಲಿ ಪುಣ್ಯಾಹವನ್ನು ಮಾಡಬೇಕಾದಾಗ ಮಾತ್ರ, ಒಂದುಕಲಶವನ್ನಿಟ್ಟು ಪುಣ್ಯಾಹ ಮಾಡಬೇಕೆಂದೂ ಹಾಗೂ ಉಳಿದ ಕರ್ಮಗಳಲ್ಲಿ ಎರಡು ಕಲಶಗಳನ್ನಿಟ್ಟು ಪುಣ್ಯಾಹವನ್ನು ಮಾಡಬೇಕೆಂದೂ ಈ ಕೆಳಗಿನ ಆಧಾರವಾಕ್ಯಗಳೇ ಸೂಚಿಸುತ್ತಿವೆ । ಹಾಗೆಯೇ ಉದ್ದೇಶಿತ ಪ್ರಧಾನಕರ್ಮದ ಉದ್ವಾಸನೆ(ವಿಸರ್ಜನೆ) ಆಗುವವರೆಗೂ ಪುಣ್ಯಾಹಕಲಶಗಳನ್ನು ಉದ್ವಾಸನೆ(ತೆಗೆಯ/ಎತ್ತಬಾರದು) ಮಾಡಬಾರದು ।

ಒಂದುವೇಳೆ ಹಾಗೆಮಾಡಿದರೆ ಪುಣ್ಯಾಹವೆಂಬಕರ್ಮವು ನಿಷ್ಫಲವಾಗುತ್ತದೆಂದೂ ಕೆಳಗಿನ ವಾಕ್ಯಗಳು ಸೂಚಿಸುತ್ತಿವೆ ॥

ಚರಂ ದಕ್ಷಿಣತಸ್ತಸ್ಯ ಸ್ಥಿರಮುತ್ತರತಸ್ತಥಾ । ಶುಭಕರ್ಮಾಣಿ ಸರ್ವತ್ರ ತರ್ಪಣಂ ಚ ಉತ್ತರೇದಿಶಿ ॥

ಚರಂ ತು ದಕ್ಷಿಣೇಭಾಗೇ ಕಲಶಂ ಸ್ಥಾಪಯೇದ್ಬುಧಃ । ಅಚಲಂ ವಾಮಭಾಗೇತು ಪುಣ್ಯಾಹೇ ಕಲಶದ್ವಯಂ ॥

ಸೂತಕಾಂತೇ ವೃಷೋತ್ಸರ್ಗೇ ಸರ್ವೇಷು ಪಿತೃಕರ್ಮಸು । ಕುಂಭಮೇಕಂ ಪ್ರತಿಷ್ಠಾಪ್ಯ ಪುಣ್ಯಾಹಂ ವಾಚಯೇದ್ಬುಧಃ ॥

ತಜ್ಜಲಂ ಪ್ರೋಕ್ಷಣಾರ್ಥಂಸ್ಯಾತ್ ತತ್ಪಾತ್ರಂ ನ ತು ಚಾಲಯೇತ್ । ಚಲನಂ ಯತ್ತು ಮೌಢ್ಯೇನ ಪುನಃ ಕರಣಮಾಚರೇತ್ ॥ ಕಪರ್ದಿಕಾರಿಕಾವಳಿ ॥

****

4. ಶೋಭನನಾಂದೀಪ್ರಯೋಗ:

ಮಾತೃಕಾಪೂಜಾ –

ಶೋಭನನಾಂದಿಯನ್ನು, ಮಾತೃಕಾಪೂಜೆಯ ಪೂರ್ವಕವಾಗಿಯೇ ಮಾಡಬೇಕೆಂದು ಶಾಸ್ತ್ರಕಾರರ ಸೂಚನೆಯಿರುವುದರಿಂದ, ನಾವು ಅದೇಕ್ರಮವನ್ನೇ ಇಲ್ಲಿ ನೀಡಿರುತ್ತೇವೆ ॥

ಗಣಶಃ ಕ್ರಿಯಮಾಣಾನಾಂ ಮಂತ್ರವನ್ಮಾತೃಪೂಜನಂ, ನಾಂದೀಶ್ರಾದ್ಧಂ ಭವೇತ್ ॥

ಪ್ರಾಣಾನಾಯಮ್ಯ । ಏವಂಗುಣ ವಿಶೇಷಣವಿಶಿಷ್ಟಾಯಾಂ, ಅಸ್ಯಾಂಶುಭತಿಥೌ, ಮಮ ಉಪಾತ್ತಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ಕರಿಷ್ಯಮಾಣ ಕರ್ಮಾಂಗಭೂತಂ, ನಾಂದೀಶೋಭನದೇವತಾಪ್ರೀತ್ಯರ್ಥಂ, ನಾಂದೀ ಶೋಭನದೇವತಾ ಪ್ರಸಾದಸಿದ್ಧ್ಯರ್ಥಂ, ತಥಾ ಮಾತೃಕಾದೇವತಾ ಪ್ರೀತ್ಯರ್ಥಂ, ಮಾತೃಕಾದೇವತಾ ಪ್ರಸಾದಸಿದ್ಧ್ಯರ್ಥಂ, ಮಾತೃಕಾದೇವತಾ ಪೂಜಾಪೂರ್ವಕ, ತರ್ಪಣವಿಧಾನೇನ ಶೋಭನ ನಾಂದೀಸಮಾರಾಧನಂ ಕರಿಷ್ಯೇ ॥

ನಮಃ ಸದಸೇ । ನಮಃ ಸದಸಸ್ಪತಯೇ । ನಮಃ ಸಖೀನಾಂ । ಪುರೋಗಾಣಾಂ ಚಕ್ಷುಷೇ । ನಮೋದಿವೇ । ನಮಃ ಪೃಥಿವ್ಯೈ ॥

ಸಪ್ರಥ ಸಭಾಂ ಮೇ ಗೋಪಾಯ । ಯೇ ಚ ಸಭ್ಯಾಸ್ಸಭಾಸದಃ । ತಾನಿಂದ್ರಿಯಾವತಃ ಕುರು । ಸರ್ವಮಾಯುರುಪಾಸತಾಮ್ ।

ಸರ್ವೇಭ್ಯೋ ಬ್ರಾಹ್ಮಣೇಭ್ಯೋ ನಮಃ ॥

ಈ ಮೇಲಿನ ಮಂತ್ರಗಳನ್ನು ಹೇಳಿ, ಸಭೆಗೆ ಅಕ್ಷತೆಯಿಂದ ಪೂಜೆಮಾಡಿ ನಮಸ್ಕರಿಸುವುದು ॥

ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ । ವಾರಾಹೀಚೈವಚೇಂದ್ರಾಣೀ ಚಾಮುಂಡಾ ಸಪ್ತಮಾತರಃ ॥ ಗೌರೀಪದ್ಮಾಶಚೀಮೇಧಾ ಸಾವಿತ್ರೀ ವಿಜಯಾಜಯಾ ।

ದೇವಸೇನಾ ಸ್ವಧಾಸ್ವಾಹಾ ಮಾತರೋ ಲೋಕಮಾತರಃ ॥ ಧೃತಿಃ ಪುಷ್ಟಿಸ್ತಥಾತುಷ್ಟಿರಾತ್ಮನಃ ಕುಲದೇವತಾಃ ॥

ಓಂ ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಮ್ । ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥

ಮಾತೃಕಾದೇವತಾಭ್ಯೋ ನಮಃ ಧ್ಯಾಯಾಮಿ, ಆವಾಹಯಾಮಿ ॥

ಮೇಲಿನ ವಾಕ್ಯಗಳನ್ನುಹೇಳಿ, ತಟ್ಟೆಯಲ್ಲಿ ಇಟ್ಟುಕೊಂಡಿರುವ ಅಕ್ಕಿ, ಕಾಯಿ, ಫಲ, ತಾಂಬೂಲಗಳಿಗೆ ಮಾತೃದೇವತೆಗಳನ್ನು ಹೂ–ಅಕ್ಷತೆಗಳಿಂದ ಪೂಜಿಸಿ, ಆವಾಹಿಸಬೇಕು ॥

ಮಾತೃಕಾದೇವತೆಗಳಿಗೆ, ಕೆಳಗೆ ತಿಳಿಸಿರುವಂತೆ ಉಪಚಾರ ಪೂಜೆಗಳನ್ನು ಮಾಡುವುದು ॥

ಓಂ ಮಾತೃಕಾದೇವತಾಭ್ಯೋನಮಃ, ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂ ಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ / ವಸ್ತ್ರಂ ಸಮರ್ಪಯಾಮಿ / ಉಪವಸ್ತ್ರಂ ಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂ ಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ /

ನಾಮಪೂಜಾಂ ಕರಿಷ್ಯೇ –

ಕೆಳಗಿನ ನಾಮಗಳನ್ನು ಹೇಳುತ್ತಾ, ಹೂ, ಅಕ್ಷತೆಗಳನ್ನು ಮಾತೃಕಾದೇವತೆಗಳಿಗೆ ಪೂಜಿಸಬೇಕು ॥

ಓಂ ಬ್ರಾಹ್ಮ್ಯೈ ನಮಃ । ಓಂ ಮಾಹೇಶ್ವರ್ಯೈ ನಮಃ । ಓಂ ಕೌಮಾರ್ಯೈ ನಮಃ । ಓಂ ವೈಷ್ಣವ್ಯೈ ನಮಃ । ಓಂ ವಾರಾಹ್ಯೈ ನಮಃ । ಓಂ ಇಂದ್ರಾಣ್ಯೈ ನಮಃ । ಓಂ ಚಾಮುಂಡಾಯೈ ನಮಃ । ಓಂ ಗೌರ್ಯೈ ನಮಃ । ಓಂ ಪದ್ಮಾಯೈ ನಮಃ । ಓಂ ಶಚ್ಯೈ ನಮಃ । ಓಂ ಮೇಧಾಯೈ ನಮಃ । ಓಂ ಸಾವಿತ್ರ್ಯೈ ನಮಃ ।

ಓಂ ವಿಜಯಾಯೈ ನಮಃ । ಓಂ ಜಯಾಯೈ ನಮಃ । ಓಂ ದೇವಸೇನಾಯೈ ನಮಃ । ಓಂ ಸ್ವಧಾಯೈ ನಮಃ । ಓಂ ಸ್ವಾಹಾಯೈ ನಮಃ । ಓಂ ಧೃತ್ಯೈ ನಮಃ । ಓಂ ಪುಷ್ಟ್ಯೈ ನಮಃ । ಓಂ ತುಷ್ಟ್ಯೈ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ / ನೈವೇದ್ಯಂ ಸಮರ್ಪಯಾಮಿ / ತಾಂಬೂಲಂ ಸಮರ್ಪಯಾಮಿ / ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ / ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ / ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ / ಪ್ರಸನ್ನಾರ್ಘ್ಯಂ ಸಮರ್ಪಯಾಮಿ / ಪ್ರಾರ್ಥಯಾಮಿ, ನಮಸ್ಕರೋಮಿ / ಸರ್ವೋಪಚಾರಪೂಜಾಂ ಸಮರ್ಪಯಾಮಿ / ಅನಯಾಪೂಜಯಾ ಶ್ರೀಮಾತೃಕಾದೇವತಾಃ ಪ್ರೀಯಂತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆ ನೀರನ್ನು, ದೇವತಾ ಆಚಮ್ಯ ಪಾತ್ರೆಯಿಂದ ದೇವತಾರ್ಘ್ಯ ಪಾತ್ರೆಗೆ ಹಾಕುವುದು ॥ ಅಂದು ಆರಾಧಿಸಲ್ಪಟ್ಟ ಎಲ್ಲಾ ದೇವತೆಗಳ ಉದ್ವಾಸನೆಯ ಸಮಯದಲ್ಲಿಯೇ, ಮಾತೃಕಾದೇವತೆಗಳ ಉದ್ವಾಸನೆಯನ್ನೂ ಮಾಡುವುದು ॥

ಶೋಭನನಾಂದೀತರ್ಪಣ –

ಪ್ರಾಣಾನಾಯಮ್ಯ । ಮಮ ಉಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ಕರಿಷ್ಯಮಾಣ ....ಕರ್ಮಾಂಗಭೂತಂ ನಾಂದೀ ಶೋಭನದೇವತಾಪ್ರೀತ್ಯರ್ಥಂ, ಅದ್ಯ (ಹಿರಣ್ಯೇನ) ತರ್ಪಣ ವಿಧಾನೇನ ಶೋಭನನಾಂದೀ ಸಮಾರಾಧನಾಖ್ಯಂ ಕರ್ಮಕರಿಷ್ಯೇ ॥

1. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆ ಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಲ್ಲಿಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಬುಡಕ್ಕೆ ಬೀಳಿಸಬೇಕು ॥

2. (ಅಸ್ಮಜ್ಜನಕಸ್ಯ) ಪ್ರಪಿತಾಮಹಿ ಪಿತಾಮಹಿ ಮಾತರಃ ನಾಂದೀಮುಖ್ಯಃ ಪ್ರೀಯಂತಾಮ್ ॥
ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಮಧ್ಯಕ್ಕೆ ಬೀಳಿಸಬೇಕು ॥

3. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥ ನಾಂದೀ ॥
ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳತುದಿಗೆ ಬೀಳಿಸಬೇಕು ॥

****

1. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥
ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಎರಡನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಬುಡಕ್ಕೆ ಬೀಳಿಸಬೇಕು ॥

2. (ಅಸ್ಮಜ್ಜನಕಸ್ಯ) ಪ್ರಪಿತಾಮಹ ಪಿತಾಮಹ ಪಿತರಃ ನಾಂದೀಮುಖಾಃ ಪ್ರೀಯಂತಾಮ್ ॥
ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಎರಡನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಮಧ್ಯಕ್ಕೆ, ಬೀಳಿಸಬೇಕು ॥

3. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥ ನಾಂದೀ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಎರಡನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳ ತುದಿಗೆ ಬೀಳಿಸಬೇಕು ॥

****

1. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಮೂರನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಬುಡಕ್ಕೆ ಬೀಳಿಸಬೇಕು ॥

2. (ಅಸ್ಮಜ್ಜನಕಸ್ಯ) ಮಾತಾಮಹ ಮಾತುಃಪಿತಾಮಹ ಮಾತುಃಪ್ರಪಿತಾಮಹಾಃ ಸಪತ್ನೀಕಾಃ ನಾಂದೀಮುಖಾಃ ಪ್ರೀಯಂತಾಮ್ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಮೂರನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳಮಧ್ಯಕ್ಕೆ ಬೀಳಿಸಬೇಕು ॥

3. ಸತ್ಯವಸ್ವಾಖ್ಯಾಃ ವಿಶ್ವೇದೇವಾಃ ನಾಂದೀಮುಖಾಃ ಪ್ರೀಯಂತಾಂ ॥ ನಾಂದೀ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು.

ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ಮೂರನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳ ತುದಿಗೆ ಬೀಳಿಸಬೇಕು ॥

****

1. ಸರ್ವೇದೇವಾಃ ಪ್ರೀಯಂತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ನಾಲ್ಕನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳ ಬುಡಕ್ಕೆ ಬೀಳಿಸಬೇಕು ॥

2. ಸರ್ವೇಽಋಷಯಃ ಪ್ರೀಯಂತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ನಾಲ್ಕನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳ ಮಧ್ಯಕ್ಕೆ ಬೀಳಿಸಬೇಕು ॥

3. ಸರ್ವೇಅತಿಥಯಃ ಪ್ರೀಯಂತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು. ಆ ನೀರನ್ನು, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಬಲಭಾಗದ ತುದಿಯಿಂದ ನಾಲ್ಕನೇಸಾಲಿನಲ್ಲಿ ಪೂರ್ವಾಗ್ರವಾಗಿ ಇಟ್ಟಿರುವ ದರ್ಭೆಗಳ ತುದಿಗೆ ಬೀಳಿಸಬೇಕು ॥

4. ಶ್ರೀಮಹಾವಿಷ್ಣುಃ ಪ್ರೀಯತಾಂ ॥

ಕರ್ತೃವು ಉಪವೀತಿಯಾಗಿ, ಮೇಲಿನ ವಾಕ್ಯವನ್ನು ಹೇಳಿ, ಕೈಯಲ್ಲಿ ಹಿಡಿದಿರುವ ಒದ್ದೆಅಕ್ಕಿ, ತುಳಸಿ, ಸುವರ್ಣಗಳ ಮೇಲೆ ಪತ್ನಿಯು ನೀರನ್ನು ಒಮ್ಮೆಮಾತ್ರ ಹಾಕಬೇಕು । ಕೈಯಲ್ಲಿರುವ ಎಲ್ಲವನ್ನೂ, ದೇವತೀರ್ಥದಿಂದ (ಹಸ್ತಾಗ್ರವಾಗಿ), ನೆಲದಲ್ಲಿರುವ ತಟ್ಟೆಯ ಮಧ್ಯಭಾಗದಲ್ಲಿ ಹಾಕಬೇಕು ॥

ಪ್ರಾರ್ಥನೆ –

ಮಾತಾ ಪಿತಾಮಹೀಚೈವ ತಥೈವ ಪ್ರಪಿತಾಮಹೀ ।
ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಾಃ ॥
ಮಾತಾಮಹಸ್ತತ್ಪಿತಾ ಚ ಪ್ರಮಾತಾ ಮಹಕಾದಯಃ ।
ಏತೇಭವಂತು ಸುಪ್ರೀತಾಃ ಪ್ರಯಚ್ಛಂತು ಚ ಮಂಗಲಂ ॥

ಮೇಲಿನ ವಾಕ್ಯಗಳಿಂದ ನಾಂದೀಶೋಭನದೇವತೆಗಳನ್ನು ಪ್ರಾರ್ಥಿಸುವುದು ॥

ಅತ್ರ ದೇವತಾನುಮೋದನಾರ್ಥಂ ಇಡಾವಾಚನಂ ಕರಿಷ್ಯೇ ॥

ದೇವತೆಗಳ ಅನುಮೋದನೆಗಾಗಿ ಕೆಳಗಿನ ಮಂತ್ರಗಳಿಂದ ಇಡಾವಾಚನವನ್ನು ಮಾಡಬೇಕು ॥

ಯಸ್ಮೈತ್ವಗ್ಂ ಸುಕೃತೇ ಜಾತವೇದ ಉ ಲೋಕಮಗ್ನೇ ಕೃಣವಸ್ಯೋನಂ । ಅಶ್ವಿನಗ್ಂ
ಸಪುತ್ರಿಣಂ ವೀರವಂತಂ ಗೋಮಂತಗ್ಂ ರಯಿನ್ನಶತೇ ಸ್ವಸ್ತಿ ॥

ಮೇಲಿನ ವಾಕ್ಯವನ್ನು ಹೇಳಿ, ನಾಂದೀಪಾತ್ರೆ(ತಟ್ಟೆ)ಯನ್ನು ಎತ್ತಿಹಿಡಿಯಬೇಕು ॥

ಓಂಇಡಾದೇವಹೂರ್ಮನುರ್ಯಜ್ಞನೀರ್ಬೃಹಸ್ಪತಿರುಕ್ಥಾಮದಾನಿಶಗ್ಂಸಿಷದ್ವಿಶ್ವೇದೇ
ವಾಸ್ಸೂಕ್ತವಾಚಃ ಪೃಥಿವಿಮಾತರ್ಮಾ ಮಾ ಹಿಗ್ಂಸೀರ್ಮಧು ಮನಿಷ್ಯೇ ಮಧು

ಜನಿಷ್ಯೇ ಮಧು ವಕ್ಷ್ಯಾಮಿ ಮಧು ವದಿಷ್ಯಾಮಿ ಮಧುಮತೀಂ ದೇವೇಭ್ಯೋ ವಾಚಮುದ್ಯಾಸಗ್ಂ ಶುಶ್ರೂಷೇಣ್ಯಾಂ ಮನುಷ್ಯೇಭ್ಯಸ್ತಂ ಮಾ ದೇವಾ ಅವಂತು ಶೋಭಾಯೈ ಪಿತರೋಽನುಮದಂತು ॥

ಕೆಳಗಿನ ಒಂದುವಾಕ್ಯವನ್ನು ಎರಡುಬಾರಿ ಹೇಳುತ್ತ, ನಾಂದೀತರ್ಪಣವನ್ನು ಕೊಟ್ಟಂತಹ ತಟ್ಟೆಯ ಕೆಳಭಾಗಕ್ಕೆ ತಟ್ಟೆಯಲ್ಲಿರುವ ಸುವರ್ಣದಿಂದ ಎರಡುಬಾರಿ ಕುಟ್ಟಬೇಕು ॥

ಇಡ ಏಹಿ ॥

ಅದಿತಿರ್ದ್ಯೌರದಿತಿರಂತರಿಕ್ಷಮ್ । ಅದಿತಿರ್ಮಾತಾಸ ಪಿತಾಸ ಪುತ್ರಃ । ವಿಶ್ವೇದೇವಾ ಅದಿತಿಃ ಪಂಚಜನಾಃ । ಅದಿತಿರ್ಜಾತಮದಿತಿರ್ಜನಿತ್ವಮ್ ॥

ಕೆಳಗಿನ ಒಂದುವಾಕ್ಯವನ್ನು ಎರಡುಬಾರಿ ಹೇಳುತ್ತ, ನಾಂದೀತರ್ಪಣವನ್ನು ಕೊಟ್ಟಂತಹ ತಟ್ಟೆಯ ಕೆಳಭಾಗಕ್ಕೆ ತಟ್ಟೆಯಲ್ಲಿರುವ ಸುವರ್ಣದಿಂದ ಎರಡುಬಾರಿ ಕುಟ್ಟಬೇಕು ॥

ಅದಿತ ಏಹಿ ॥

ಪ್ರಣೋ ದೇವೀ ಸರಸ್ವತೀ ವಾಜೇಭಿರ್ವಾಜಿನೀವತೀ । ಧೀನಾಮವಿತ್ರ್ಯವತು ॥
ಆನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾಗಂತು ಯಜ್ಞಮ್ ।
ಹವಂ ದೇವೀ ಜುಜುಷಾಣಾ ಘೃತಾಚೀ ಶಗ್ಮಾಂ ನೋ ವಾಚಮುಶತೀ ಶೃಣೋತು ॥

ಕೆಳಗಿನ ಒಂದುವಾಕ್ಯವನ್ನು ಎರಡುಬಾರಿ ಹೇಳುತ್ತ, ನಾಂದೀತರ್ಪಣವನ್ನು ಕೊಟ್ಟಂತಹ ತಟ್ಟೆಯ ಕೆಳಭಾಗಕ್ಕೆ ತಟ್ಟೆಯಲ್ಲಿರುವ ಸುವರ್ಣದಿಂದ ಎರಡುಬಾರಿ ಕುಟ್ಟಬೇಕು ॥

ಸರಸ್ವತ್ಯೇಹಿ ॥ ಶೋಭನಗ್ಂ ಶೋಭನಮ್ ॥

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ । ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥ ಅನೇನ ಹಿರಣ್ಯೇನ ನಾಂದೀಶೋಭನ ದೇವತಾಃ ಪ್ರೀಯಂತಾಂ ॥

ಕೈಯಲ್ಲಿ ಅಕ್ಷತೆ, ನೀರನ್ನು ಹಿಡಿದುಕೊಂಡು ಮೇಲಿನವಾಕ್ಯವನ್ನು ಹೇಳಿ ನಾಂದೀ ಪಾತ್ರೆಗೆ ನೀರನ್ನು ಬಿಡುವುದು ॥

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ । ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ನಾಂದೀ ಸಾದ್ಗುಣ್ಯಾರ್ಥಂ ಇದಂಹಿರಣ್ಯಂ ನಾನಾನಾಮ ಗೋತ್ರೇಭ್ಯಃ ಬ್ರಾಹ್ಮಣೇಭ್ಯಃ ತುಭ್ಯಮಹಂ ಸಂಪ್ರದದೇ ದತ್ತಂ ನಮಮನಮಮ ॥ ನಾಂದೀ ಸಮಾರಾಧನ ಮುಹೂರ್ತಃ ಸುಮುಹೂರ್ತಃ ಇತಿ ಭವಂತಃ ಅನುಗೃಹ್ಣಂತು ॥

ಮೇಲಿನ ವಾಕ್ಯಗಳಿಂದ, ನಾಂದೀ ಸಮಾರಾಧನೆಯ ಸಾದ್ಗುಣ್ಯಕ್ಕಾಗಿ ಹಿರಣ್ಯವನ್ನು ಇಲ್ಲಿರುವ ಎಲ್ಲಾ ವೇದ ಬ್ರಾಹ್ಮಣರಿಗೆ ಸಮರ್ಪಿಸುತ್ತಿದ್ದೇನೆ ಎಂದುಹೇಳಿ, ದಕ್ಷಿಣೆಯನ್ನು ಬ್ರಾಹ್ಮಣರಿಗೆ ಕೊಡಬೇಕು । ನಾಂದೀಸಮಾರಾಧನೆ ಮುಹೂರ್ತವು ಸುಮುಹೂರ್ತವು ಆಗಿದೆಯೆಂದು ಅನುಗ್ರಹಿಸಿರಿ, ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಬೇಕು ॥

ಸುಮುಹೂರ್ತೋಸ್ತು ॥

ಸುಮುಹೂರ್ತವಾಗಿದೆಯೆಂದು ಬ್ರಾಹ್ಮಣರು ಹರಸಬೇಕು । ನಂತರ ನಾಂದೀತರ್ಪಣವನ್ನು ಕೊಟ್ಟಂತಹ ತಟ್ಟೆಯಲ್ಲಿರುವ ದರ್ಭೆ, ಅಕ್ಕಿ ಹಾಗೂ ನೀರನ್ನು ಗಿಡ/ಮರದ ಬುಡಕ್ಕೆ ಹಾಕಬೇಕು ॥ ತರ್ಪಣದಲ್ಲಿ ಬಳಸಿದ ಸುವರ್ಣವನ್ನು ಪುನಃ ಜೋಪಾನವಾಗಿ ತೆಗೆದುಕೊಳ್ಳುವುದು ॥

****

ವಿಮರ್ಶೆ :

ಶೋಭನನಾಂದಿಯಲ್ಲಿ, ಪಿತೃಗಳ ಹೆಸರನ್ನು ಹೇಳುವುದು ನಿಷೇಧ, ಸಂಬಂಧವನ್ನು ಮಾತ್ರವೇ ಹೇಳಬೇಕು । ಈ ನಾಂದಿಯಲ್ಲಿ ಪಿತೃಸಂಬಂಧವನ್ನೂ ದೇವತಾಸ್ವರೂಪದಲ್ಲೇ

ನಿರ್ದೇಶಿಸಿರುವುದರಿಂದಲೇ, ಇಲ್ಲಿ ಪ್ರಾಚೀನಾವೀತಿಯಾಗಲೀ – ಎಳ್ಳಿನ ಬಳಕೆಯಾಗಲೀ – ಹಸ್ತದಲ್ಲಿ ಪಿತೃತೀರ್ಥದ ಬಳಕೆಯಾಗಲೀ – 3 ಸಲ ತರ್ಪಣಕೊಡುವುದಾಗಲೀ, ಇವೆಲ್ಲವೂ ನಿಷೇಧವೇ ।

ಹಾಗಾಗಿ ಪ್ರಾಚೀನಾವೀತಿಗೆ ಬದಲಾಗಿ ಉಪವೀತಿಯಾಗಿಯೇ ಇದನ್ನು ಆಚರಿಸಬೇಕು । ಎಳ್ಳಿನ ಬದಲಾಗಿ ಒದ್ದೆಅಕ್ಕಿಯನ್ನು ಬಳಸಬೇಕು । ಹಸ್ತದಲ್ಲಿ ಪಿತೃತೀರ್ಥದ ಬದಲಾಗಿ, ಹಸ್ತದ ದೇವತೀರ್ಥದಿಂದಲೇ ತರ್ಪಣದ ನೀರನ್ನು ಕೆಳಗೆ ಬೀಳಿಸಬೇಕು । ತರ್ಪಣದಲ್ಲಿ 3 ಸಲ ನೀರನ್ನು ಹಾಕುವುದರ ಬದಲಿಗೆ, ಒಂದು ಸಲ ಮಾತ್ರವೇ ನೀರನ್ನು ಹಾಕಬೇಕು । ಏಕೆಂದರೆ, ಶಾಸ್ತ್ರದಲ್ಲಿ ದೇವತೆಗಳಿಗೆ ಒಂದುಸಲ – ಋಷಿಗಳಿಗೆ ಎರಡುಸಲ – ಪಿತೃಗಳಿಗೆ ಮೂರುಸಲ ತರ್ಪಣ ಎಂದು ನಿಶ್ಚಯಗೊಳಿಸಿದ್ದಾರೆ । ಹಾಗೆಯೇ ಕೈಯಲ್ಲಿ ತರ್ಪಣದ ನೀರನ್ನು ಕೆಳಗೆ ಬೀಳಿಸಲೂ ಕೂಡ, ದೇವ – ಋಷಿ – ಪಿತೃಗಳಿಗೆ ಪ್ರತ್ಯೇಕವಾದ ಹಾಗೂ ನಿರ್ದಿಷ್ಟವಾದ ಜಾಗವನ್ನೂ ಹಸ್ತದಲ್ಲಿ ನಿಶ್ಚಯಿಸಿದ್ದಾರೆ । ಹಾಗಾಗಿ ನಾವು ಇಲ್ಲಿ ಶಾಸ್ತ್ರಕ್ಕನುಗುಣವಾದ ಕ್ರಮವನ್ನೇ ನೀಡಿದ್ದೇವೆ ॥

****

5. ಅಂಕುರಾರೋಪಣ ಪ್ರಯೋಗ:

ಪ್ರಾಣಾನಾಯಮ್ಯ । ಮಮ.....ಪ್ರೀತ್ಯರ್ಥಂ, ಕರಿಷ್ಯಮಾಣ.....ಕರ್ಮಾಂಗಭೂತಂ, ಅಂಕುರಾರೋಪಣಕರ್ಮ ಕರಿಷ್ಯೇ ॥

ತಂಡುಲ ಪೂರ್ಣಪಾತ್ರೇ ಪಂಚಪಾಲಿಕಾಂ ಕಲ್ಪಯಿತ್ವಾ ॥
ಮಣ್ಣು ತುಂಬಿರುವ 5 ಬಟ್ಟಲುಗಳನ್ನು ಅಕ್ಕಿತುಂಬಿರುವ ತಟ್ಟೆಯಲ್ಲಿ, ಮಧ್ಯ–ಪೂರ್ವ–ದಕ್ಷಿಣ–ಪಶ್ಚಿಮ–ಉತ್ತರಭಾಗಗಳಲ್ಲಿ ಇಟ್ಟುಕೊಂಡು ॥

ಮೊದಲು ಮಧ್ಯದ ಮಣ್ಣಿನಪಾತ್ರೆಯಲ್ಲಿ, ಬ್ರಹ್ಮನನ್ನು ಕೆಳಗೆ ಹೇಳಿರುವ ಮಂತ್ರದಿಂದ ಆವಾಹಿಸಬೇಕು ॥

ಬ್ರಹ್ಮ ಜಜ್ಞಾನಂ ಪ್ರಥಮಂ ಪುರಸ್ತಾದ್ವಿಸೀಮತ: ಸುರುಚೋವೇನ ಆವಹ ।
ಸ ಬುಧ್ನಿಯಾ ಉಪಮಾ ಅಸ್ಯ ವಿಷ್ಠಾಸ್ಸತಶ್ಚ ಯೋನಿಮಸತಶ್ಚ ವಿವ: ॥

ಮಧ್ಯೇ– ಓಂ ಭೂ: ಬ್ರಹ್ಮಾಣಂ ಆವಾಹಯಾಮಿ, ಓಂ ಭುವ: ಪ್ರಜಾಪತಿಂ ಆವಾಹಯಾಮಿ, ಓಗ್ಂ ಸುವ: ಹಿರಣ್ಯಗರ್ಭಂ ಆವಾಹಯಾಮಿ, ಓಂ ಭೂರ್ಭುವಸ್ಸುವ: ಚತುರ್ಮುಖಂ ಆವಾಹಯಾಮಿ ॥

ನಂತರ ಪೂರ್ವದ ಮಣ್ಣಿನಪಾತ್ರೆಯಲ್ಲಿ, ಕೆಳಗಿನ ಮಂತ್ರದಿಂದ ಇಂದ್ರನನ್ನು ಆವಾಹಿಸಬೇಕು ॥

ತ್ರಾತಾರಮಿಂದ್ರಮವಿತಾರ ಮಿಂದ್ರಗ್ಂ ಹವೇಹವೇ ಸುಹವಗ್ಂ ಶೂರಮಿಂದ್ರಮ್ ।
ಹುವೇನುಶಕ್ರಂ ಪುರುಹೂತ ಮಿಂದ್ರಗ್ಂ ಸ್ವಸ್ತಿನೋ ಮಘವಾ ಧಾತ್ವಿಂದ್ರ: ॥

ಪೂರ್ವೇ– ಓಂ ಭೂ: ಇಂದ್ರಂ ಆವಾಹಯಾಮಿ, ಓಂ ಭುವ: ಶತಕ್ರತುಂ

ಆವಾಹಯಾಮಿ, ಓಗ್ಂ ಸುವ: ವಜ್ರಿಣಂ ಆವಾಹಯಾಮಿ, ಓಂ ಭೂರ್ಭುವಸ್ಸುವ: ಶಚೀಪತಿಂ ಆವಾಹಯಾಮಿ ॥

ದಕ್ಷಿಣದ ಮಣ್ಣಿನಪಾತ್ರೆಯಲ್ಲಿ, ಕೆಳಗಿನಮಂತ್ರದಿಂದ, ಯಮನನ್ನು ಆವಾಹಿಸಬೇಕು ॥

ಸುಗನ್ನ:ಪಂಥಾಮಭಯಂ ಕೃಣೋತು । ಯಸ್ಮಿನ್ನಕ್ಷತ್ರೇ ಯಮಯೇತಿ ರಾಜಾ ।
ಯಸ್ಮಿನ್ನೇನಮಭ್ಯಷಿಂಚಂತ ದೇವಾ: । ತದಸ್ಯ ಚಿತ್ರಗ್ಂ ಹವಿಷಾ ಯಜಾಮ ॥

ದಕ್ಷಿಣೇ– ಓಂ ಭೂ: ಯಮಂ ಆವಾಹಯಾಮಿ, ಓಂ ಭುವ: ವೈವಸ್ವತಂ ಆವಾಹಯಾಮಿ, ಓಗ್ಂ ಸುವ: ಪಿತೃಪತಿಂ ಆವಾಹಯಾಮಿ, ಓಂ ಭೂರ್ಭುವಸ್ಸುವ: ಧರ್ಮರಾಜಂ ಆವಾಹಯಾಮಿ ॥

ಪಶ್ಚಿಮದ ಮಣ್ಣಿನಪಾತ್ರೆಯಲ್ಲಿ, ಕೆಳಗಿನಮಂತ್ರದಿಂದ ವರುಣನನ್ನು ಆವಾಹಿಸಬೇಕು ॥

ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿ: ।
ಅಹೇಡಮಾನೋ ವರುಣೇಹಬೋಧ್ಯುರುಷಗ್ಂ ಸಮಾನ ಆಯು: ಪ್ರಮೋಷೀ: ॥

ಪಶ್ಚಿಮೇ– ಓಂ ಭೂ: ವರುಣಂ ಆವಾಹಯಾಮಿ, ಓಂ ಭುವ: ಪ್ರಚೇತಸಂ ಆವಾಹಯಾಮಿ, ಓಗ್ಂ ಸುವ: ಸುರೂಪಿಣಂ ಆವಾಹಯಾಮಿ, ಓಂ ಭೂರ್ಭುವಸ್ಸುವ: ಅಪಾಂಪತಿಂ ಆವಾಹಯಾಮಿ ॥

ಉತ್ತರದ ಮಣ್ಣಿನಪಾತ್ರೆಯಲ್ಲಿ, ಕೆಳಗಿನಮಂತ್ರದಿಂದ ಸೋಮನನ್ನು ಆವಾಹಿಸಬೇಕು ॥

ವಯಗ್ಂ ಸೋಮ ವ್ರತೇ ತವ । ಮನಸ್ತನೂಷು ಬಿಭ್ರತ: । ಪ್ರಜಾವಂತೋ ಅಶೀಮಹಿ ॥ ಉತ್ತರೇ– ಓಂ ಭೂ: ಇಂದುಂ ಆವಾಹಯಾಮಿ, ಓಂ ಭುವ: ನಿಶಾಕರಂ

ಆವಾಹಯಾಮಿ, ಓಗ್ಂ ಸುವ: ಶಶಿನಂ ಆವಾಹಯಾಮಿ, ಓಂ ಭೂರ್ಭುವಸ್ಸುವ: ಸೋಮಂ ಆವಾಹಯಾಮಿ ॥

ಹೀಗೆ ಆವಾಹಿಸಿರುವ ದೇವತೆಗಳಿಗೆ ಈ ಕೆಳಗಿನಂತೆ ಉಪಚಾರ ಪೂಜೆಗಳನ್ನು ನೆರವೇರಿಸಬೇಕು ॥

ಆವಾಹಿತ ಬ್ರಹ್ಮಾದಿ ದೇವತಾಭ್ಯೋನಮ:, ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ / ವಸ್ತ್ರಂಸಮರ್ಪಯಾಮಿ / ಉಪವಸ್ತ್ರಂಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ / ನಾಮಪೂಜಾಂ ಕರಿಷ್ಯೇ –

ಕೆಳಗಿನ ನಾಮಗಳನ್ನು ಹೇಳುತ್ತಾ, ಹೂ ಅಕ್ಷತೆಗಳನ್ನು ದೇವತೆಗಳಿಗೆ ಪೂಜಿಸಬೇಕು ॥

ಓಂ ಬ್ರಹ್ಮಣೇನಮಃ । ಓಂ ಇಂದ್ರಾಯನಮಃ । ಓಂ ಯಮಾಯ ನಮಃ । ಓಂ ವರುಣಾಯ ನಮಃ । ಓಂ ಸೋಮಾಯ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ / ನೈವೇದ್ಯಂ ಸಮರ್ಪಯಾಮಿ / ತಾಂಬೂಲಂ ಸಮರ್ಪಯಾಮಿ / ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ / ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ / ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ / ಪ್ರಸನ್ನಾರ್ಘ್ಯಂ ಸಮರ್ಪಯಾಮಿ / ಪ್ರಾರ್ಥಯಾಮಿ, ನಮಸ್ಕರೋಮಿ / ಸರ್ವೋಪಚಾರಪೂಜಾಂ ಸಮರ್ಪಯಾಮಿ / ಅನಯಾಪೂಜಯಾ ಶ್ರೀಬ್ರಹ್ಮಾದಿದೇವತಾಃ ಪ್ರೀಯಂತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆನೀರನ್ನು, ದೇವತಾ ಆಚಮ್ಯಪಾತ್ರೆಯಿಂದ ದೇವತಾರ್ಘ್ಯ ಪಾತ್ರೆಗೆ ಹಾಕುವುದು ॥

ಯಾ ಜಾತಾ ಓಷಧಯೋ ದೇವೇಭ್ಯಸ್ತ್ರಿಯುಗಂ ಪುರಾ । ಮಂದಾಮಿ ಬಭ್ರೂಣಾಮಹಗ್ಂ ಶತಂ ಧಾಮಾನಿ ಸಪ್ತ ಚ ..... ॥

ಮಂತ್ರಾನುವಾಕೇನ ಧಾನ್ಯಾಭಿಮಂತ್ರಣಂ ಕೃತ್ವಾ ॥

ನಂತರ ಬೇರೆಪಾತ್ರೆಯಲ್ಲಿ ಇಟ್ಟುಕೊಂಡಿರುವ ಕಾಳುಗಳನ್ನು(ಮೊಳಕೆಬರುವ), ಯಾ ಜಾತಾ ಓಷಧಯಃ....,, ಮಂತ್ರಾನುವಾಕದಿಂದ ಅಭಿಮಂತ್ರಿಸಬೇಕು ॥ ನಂತರ

ಬ್ರಹ್ಮಾದಿಭ್ಯೋ ದೇವತಾಭ್ಯೋ ನಮ: ಅಯಂ ಬೀಜಾವಾಪ: ಇತಿ, ತತ್ತದ್ದೇವತಾ ನಾಮೋಚ್ಚಾರ್ಯ, ತತ್ತದ್ದೇವತಾ ಪಾಲಿಕಾಯಾಂ ಬೀಜಾವಾಪಯೇತ್ ॥

ಮೊದಲು, ಮಧ್ಯದ ಮಣ್ಣಿನಪಾತ್ರೆಯಲ್ಲಿ ಆವಾಹಿಸಿರುವ ದೇವತೆಯ ಹೆಸರನ್ನು ಮೇಲಿನಂತೆಹೇಳಿ, ಆ ಮಧ್ಯದಪಾತ್ರೆಯ ಮಣ್ಣಿಗೆ ಬೀಜಗಳನ್ನು ಬಿತ್ತುವುದು । ಹೀಗೆಯೇ ಉಳಿದ 4 ಪಾತ್ರೆಯ ಮಣ್ಣುಗಳಿಗೂ ಕ್ರಮವಾಗಿ ಆಯಾದೇವತೆಯ ಹೆಸರನ್ನು ಹೇಳಿ ಬಿತ್ತುವುದು ॥

ಪ್ರಾರ್ಥನಾಂ –

ಬ್ರಹ್ಮಾಪ್ರಜಾಪತೀ ಮಧ್ಯೇ ಹಿರಣ್ಯಗರ್ಭ ಚತುರ್ಮುಖೌ ।
ಇಂದ್ರಂ ಶತಕ್ರತುಂ ಪ್ರಾಚ್ಯಾಂ ವಜ್ರಿಣಂ ಚ ಶಚೀಪತಿಂ ।
ಯಮಂ ವೈವಸ್ವತಂ ಪಿತೃಪತಿಂ ಧರ್ಮರಾಜಮತ: ಪರಂ ।
ವರುಣಂ ಪ್ರಚೇತಸಂ ಪಶ್ಚಾತ್ ಸುರೂಪಿಣಮಪಾಂಪತಿಂ ।
ಇಂದುಂ ನಿಶಾಕರಂ ಚೈವ ಶಶಿನಂ ಸೋಮಮುತ್ತರೇ ।
ಆವಾಹಯೇದ್ವ್ಯಾಹೃತಿಭಿ: ಮಾರ್ಜಯೇದಾಪ ಆದಿಭಿ: ।
ಧ್ಯಾನಾದಿ ಪೂಜಾಂ ಕೃತ್ವಾಥ ಪ್ರಾರ್ಥಯೇತ್ತಾಶ್ಚ ದೇವತಾ: ।
ದಿಶಾಂಪತೀನ್ ನಮಸ್ಯಾಮಿ ಸರ್ವಕಾಮ ಫಲಪ್ರದಾನ್ ।
ಕುರ್ವಂತು ಸಫಲಂ ಕರ್ಮ ಕುರ್ವಂತು ಸತತಂ ಶುಭಂ ॥

ಯಾವತ್ಕರ್ಮ ಸುರಕ್ಷಿತಂ ತಾವದ್ಗೋಪಾಯೇತ್ ॥

ದಿಕ್ಪಾಲಕರೇ ನಿಮಗೆ ನಮಿಸುತ್ತೇನೆ । ನಮ್ಮ ಎಲ್ಲಾ ಆಸೆಗಳನ್ನು ಕೊಡುವವರು ತಾವು । ಈ ಕರ್ಮವನ್ನು ಸಫಲವಾಗಿ ಮಾಡಿರಿ, ಮಂಗಳವನ್ನು ಮಾಡಿರಿ । ಮುಂದೆ ಮಾಡಲ್ಪಡುವ ಪ್ರಧಾನಕರ್ಮವು ಸಂಪೂರ್ಣವಾಗುವವರೆಗೂ ಈ ಅಂಕುರಾರೋಪಣವು ಸುರಕ್ಷಿತವಾಗಿರಲಿ ॥

ಅಂಕುರಾರೋಪಣ ಮುಹೂರ್ತ: ಸುಮುಹೂರ್ತೋಽಸ್ತು ಇತಿ ಭವಂತ: ಅನುಗೃಹ್ಣಂತು–ಸುಮುಹೂರ್ತೋಽಸ್ತು ಇತಿ ಪ್ರತಿವಚನಂ ॥

ಅಂಕುರಾರೋಪಣ ಕರ್ಮದ ಮುಹೂರ್ತವು ಸುಮುಹೂರ್ತವಾಗಿರಲೆಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸುವುದು । ಸುಮುಹೂರ್ತವಾಗಿದೆ ಎಂಬುದು ಬ್ರಾಹ್ಮಣರ ಪ್ರತಿಮಾತು ॥

****

6. ರಕ್ಷಾಬಂಧನ ಪ್ರಯೋಗಃ

ಪ್ರಾಣಾನಾಯಮ್ಯ । ಮಮಉಪಾತ್ತ.....ಶ್ರೀಪರಮೇಶ್ವರ ಪ್ರೀತ್ಯರ್ಥಂ, ಕರಿಷ್ಯಮಾಣ .....ಕರ್ಮಾಂಗಭೂತಂ, ರಕ್ಷೋಬಾಧಾ ನಿವೃತ್ಯರ್ಥಂ, ರಕ್ಷಾಬಂಧನಕರ್ಮ ಕರಿಷ್ಯೇ ॥

ಪ್ರಾಣಾಯಾಮ ಮಾಡಿ । ಮೇಲಿರುವಂತೆ ಸಂಕಲ್ಪವನ್ನು ಹೇಳಬೇಕು ॥

ನಂತರ ಈ ಕೆಳಗಿನ ಮಂತ್ರದಿಂದ ಅರಿಶಿಣದ ದಾರಕ್ಕೆ ವಾಸುಕಿ(ಸರ್ಪ)ದೇವತೆಯನ್ನು ಆವಾಹಿಸಿ, ಕೆಳಗೆ ತಿಳಿಸಿರುವಂತೆ ಪೂಜೆಯನ್ನು ಮಾಡುವುದು ॥

ಓಂನ॑ಮೋಅಸ್ತು ಸ॒ರ್ಪೇ᳖ಭ್ಯೋ ಯೇ ಕೇ ಚ॑ ಪೃಥಿವೀಮ॒ನು । ಯೇ ಅ॒ಂತರಿ॑ಕ್ಷೇ ಯೇ ದಿ॒ವಿ ತೇ᳖ಭ್ಯಃ ಸ॒ರ್ಪೇ᳖ಭ್ಯೋ ನ॑ಮಃ ॥

ಅಸ್ಮಿನ್ ಸೂತ್ರೇ ವಾಸುಕಿಂ ಆವಾಹಯಾಮಿ / ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ / ವಸ್ತ್ರಂಸಮರ್ಪಯಾಮಿ / ಉಪವಸ್ತ್ರಂಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ /

ನಾಮಪೂಜಾಂ ಕರಿಷ್ಯೇ –

ಕೆಳಗಿನ ನಾಮಗಳನ್ನು ಹೇಳುತ್ತಾ, ಹೂವು, ಅಕ್ಷತೆಗಳನ್ನು ಪೂಜಿಸಬೇಕು ॥

ಓಂ ಅನಂತಾಯ ನಮಃ । ಓಂ ವಾಸುಕಯೇ ನಮಃ । ಓಂ ಕಾರ್ಕೋಟಕಾಯ ನಮಃ । ಓಂ ನಾಗಾಯ ನಮಃ । ಓಂ ಶಂಖಪಾಲಾಯ ನಮಃ । ಓಂ ಸರ್ಪರಾಜಾಯ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ / ನೈವೇದ್ಯಂ ಸಮರ್ಪಯಾಮಿ / ತಾಂಬೂಲಂ ಸಮರ್ಪಯಾಮಿ / ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ / ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ / ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ / ಪ್ರಸನ್ನಾರ್ಘ್ಯಂ ಸಮರ್ಪಯಾಮಿ / ಪ್ರಾರ್ಥಯಾಮಿ, ನಮಸ್ಕರೋಮಿ / ಸರ್ವೋಪಚಾರಪೂಜಾಂ ಸಮರ್ಪಯಾಮಿ / ಅನಯಾಪೂಜಯಾ ಶ್ರೀವಾಸುಕಿಃ ಪ್ರೀಯತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆನೀರನ್ನು, ದೇವತಾ ಆಚಮ್ಯಪಾತ್ರೆಯಿಂದ ದೇವತಾರ್ಘ್ಯ ಪಾತ್ರೆಗೆ ಹಾಕುವುದು ॥

ಬ್ರಾಹ್ಮಣಾನಾಂ ಹಸ್ತೇಷು ದರ್ಭಾನ್ ಪ್ರದಾಯ, ರಕ್ಷಾಬಂಧನಸೂಕ್ತ ಪಾರಾಯಣಾರ್ಥಂ ಭವಂತಂ ಋತ್ವಿಜೋವ್ಯೋ ವೃಣೇ ॥

ಬ್ರಾಹ್ಮಣರ ಕೈಗೆ ದರ್ಭೆಗಳನ್ನು ಕೊಟ್ಟು, ರಕ್ಷಾಬಂಧನಮಂತ್ರ ಪಾರಾಯಣಕ್ಕಾಗಿ ತಮ್ಮನ್ನು ಋತ್ವಿಜರನ್ನಾಗಿ ಆಹ್ವಾನಿಸುತ್ತಿದ್ದೇನೆ ಎಂದು ಹೇಳುವುದು ॥ ಬ್ರಾಹ್ಮಣರು ದರ್ಭೆಯನ್ನು ಹಿಡಿದುಕೊಂಡು, ಈ ಕೆಳಗಿನ ಮಂತ್ರಗಳನ್ನು ಹೇಳುವುದು ॥

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

ಓಂ ಆಪೋಹಿಷ್ಠಾ ಮಯೋಭುವಃ .....ಜನಯಥಾಚನಃ ॥

ಓಂಹಿರಣ್ಯವರ್ಣಾಶ್ಶುಚಯಃ ಪಾವಕಾ.....ಬಲಮೋಜೋ ನಿಧತ್ತ ॥

ಓಂಪವಮಾನಸ್ಸುವರ್ಜನಃ.....ವೋರ್ಜಯಂತ್ಯಾ ಪುನಾತು ॥

ಓಂ ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ
ರಜಾಗ್ಂಸಿ ಯೋ ಅಸ್ಕಭಾಯದುತ್ತರಗ್ಂ ಸದಸ್ಥಂ ವಿಚಕ್ರಮಾಣಸ್ತ್ರೇ
ಧೋರುಗಾಯೋ ವಿಷ್ಣೋ ರರಾಟಮಸಿ ವಿಷ್ಣೋಃಪೃಷ್ಠಮಸಿ ವಿಷ್ಣೋಶ್ನಪ್ತ್ರೇಸ್ಥೋ
ವಿಷ್ಣೋಸ್ಯೂರಸಿ ವಿಷ್ಣೋರ್ಧ್ರುವಮಸಿ ವೈಷ್ಣವಮಸಿ ವಿಷ್ಣವೇ ತ್ವಾ ॥

ಓಂಕೃಣುಷ್ವಪಾಜಃ ಪ್ರಸಿತಿಂ ನ ಪೃಥ್ವೀಂ.....ರಕ್ಷಸೇ ಹಂತ ವಾ ಉ ॥

ಓಂಮಹಾಗ್ಂ ಇಂದ್ರೋ ವಜ್ರಬಾಹುಷ್ಷೋಡಶೀ ಶರ್ಮಯಚ್ಛತು । ಸ್ವಸ್ತಿ ನೋ
ಮಘವಾಕರೋತು ಹಂತು ಪಾಪ್ಮಾನಂ ಯೋಸ್ಮಾನ್ದ್ವೇಷ್ಟಿ ॥ ಸಜೋಷಾ
ಇಂದ್ರಸಗಣೋ ಮರುದ್ಭಿಸ್ಸೋಮಂಪಿಬ ವೃತ್ರಹನ್ಶೂರ ವಿದ್ವಾನ್ । ಜಹಿ
ಶತ್ರೂಗ್ಂರಪಮೃಧೋನುದಸ್ವಾಥಾಭಯಂ ಕೃಣುಹಿ ವಿಶ್ವತೋ ನಃ ॥

ಓಂತ್ರಾತಾರಮಿಂದ್ರಮವಿತಾರಮಿಂದ್ರಗ್ಂ ಹವೇಹವೇ ಸುಹವಗ್ಂ ಶೂರಮಿಂದ್ರಂ ।
ಹುವೇನುಶಕ್ರಂ ಪುರುಹೂತಮಿಂದ್ರಗ್ಂ ಸ್ವಸ್ತಿ ನೋ ಮಘವಾ ಧಾತ್ವಿಂದ್ರಃ ॥

ಓಂಅಗ್ನಿರಾಯುಷ್ಮಾನ್ಸ ವನಸ್ಪತಿಭಿರಾಯುಷ್ಮಾನ್ತೇನ ತ್ವಾಯುಷಾಯುಷ್ಮಂತಂ ಕರೋಮಿ ।
ಸೋಮ ಆಯುಷ್ಮಾನ್ಸ ಓಷಧೀಭಿರಾಯುಷ್ಮಾನ್ತೇನ ತ್ವಾಯುಷಾಯುಷ್ಮಂತಂ ಕರೋಮಿ ।
ಯಜ್ಞ ಆಯುಷ್ಮಾನ್ಸ ದಕ್ಷಿಣಾಭಿರಾಯುಷ್ಮಾನ್ತೇನ ತ್ವಾಯುಷಾಯುಷ್ಮಂತಂ ಕರೋಮಿ ।
ಬ್ರಹ್ಮಾಯುಷ್ಮತ್ತದ್ಬ್ರಾಹ್ಮಣೈರಾಯುಷ್ಮತ್ತೇನ ತ್ವಾಯುಷಾಯುಷ್ಮಂತಂ ಕರೋಮಿ ।
ದೇವಾ ಆಯುಷ್ಮಂತಸ್ತೇಽಮೃತೇನಾ ಯುಷ್ಮಂತಸ್ತೇನಽತ್ವಾಯುಷಾಽಯುಷ್ಮಂತಂ
ಕರೋಮಿ ॥

ಓಂ ನಮೋ ಅಸ್ತು ಸರ್ಪೇಭ್ಯೋ ಯೇ ಕೇ ಚ ಪೃಥಿವೀಮನು । ಯೇ ಅಂತರಿಕ್ಷೇ ಯೇ ದಿವಿ ತೇಭ್ಯಸ್ಸರ್ಪೇಭ್ಯೋ ನಮಃ ॥

ಸೂತ್ರಂ ಸಕೃತ್ ಸ್ನಾಪಯಿತ್ವಾ। ತ್ರ್ಯಂಬಕಮಿತಿ ಮಂತ್ರೇಣ ಸೂತ್ರಂ ಭಸ್ಮನಾ ಯಥೋರ್ಧ್ವಂ ಸಮ್ಮಂಜನ: ॥

ಮಂತ್ರಪಾರಾಯಣದ ನಂತರ ಒಂದುಸಲ ಅಮಂತ್ರಕವಾಗಿ ನೀರನ್ನು ಸೂತ್ರಕ್ಕೆ ಪ್ರೋಕ್ಷಿಸುವುದು । ನಂತರ ತ್ರ್ಯಂಬಕ ಮಂತ್ರದಿಂದ ಆ ಸೂತ್ರವನ್ನು ಮೇಲ್ಮುಖವಾಗಿ ಎಳೆಯುತ್ತಾ ಭಸ್ಮವನ್ನು ಹಚ್ಚುವುದು ॥

ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ । ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್ ॥

ವಿಶ್ವೇತ್ತಾತೇತಿ ಮಂತ್ರೇಣ ಪುರುಷಸ್ಯ ಸಾಕ್ಷತ ತಾಂಬೂಲಹಿರಣ್ಯೇ ದಕ್ಷಿಣೇಹಸ್ತೇ ಸೂತ್ರಂ ಬಧ್ನೀಯಾತ್ ॥

ವಿಶ್ವೇತ್ತಾತೇ ಮಂತ್ರದಿಂದ ಅಕ್ಷತೆ, ತಾಂಬೂಲ ಮತ್ತು ಹಿರಣ್ಯಗಳನ್ನು ಹಿಡಿದಿರುವ ಯಜಮಾನನ(ಗಂಡಸು) ಬಲ(ದಕ್ಷಿಣ) ಕೈಗೆ ಸೂತ್ರವನ್ನು ಕಟ್ಟುವುದು ॥

ಓಂ ವಿಶ್ವೇತ್ತಾತೇ ಸವನೇಷು ಪ್ರವಾಚ್ಯಾಯಾ ಚಕರ್ತ ಮಘವನ್ನಿಂದ್ರ ಸುನ್ವತೇ । ಪಾರಾವತಂ ಯತ್ಪುರು ಸಂಭೃತಂವಸ್ವ ಪಾವೃಣೋಶ್ವರಭಾಯ ಋಷಿಬಂಧವೇ ॥

ಬೃಹತ್ಸಾಮೇತಿ ಸ್ತ್ರೀಣಾಂ ವಾಮಹಸ್ತೇ ಬಧ್ನೀಯಾತ್ ॥
ಬೃಹತ್ಸಾಮ ಮಂತ್ರದಿಂದ, ಸ್ತ್ರೀಯರಿಗೆ ಎಡ(ಉತ್ತರ) ಕೈಗೆ ಕಟ್ಟುವುದು ॥

ಓಂ ಬೃಹತ್ಸಾಮ ಕ್ಷತ್ರಭೃದ್ವೃದ್ಧವೃಷ್ಣಿಯಂ ತ್ರಿಷ್ಟುಭೌಜಶ್ಯುಭಿತಮುಗ್ರವೀರಮ್ ।
ಇಂದ್ರಸ್ತೋಮೇನ ಪಂಚದಶೇನ ಮಧ್ಯಮಿದಂ ವಾತೇನ ಸಗರೇಣ ರಕ್ಷ ॥

ಬೃಹತ್ಸಾಮೇತಿ ಮಂತ್ರೇಣ ಗ್ರಂಥ್ಯುಪರಿ ಭಸ್ಮೇಣ ರಕ್ಷಾಂ ಕುರ್ಯಾತ್ ॥
ಬೃಹತ್ಸಾಮ ಮಂತ್ರದಿಂದಲೇ, ಆ ಸೂತ್ರದ ಗಂಟಿನಮೇಲೆ ಭಸ್ಮವನ್ನು ಹಚ್ಚುವುದು ॥

ಋತ್ವಿಗ್ಭ್ಯೋ ದಕ್ಷಿಣಾಂ ದತ್ವಾ । ರಕ್ಷಾಬಂಧನ ಮುಹೂರ್ತಸ್ಸುಮುಹೂರ್ತ: ಅಸ್ತಿತಿ ಭವಂತ: ಅನುಗೃಹ್ಣಂತು – ಸುಮುಹೂರ್ತೋಽಸ್ತು ಇತಿ ಪ್ರತಿವಚನಂ ॥

ಮಂತ್ರ ಪಾರಾಯಣ ಮಾಡಿರುವ ಬ್ರಾಹ್ಮಣರಿಗೆ ಕರ್ಮಸಾಂಗತೆಗಾಗಿ ದಕ್ಷಿಣೆಯನ್ನು ಕೊಟ್ಟು । ರಕ್ಷಾಬಂಧನ ಕರ್ಮದ ಮುಹೂರ್ತವು ಸುಮುಹೂರ್ತವಾಗಿದೆಯೆಂದು ಹೇಳಿರಿ, ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸುವುದು – ಸುಮುಹೂರ್ತವಾಗಿದೆಯೆಂದು ಬ್ರಾಹ್ಮಣರು ಹೇಳುತ್ತಾರೆ ॥

****

7. ಅಗ್ನಿಮುಖ(ಹೋಮ) ಪ್ರಯೋಗ:

ಪ್ರೋಕ್ಷಣೆ –

ಪೂರ್ವಕ್ಕೆ ಆಸನದ ಮೇಲೆ ಕುಳಿತು, ಈ ಶ್ಲೋಕವನ್ನು ಹೇಳಿಕೊಳ್ಳುತ್ತಾ, ಕರ್ತೃವಿನ ಆಚಮನಪಾತ್ರೆಯಿಂದ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು, ಕೈಗೆ ಹಾಕಿಕೊಂಡು, ಶರೀರಕ್ಕೆ ಪ್ರೋಕ್ಷಿಸಿಕೊಳ್ಳಬೇಕು ॥

ಅಪವಿತ್ರ: ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ । ಯ: ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ: ಶುಚಿ: ॥

ಆಸನಶುದ್ಧಿ –

(ಸ್ವಲ್ಪನೀರನ್ನು ಆಸನದಕೆಳಗೆ ಹಾಕಿ, ಆ ಜಾಗವನ್ನು ಹಿಡಿದುಕೊಂಡು, ಕೆಳಗಿನ ಶ್ಲೋಕವನ್ನು ಹೇಳುವುದು)

ಪೃಥ್ವಿ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ ಧೃತಾ । ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರುಚಾಸನಮ್ ॥ ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿ ಸಂಸ್ಥಿತಾ: । ಯೇ ಭೂತಾ ವಿಘ್ನಕರ್ತಾರಸ್ತೇನಶ್ಯಂತು ಶಿವಾಜ್ಞಯಾ ॥ ಅಪಕ್ರಾಮಂತು ಭೂತಾದ್ಯಾಸ್ಸರ್ವೇ ತೇ ಭೂಮಿಭಾರಕಾ: । ಸರ್ವೇಷಾಮವಿರೋಧೇನ ಬ್ರಹ್ಮಕರ್ಮ ಸಮಾರಭೇ ॥ ತೀಕ್ಷ್ಣದಂಷ್ಟ್ರ ಮಹಾಕಾಯ ಕಲ್ಪಾಂತ ದಹನೋಪಮ । ಭೈರವಾಯ ನಮಸ್ತುಭ್ಯಂ ಅನುಜ್ಞಾಂ ದಾತುಮರ್ಹಸಿ ॥

ಆಚಮನ –

ಕರ್ತೃ ಆಚಮ್ಯಪಾತ್ರೆ, ದೇವತಾಚಮ್ಯಪಾತ್ರೆ, ಕರ್ತೃ ಅರ್ಘ್ಯಪಾತ್ರೆ, ದೇವತಾರ್ಘ್ಯಪಾತ್ರೆಗಳನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವುದು ॥

ಕರ್ತೃವಿನ ಆಚಮ್ಯ ಪಾತ್ರೆಯಿಂದ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು, ಅದನ್ನು ಬಲಕೈಯಲ್ಲಿ ಹಾಕಿಕೊಂಡು, ಕೆಳಗಿನ ಒಂದೊಂದು ನಾಮಗಳನ್ನು ಹೇಳಿಕೊಂಡು,

ಒಮ್ಮೊಮ್ಮೆ ಕುಡಿಯಬೇಕು । 4 ನೇ ನಾಮವನ್ನು ಹೇಳಿ, ನೀರನ್ನು ಕರ್ತೃವಿನ ಅರ್ಘ್ಯಪಾತ್ರೆಗೆ ಹಾಕಬೇಕು ॥

ಕೇಶವಾಯ ನಮ: । ನಾರಾಯಣಾಯ ನಮ: । ಮಾಧವಾಯ ನಮ: । ಗೋವಿಂದಾಯ ನಮ: ॥

((ಕೈ ತೊಳೆದುಕೊಂಡು, ಮುಂದಿನ ಒಂದೊಂದು ನಾಮಗಳನ್ನು ಹೇಳುತ್ತಾ, ದೇಹದ ಒಂದೊಂದು ಅಂಗಗಳನ್ನು ಮುಟ್ಟಬೇಕು))

ವಿಷ್ಣವೇ ನಮ: – ಬಲಮೂಗು, ಎಡಮೂಗು ॥

ಮಧುಸೂದನಾಯ ನಮ: – ಬಲಕಣ್ಣು, ಎಡಕಣ್ಣು ॥

ತ್ರಿವಿಕ್ರಮಾಯ ನಮ: – ಬಲಕಿವಿ, ಎಡಕಿವಿ ॥

ವಾಮನಾಯ ನಮ: – ಹೊಕ್ಕಳು ॥

ಶ್ರೀಧರಾಯ ನಮ: – ಹೃದಯ ॥

ಹೃಷೀಕೇಶಾಯ ನಮ: – ತಲೆ ॥

ಪದ್ಮನಾಭಾಯ ನಮ: – ಬಲಹೆಗಲು ॥

ದಾಮೋದರಾಯ ನಮ: – ಎಡಹೆಗಲು ॥ (ಈ ರೀತಿ 2 ಸಲ ಮಾಡಬೇಕು)

ಪ್ರಾಣಾಯಾಮ –

ಪವಿತ್ರವನ್ನು ಹಾಕಿಕೊಂಡು, ತರ್ಜನೀ, ಮಧ್ಯಮ ಬೆರಳುಗಳನ್ನು ಮಡಿಸಿಕೊಂಡು ಅಂಗುಷ್ಠ, ಅನಾಮಿಕ, ಕನಿಷ್ಠ ಬೆರಳುಗಳಿಂದ ಮೂಗಿನ ಎಡರಂಧ್ರದಿಂದ ಗಾಳಿಯನ್ನು ತೆಗೆದುಕೊಂಡು, ತುದಿಯನ್ನು ಮುಚ್ಚಿದಂತೆ ಹಿಡಿದುಕೊಂಡು ಗಾಳಿಯನ್ನು ಒಳಗೆ ನಿಲ್ಲಿಸಿಕೊಂಡು, ಮನಸ್ಸಿನಿಂದ ಕೆಳಗಿನಪ್ರಾಣಾಯಾಮ ಮಂತ್ರಗಳನ್ನು ಜಪಿಸಿ ಬಲರಂಧ್ರದಿಂದ ಗಾಳಿಯನ್ನು ನಿಧಾನವಾಗಿ ಬಿಡಬೇಕು ಹೀಗೆ ಮಾಡಿದರೆ 1 ಪ್ರಾಣಾಯಾಮ ಆಗುತ್ತದೆ ॥

ಓಂ ಭೂಃ ಓಂ ಭುವಃ ಓಗ್ಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಗ್ಂ ಸತ್ಯಂ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್ ॥ ಓಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ಘಂಟಾನಾದ –

ಈ ಕೆಳಗಿನ ವಾಕ್ಯವನ್ನು ಹೇಳಿ, ಘಂಟಾನಾದ ಮಾಡುವುದು ॥

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ॥ ಕುರ್ವೇ ಘಂಟಾರವಂ ತತ್ರ ದೇವತಾಽಹ್ವಾನ ಲಾಂಛನಮ್ ॥

ಸಂಕಲ್ಪ –

ಹೂ, ಅಕ್ಷತೆಗಳನ್ನು ಕೈಯಲ್ಲಿ ಇಟ್ಟುಕೊಂಡು, ಕೆಳಗೆ ತಿಳಿಸಿರುವಂತೆ ಹೇಳಬೇಕು ॥

ಶುಭೇ, ಶೋಭನೇಮುಹೂರ್ತೇ, ಅದ್ಯಬ್ರಹ್ಮಣಃ, ದ್ವಿತೀಯಪರಾರ್ಧೇ, ಶ್ವೇತವರಾಹಕಲ್ಪೇ, ವೈವಸ್ವತಮನ್ವಂತರೇ, ಅಷ್ಟಾವಿಂಶತಿತಮೇ ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡಕಾರಣ್ಯೇ, ಗೋದಾವರ್ಯಾಃ ದಕ್ಷಿಣೇತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೇ, ಮೇರೋರ್ದಕ್ಷಿಣೇಪಾರ್ಶ್ವೇ, ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೇ, ಚಾಂದ್ರಮಾನೇನ, ಅಸ್ಯ ಪ್ರಭವಾದಿ ಷಷ್ಟ್ಯಃ ಸಂವತ್ಸರಾಣಾಂ ಮಧ್ಯೇ, ಶ್ರೀಮತ್....ನಾಮಸಂವತ್ಸರೇ, ...ಅಯನೇ, ...ಋತೌ, ...ಮಾಸೇ, ...ಪಕ್ಷೇ, ...ಶುಭತಿಥೌ, ...ವಾಸರ ಯುಕ್ತಾಯಾಂ, ...ನಕ್ಷತ್ರಯುಕ್ತಾಯಾಂ, ...ಯೋಗ, ...ಕರಣ, ಏವಂಗುಣ ವಿಶೇಷಣ ವಿಶಿಷ್ಟಾಯಾಂ, ಶುಭತಿಥೌ, ಮಮಉಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ,

.....ಗೋತ್ರೇ .....ನಕ್ಷತ್ರೇ, ...ರಾಶೌ ಜಾತಸ್ಯ, ...ನಾಮಧೇಯಸ್ಯ । .....ನಕ್ಷತ್ರೇ, ...ರಾಶೌ ಜಾತಾಯಾಃ .....ನಾಮ್ನ್ಯಃ, ಮಮ ಧರ್ಮಕಾಂತಾಯಾಃ । .....ನಕ್ಷತ್ರೇ, ...ರಾಶೌ ಜಾತಸ್ಯ .....ನಾಮಧೇಯಸ್ಯ, ಮಮ ಕುಮಾರಸ್ಯ । .....ನಕ್ಷತ್ರೇ, ...ರಾಶೌ ಜಾತಾಯಾಃ .....ನಾಮ್ನ್ಯಃ ಮಮ ಕುಮಾರ್ಯಾಃ । .....ಗೋತ್ರೇ .....ನಕ್ಷತ್ರೇ, ...ರಾಶೌ ಜಾತಸ್ಯ .....ನಾಮಧೇಯಸ್ಯ ಮಮ ಜನಕಸ್ಯ । .....ನಕ್ಷತ್ರೇ, ...ರಾಶೌ ಜಾತಾಯಾಃ .....ನಾಮ್ನ್ಯಃ, ಮಮ ಜನನ್ಯಾಃ ।

ಅಸ್ಮಾಕಂ ಸಹಕುಟುಂಬಾನಾಂ ಚ ಕ್ಷೇಮ ಸ್ಥೈರ್ಯ ವಿಜಯ ವೀರ್ಯ ಅಭಯ ಆಯುಃ ಆರೋಗ್ಯ ಐಶ್ವರ್ಯಾಭಿವೃದ್ಧ್ಯರ್ಥಂ । ಧರ್ಮಾರ್ಥ ಕಾಮ ಮೋಕ್ಷ ಚತುರ್ವಿಧ ಫಲ ಪುರುಷಾರ್ಥ ಸಿದ್ಧ್ಯರ್ಥಂ । ಸಕಲ ಅಪಮೃತ್ಯು ಪೀಡಾ-ಪರಿಹಾರ ದ್ವಾರಾ ದೀರ್ಘಾಯುಷ್ಯಾಭಿವೃದ್ಧ್ಯರ್ಥಂ । ಅಚಂಚಲ ಭಕ್ತಿ, ಜ್ಞಾನ, ನಿಷ್ಠಾ ಸಿದ್ಧ್ಯರ್ಥಂ । ಮಮ ಸಮಸ್ತ ಅಸದ್ವೃತ್ತಿ ನಿವಾರಣದ್ವಾರಾ, ಸಕಲ ಸದ್ವೃತ್ತಿ ಉದ್ಬೋಧನಾರ್ಥಂ । ಸಮಸ್ತ ಸನ್ಮಂಗಳಾವಾಪ್ತ್ಯರ್ಥಂ । ಜ್ಞಾನತಃ ಅಸತ್‌ಕೃತಾನಾಂ, ಅಜ್ಞಾನತಃ ಅಸತ್‌ಕೃತಾನಾಂ, ಸರ್ವೇಷಾಂ ಪಾಪಾನಾಂ ಅಪನೋದನದ್ವಾರಾ ಸದ್ವಿದ್ಯಾ ಸದ್ಬುದ್ಧಿ ಸತ್ಸಂಸ್ಕಾರ ಪ್ರಾಪ್ತ್ಯರ್ಥಂ । ಮಮ ಚಿತ್ತಶುದ್ಧ್ಯರ್ಥಂ । ಸಮಸ್ತದೇವತಾ ಅನುಗ್ರಹಸಿದ್ಧ್ಯರ್ಥಂ । ತತ್ತದ್ದೇವತಾ ಪ್ರೀತ್ಯರ್ಥಂ, ಪ್ರಸಾದಸಿದ್ಧ್ಯರ್ಥಂ । .....ದೇವತಾ ಹೋಮಾಖ್ಯಂ ಕರ್ಮ, ಆಚಾರ್ಯಾದಿ ಋತ್ವಿಜ್ಮುಖೇನ ಅನ್ಯೋನ್ಯಸಾಹಾಯ್ಯೇನ ಚ ಕರಿಷ್ಯೇ / ಕಾರಯಿಷ್ಯೇ ॥ ತದಂಗತದಾದೌ, ಋತ್ವಿಗ್ವರಣಂ / ಕಲಶಪೂಜಾಂ / ಗಣಪತಿಂ ಸ್ಮರಣಂ ಚ ಕರಿಷ್ಯೇ ॥

ಮೇಲೆ ತಿಳಿಸಿರುವಂತೆ ಸಂಕಲ್ಪವನ್ನು ಹೇಳಿಕೊಂಡು, ದೇವತಾ ಆಚಮ್ಯಪಾತ್ರೆಯಿಂದ ಒಂದು ಉದ್ಧರಣೆ ನೀರನ್ನು ಹೂ, ಅಕ್ಷತೆಗಳೊಂದಿಗೆ ದೇವತಾ ಅರ್ಘ್ಯಪಾತ್ರೆಗೆ ಬಿಡುವುದು ॥

ಋತ್ವಿಗ್ವರಣಂ –

ಪೂರ್ವೋಕ್ತ ಸಕಲಕಾಮನಾಸಿದ್ಧ್ಯರ್ಥಂ, ಪೂರ್ವೋಕ್ತ .....ಕರ್ಮಣಿ (ಅಥವಾ, ತತ್ತದ್ದೇವತಾ ಪೂಜಾ, ಜಪ, ಹೋಮಾರ್ಥಂ) ಆಚಾರ್ಯತ್ವಂ ಕುರು ಆಚಾರ್ಯಂ ತ್ವಾಮಹಂ ವೃಣೇ / ಬ್ರಹ್ಮತ್ವಂಕುರು ಬ್ರಹ್ಮಾಣಂ ತ್ವಾಮಹಂ ವೃಣೇ / ಋತ್ವಿಜಂ ತ್ವಾಮಹಂ ವೃಣೇ ॥ ವೃತೋಸ್ಮಿ ಕರಿಷ್ಯಾಮಿ ಇತಿ ಪ್ರತಿವಚನಂ ॥

ಈ ಮೇಲಿನಂತೆ ಹೇಳಿ, ಆಚಾರ್ಯ ಮುಂತಾದ ಋತ್ವಿಜರಿಗೆ ದರ್ಭೆ ಮತ್ತು ದಕ್ಷಿಣೆಗಳನ್ನು ಕೊಟ್ಟು, ಸಂಕಲ್ಪಿತಕರ್ಮವನ್ನು ಮಾಡಲು ಆಹ್ವಾನಿಸಬೇಕು ॥

ಕಲಶಪೂಜಾ –

ಕಲಶದ ಹೊರಭಾಗಕ್ಕೆ ಪೂರ್ವದಿಂದ ಪ್ರದಕ್ಷಿಣಾಕಾರವಾಗಿ ನಾಲ್ಕೂ ದಿಕ್ಕುಗಳಿಗೆ ಗಂಧವನ್ನು ಹಚ್ಚುವುದು, ಕಲಶದ ಜಲಕ್ಕೆ ಗಂಧ, ಅಕ್ಷತೆ, ಹೂವು, ತುಳಸಿ, ಅರಿಶಿನ ಕುಂಕುಮಗಳನ್ನು ಹಾಕುವುದು, ಕಲಶವನ್ನು ಹಿಡಿದು ನಾಲ್ಕು ಸಲ ಗಾಯತ್ರೀ ಮಂತ್ರವನ್ನು ಜಪಿಸುವುದು ಹಾಗೂ ಈ ಕೆಳಗಿನ ಮಂತ್ರಗಳನ್ನು ಹೇಳುವುದು ॥

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಾಸ್ಸಮಾಶ್ರಿತಾಃ । ಮೂಲೇ ತತ್ರಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾ: । ಕುಕ್ಷೌ ತು ಸಾಗರಾಸ್ಸರ್ವೇ ಸಪ್ತದ್ವೀಪಾ ವಸುಂಧರಾ । ಋಗ್ವೇದೋsಥಯಜುರ್ವೇದಃ ಸಾಮವೇದೋಹ್ಯಥರ್ವಣಃ । ಅಂಗೈಶ್ಚ ಸಹಿತಾಸ್ಸರ್ವೇ ಕಲಶಾಂಬು ಸಮಾಶ್ರಿತಾಃ । ಆಯಾಂತು ದೇವ ಪೂಜಾರ್ಥಂ ದುರಿತಕ್ಷಯಕಾರಕಾಃ । ಸರ್ವೇ ಸಮುದ್ರಾಸ್ಸರಿತಸ್ತೀರ್ಥಾನಿ ಜಲದಾನದಾಃ । ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ । ನರ್ಮದೇ ಸಿಂಧು ಕಾವೇರಿ ಜಲೇsಸ್ಮಿನ್ ಸನ್ನಿಧಿಂ ಕುರು ॥

ಓಂ ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಗ್ಂ ಸಚತಾ ಪರುಷ್ಣಿಯಾ । ಅಸಿಕ್ನಿಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

ಆಪ್ಯೋ ವಾ ಇದಗ್ಂ ಸರ್ವಂ ವಿಶ್ವಾ ಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪ್ಯೋsನ್ನಮಾಪ್ಯೋsಮೃತಮಾಪಸ್ಸಮ್ರಾಡಾಪ್ಯೋ ವಿರಾಡಾಪಃ ಸ್ವರಾಡಾಪಶ್ಛಂದಾಗ್ ಸ್ಯಾಪ್ಯೋ ಜ್ಯೋತೀಗ್ಷ್ಯಾಪ್ಯೋ ಯಜೂಗ್ಷ್ಯಾಪಸ್ಸತ್ಯಮಾಪಸ್ಸರ್ವಾ ದೇವತಾ ಆಪ್ಯೋ ಭೂರ್ಭುವಸ್ಸುವರಾಪ ಓಮ್ ॥

ಅಸ್ಮಿನ್ ಕಲಶೇ ಗಂಗಾದಿ ಸರ್ವತೀರ್ಥಾನ್ಯಾವಾಹಯಾಮಿ ॥

ಕಲಶದ ನೀರನ್ನು ದೇವರಿಗೆ, ಕುಂಡಕ್ಕೆ, ಪೂಜಾದ್ರವ್ಯಗಳಿಗೆ ಪ್ರೋಕ್ಷಿಸುವುದು, ನಮಗೂ ಪ್ರೋಕ್ಷಿಸಿಕೊಳ್ಳುವುದು ॥

ಸ್ಥಂಡಿಲಂ –

ಶುಚೌದೇಶೇ, ಚತುರಶ್ರಂ ಸ್ಥಂಡಿಲಂ ಕಲ್ಪಯಿತ್ವಾ । ಸಿಕತಾ: ಪ್ರಕೀರ್ಯ ॥

ಶುದ್ಧಿಯಾದ ಜಾಗದಲ್ಲಿ, ಚೌಕಾಕಾರದ ಸ್ಥಂಡಿಲ(ಕುಂಡ)ವನ್ನು ಮಾಡಿಕೊಂಡು । ಮರಳನ್ನು ಹರಡಿ, ಮರಳಿನಮೇಲೆ, ಅಕ್ಕಿಹಿಟ್ಟು ಅಥವಾ ರಂಗೋಲಿಯನ್ನು ಹರಡಬೇಕು ॥

ಪುರಸ್ತಾದಾರಭ್ಯ, ಪರ್ಯುಕ್ಷ್ಯ । ಪರಿಮೃಜ್ಯ ॥

ಕುಂಡದ ಒಳಭಾಗ ಹಾಗೂ ಮೇಲ್ಭಾಗಕ್ಕೆ ಪೂರ್ವದಕಡೆಯಿಂದ ಆರಂಭಿಸಿ । ನೀರನ್ನು ಪ್ರೋಕ್ಷಿಸಿ । ದರ್ಭೆಯಕಟ್ಟಿನಿಂದ ಸ್ವಚ್ಛಗೊಳಿಸಬೇಕು ॥

ಪ್ರಾಚೀರುದೀಚೀಶ್ಚ ತಿಸ್ರಸ್ತಿಸ್ರೋ ರೇಖಾ ಲಿಖಿತ್ವಾ ॥

ಕುಂಡದ ಒಳಗೆ ಮರಳಿನಮೇಲೆ ಪೂರ್ವಾಗ್ರ, ಉತ್ತರಾಗ್ರವಾಗಿ 3–3 ರೇಖೆಗಳನ್ನು ಒಂದುಸಮಿತ್ತು ಹಾಗೂ ಒಂದುದರ್ಭೆಯಿಂದ ಎಳೆಯಬೇಕು ॥

ಪೂರ್ವಾಗ್ರರೇಖೆಗಳನ್ನು ಈ ಕೆಳಗಿನ ವಾಕ್ಯಗಳನ್ನು ಹೇಳಿಕೊಂಡು ಎಳೆಯಬೇಕು ॥

ಬ್ರಹ್ಮಣೇನಮಃ । ವಿಷ್ಣವೇನಮಃ । ಈಶ್ವರಾಯನಮಃ ॥

ಉತ್ತರಾಗ್ರರೇಖೆಗಳನ್ನು ಈ ಕೆಳಗಿನ ವಾಕ್ಯಗಳನ್ನು ಹೇಳಿಕೊಂಡು ಎಳೆಯಬೇಕು ॥

ಗೌರ್ಯೈನಮಃ । ಲಕ್ಷ್ಮ್ಯೈನಮಃ । ಸರಸ್ವತ್ಯೈನಮಃ ॥

ಅದ್ಭಿರವೋಕ್ಷ್ಯ । ತೃಣಂ ನಿರಸ್ಯ । ಅಪ ಉಪಸ್ಪೃಶ್ಯ ॥

ದರ್ಭೆ ಹಾಗೂ ಸಮಿತ್ತು ಇರುವಂತೆಯೇ ಕೈಗೆ ನೀರನ್ನು ಹಾಕಿಕೊಂಡು ಆ ನೀರನ್ನು ರೇಖೆಗಳಮೇಲೆ ಪ್ರೋಕ್ಷಿಸಿ । ದರ್ಭೆ, ಸಮಿತ್ತುಗಳನ್ನು ಮುರಿದು ನೈಋತ್ಯಕ್ಕೆ ಎಸೆದು, ಕೈತೊಳೆದುಕೊಳ್ಳಬೇಕು ॥

ಅಗ್ನಿ ಪ್ರತಿಷ್ಠಾಪನಂ –

ಪಾತ್ರೆಯಲ್ಲಿ ಸಿದ್ಧಮಾಡಿಕೊಂಡ ಅಗ್ನಿಯನ್ನು, ಈ ಕೆಳಗಿನಮಂತ್ರಗಳನ್ನು ಹೇಳಿ, ಕುಂಡದ ಆಗ್ನೇಯಭಾಗದಲ್ಲಿ, ಉತ್ತರಾಭಿಮುಖವಾಗಿ ನಿಂತುಕೊಂಡು, ಎರಡು ಕೈಗಳಿಂದಲೂ, ಆಯಾಕರ್ಮದ ಅಗ್ನಿಯ ನಿರ್ದಿಷ್ಟಹೆಸರನ್ನು ಹೇಳಿ, ರೇಖೆಗಳಮೇಲೆ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು ॥

ಅಗ್ನೇನಯ ಸುಪಥಾರಾಯೇ ಅಸ್ಮಾನ್, ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮ ಜ್ಜುಹುರಾಣ ಮೇನೋ ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

ಚತ್ವಾರಿಶೃಂಗಾ ತ್ರಯೋ ಅಸ್ಯ ಪಾದಾ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ ।
ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಗ್ಂ ಆವಿವೇಶ ॥

ಭೂರ್ಭುವಸ್ಸುವರೋಂ,

ಅಸ್ಮಿನ್ ಸ್ಥಂಡಿಲೇ, ...ನಾಮಾನಮಗ್ನಿಂ ಪ್ರತಿಷ್ಠಾಪಯಾಮಿ ॥

ಅಗ್ನ್ಯಾನಯನ ಪಾತ್ರೇ ಅಕ್ಷತೋದಕಂ ನಿನೀಯ ॥

ಅಗ್ನಿಯನ್ನು ತಂದಂತಹ ಪಾತ್ರೆಗೆ, ಅಕ್ಷತೆ ಮತ್ತು ನೀರನ್ನು ಹಾಕುವುದು ॥

ಅಗ್ನಿಂ ಉಪಸಮಾಧಾಯ, ಅಗ್ನಿಂಪ್ರಜ್ವಾಲ್ಯ ॥

ಅಗ್ನಿಯನ್ನು ಚೆನ್ನಾಗಿ ಉರಿಸಿ, ಪ್ರಜ್ವಲಿಸುವಂತೆ ಮಾಡುವುದು ॥

ಅಗ್ನಿಂಪ್ರಾರ್ಥ್ಯ ॥

ಕೈಯಲ್ಲಿ ನೀರಿನ ಒಂದುಪಾತ್ರೆಯನ್ನು ಹಿಡಿದು, ಈ ಕೆಳಗಿನ ಮಂತ್ರಗಳನ್ನು ಹೇಳಿ, ಪೂರ್ವಾಭಿಮುಖವಾಗಿರುವ ಎಲೈ ಅಗ್ನಿದೇವನೇ, ಪಶ್ಚಿಮಾಭಿಮುಖವಾಗುವುದರ ಮೂಲಕ, ನನ್ನ ಅಭಿಮುಖವಾಗಿರು ಎಂದು ಪ್ರಾರ್ಥಿಸಿ, ಆ ಪಾತ್ರೆಯನ್ನು ಕುಂಡದ ಹೊರಗೆ ಪೂರ್ವಭಾಗದಲ್ಲಿ ಇಡಬೇಕು ॥

ಸಪ್ತಹಸ್ತ ಚತುಶ್ಶೃಂಗ ಸ್ಸಪ್ತಜಿಹ್ವೋ ದ್ವಿಶೀರ್ಷಕಃ । ತ್ರಿಪಾತ್ಪ್ರಸನ್ನವದನಃ ಸುಖಾಸೀನಂ ಶುಚಿಸ್ಮಿತಃ । ಸ್ವಾಹಾಂತು ದಕ್ಷಿಣೇಪಾರ್ಶ್ವೇದೇವೀಂ ವಾಮೇಸ್ವಧಾಂ ತಥಾ । ಬಿಭ್ರದ್ದಕ್ಷಿಣಹಸ್ತೈಸ್ತು ಶಕ್ತಿಮನ್ನಂ ಸ್ರುಚಂಸ್ರುವಂ । ತೋಮರಂ ವ್ಯಜನಂವಾಮೇ ಘೃತಪಾತ್ರಂ ಚ ಧಾರಯನ್ । ಮೇಷಾರೂಢಂ ಜಟಾಬದ್ಧಂ ಗೌರವರ್ಣಂ ಮಹೌಜಸಂ । ಧೂಮ್ರಧ್ವಜಂ ಲೋಹಿತಾಕ್ಷಂ ಸಪ್ತಾರ್ಚಿಸ್ಸರ್ವಕಾಮದಂ । ಆತ್ಮಾಭಿಮುಖಮಾಸೀನಂ ಏವಂ ಧ್ಯಾಯೇದ್ಧುತಾಶನಮ್ ॥

ಏಷ ಹಿ ದೇವಃ ಪ್ರದಿಶೋऽನು ಸರ್ವಾಃ ಪೂರ್ವೋ ಹಿ ಜಾತಸ್ಸ ಉ ಗರ್ಭೇ ಅಂತಃ । ಸ ವಿಜಾಯಮಾನಸ್ಸ ಜನಿಷ್ಯಮಾಣಃ ಪ್ರತ್ಯಙ್ಮುಖಾಸ್ತಿಷ್ಠತಿ ವಿಶ್ವತೋ ಮುಖಃ ॥

ಅಗ್ನಿಂ ಪ್ರಜ್ವಲಿತಂವಂದೇ ಜಾತವೇದಂ ಹುತಾಶನಮ್ । ಸುವರ್ಣವರ್ಣಮನಲಂ ಸಮಿದ್ಧಂ ವಿಶ್ವತೋಮುಖಮ್ ॥

ಭೋ ಅಗ್ನೇ, ಪ್ರಾಙ್ಮುಖೋದೇವ ಪ್ರತ್ಯಙ್ಮುಖಸ್ಸನ್ ಮಮ ಅಭಿಸಮ್ಮುಖೋ ಭವ, ಇತಿ ಅಗ್ನಿಂ ಪ್ರಾರ್ಥ್ಯ ॥

ಪರಿಸ್ತರಣ –

ಪ್ರಾಗಾದಿಪರಿಸ್ತೀರ್ಯ । ಉತ್ತರೇಣಾಗ್ನಿಂ ದರ್ಭಾನ್ ಸಂಸ್ತೀರ್ಯ ॥

ಅಗ್ನಿಯಸುತ್ತಲೂ, ಪೂರ್ವದಿಂದ, 16 – 16 ದರ್ಭೆಗಳನ್ನು ಪರಿಸ್ತರಣ ಹಾಕಬೇಕು । ಕುಂಡದ ದಕ್ಷಿಣ ಮತ್ತು ಉತ್ತರಭಾಗದ್ದು ಪೂರ್ವಾಗ್ರವಾಗಿಯೂ ಹಾಗೂ ಪೂರ್ವ ಮತ್ತು ಪಶ್ಚಿಮಭಾಗದ್ದು ಉತ್ತರಾಗ್ರವಾಗಿಯೂ ಇರುವಂತೆ ಹಾಕಬೇಕು । ಹಾಗೂ ಅಗ್ನಿಯ ದಕ್ಷಿಣ ಭಾಗದ ಪರಿಸ್ತರಣ ಮೇಲಿದ್ದು – ಅಗ್ನಿಯ ಉತ್ತರದ್ದು ಕೆಳಗೆ ಇರಬೇಕು । ಈ ರೀತಿಯಲ್ಲಿ ಪರಿಸ್ತರಣಗಳನ್ನು ಕುಂಡಕ್ಕೆ ಹಾಕಬೇಕು । ನಂತರ ಅಗ್ನಿಯ ಉತ್ತರದಲ್ಲಿ, ಪರಿಸ್ತರಣದ ಹೊರಗೆ ದರ್ಭೆಗಳನ್ನು ಹರಡಬೇಕು ॥

ಪಾತ್ರಾಸಾದನ –

ತೇಷು ದ್ವಂದ್ವಂನ್ಯಂಚಿ ಪಾತ್ರಾಣಿಪ್ರಯುನಕ್ತಿ ॥

ಆ ಹರಡಿರುವ ದರ್ಭೆಗಳಮೇಲೆ ಒಟ್ಟಿಗೆ ಎರಡೆರಡಾಗಿ ಕೆಳಮುಖವಾಗಿರುವಂತೆ, ಅಕ್ಕಪಕ್ಕದಲ್ಲಿ(ದಕ್ಷಿಣ–ಉತ್ತರ), ಪಶ್ಚಿಮದಿಂದ ಪೂರ್ವಕ್ಕೆ, ಸ್ರುವಾದಿಪಾತ್ರೆಗಳನ್ನು ಈ ಕೆಳಗೆ ಹೇಳಿರುವಂತೆ ಇಡಬೇಕು । ಇಧ್ಮಕ್ಕೆ (21 ಸಮಿತ್ತುಗಳ ಗುಂಪು)ಕಟ್ಟಿರುವ ದರ್ಭೆಯಗಂಟನ್ನು ಕೆಳಮುಖವಾಗಿ ಇಡಬೇಕು ॥

ಪ್ರಧಾನದರ್ವೀಂ, ಆಜ್ಯಪಾತ್ರಂ – ಪ್ರೋಕ್ಷಣೀಪಾತ್ರಂ, ಪ್ರಣೀತಾಪಾತ್ರಂ – ಇಧ್ಮಂ, ದ್ವಿತೀಯದರ್ವೀಂ ॥ ಷಟ್ಪಾತ್ರ ॥

ಪ್ರಧಾನಹೋಮ ಮಾಡುವ ಪಾತ್ರೆ(ದರ್ವಿ = ಸ್ರುಕ್), ಆಜ್ಯಪಾತ್ರೆ – ಪ್ರೋಕ್ಷಣೀಪಾತ್ರೆ, ಪ್ರಣೀತಾಪಾತ್ರೆ – ಇಧ್ಮ, ಉಪಹೋಮ ಮಾಡುವಪಾತ್ರೆ(ಸ್ರುವ) = ಷಟ್ಪಾತ್ರ ॥

((ಪ್ರಧಾನದರ್ವೀಂ, ಆಜ್ಯಪಾತ್ರಂ – ಪ್ರೋಕ್ಷಣೀಪಾತ್ರಂ, ದ್ವಿತೀಯದರ್ವೀಂ ॥ ಚತುಷ್ಪಾತ್ರ॥
ಪ್ರಧಾನಹೋಮ ಮಾಡುವ ಪಾತ್ರೆ(ದರ್ವಿ = ಸ್ರುಕ್), ಆಜ್ಯಪಾತ್ರೆ – ಪ್ರೋಕ್ಷಣೀಪಾತ್ರೆ, ಉಪಹೋಮ ಮಾಡುವ ಪಾತ್ರೆ = ಚತುಷ್ಪಾತ್ರ ॥))

ಪ್ರೋಕ್ಷಣೀಪಾತ್ರಸಂಸ್ಕಾರ –

ಪವಿತ್ರೇಕೃತ್ವಾ, ಪವಿತ್ರಾಂತರ್ಹಿತೇ ಪ್ರೋಕ್ಷಣೀಪಾತ್ರೇ ಅಪಆನೀಯ । ಉತ್ಪವನಂ ಕೃತ್ವಾ ॥

2 ದರ್ಭೆಗಳಿಂದ ಪವಿತ್ರವನ್ನು ಮಾಡಿಕೊಂಡು, ಆ ಪವಿತ್ರವನ್ನು ಬಲಕೈಹಸ್ತದಲ್ಲಿ ಇಟ್ಟುಕೊಂಡು, ಆ ಹಸ್ತದಿಂದ ನೀರನ್ನು ಒಮ್ಮೆ ಪ್ರೋಕ್ಷಣೀಪಾತ್ರೆಗೆ ಪ್ರೋಕ್ಷಿಸಿ । ಅದೇ ಕೈಯಿಂದ ಪ್ರೋಕ್ಷಣೀಪಾತ್ರೆಯನ್ನು ಮೇಲ್ಮುಖ ಮಾಡಿ ಇಟ್ಟು, ಪುನಃ ಒಮ್ಮೆ ನೀರನ್ನು ಆ ಪಾತ್ರೆಗೆ ಪ್ರೋಕ್ಷಿಸಿ, । ನಂತರ ಪ್ರೋಕ್ಷಣೀಪಾತ್ರೆಯನ್ನು ಅಗ್ನಿಗೆ ಪ್ರದಕ್ಷಿಣೆಯಾಗಿ ತೆಗೆದುಕೊಂಡು, ಪಶ್ಚಿಮದಲ್ಲಿ(ಆಚಾರ್ಯರಮುಂದೆ) ಇಟ್ಟುಕೊಂಡು, ಪವಿತ್ರವನ್ನು ಆ ಪಾತ್ರೆಯೊಳಗೆ ಉತ್ತರಾಗ್ರವಾಗಿ ಇಡಬೇಕು । ಆಮೇಲೆ ಪಾತ್ರೆಗೆ ನೀರನ್ನು ಹಾಕಿ, ಎರಡೂಹಸ್ತಗಳಿಂದ ಅಂಗುಷ್ಠ ಅನಾಮಿಕ ಬೆರಳುಗಳಿಂದ ಉತ್ತರಾಗ್ರವಾಗಿ ಆ ಪವಿತ್ರವನ್ನು ಹಿಡಿದುಕೊಂಡು, ಅದರಿಂದ ಪ್ರೋಕ್ಷಣೀಪಾತ್ರೆಯಲ್ಲಿರುವ ನೀರನ್ನು ಮೇಲಕ್ಕೆ 3 ಸಲ ಚಿಮ್ಮಿಸಬೇಕು ॥

ಅದ್ಭಿಃ ಸಕೃತ್‌ಪ್ರೋಕ್ಷ್ಯ, ಉತ್ತಾನಾನಿ ಪಾತ್ರಾಣಿ ಪರ್ಯಾವರ್ತ್ಯ । ಪುನಃ ತ್ರಿಃ ಪ್ರೋಕ್ಷ್ಯ । ತದ್ದಕ್ಷಿಣತೋ ನಿಧಾಯ ॥

ನಂತರ ಪವಿತ್ರವನ್ನು ಕೈಯಲ್ಲಿ ಹಿಡಿದುಕೊಂಡು, ಪ್ರೋಕ್ಷಣೀಪಾತ್ರೆಯ ನೀರನ್ನು, ಕೆಳಮುಖವಾಗಿರುವ ಇತರ ಎಲ್ಲಾ ಪಾತ್ರೆಗಳಿಗೆ ಒಮ್ಮೆ ಪ್ರೋಕ್ಷಿಸಬೇಕು । ನಂತರ ಆ ಪಾತ್ರೆಗಳನ್ನು ಪವಿತ್ರವನ್ನು ಕೈಯಲ್ಲಿ ಹಿಡಿದುಕೊಂಡೇ ಕ್ರಮವಾಗಿ ಜೋಡಿ ಜೋಡಿಯಾಗಿ ಮೇಲ್ಮುಖವಾಗಿರುವಂತೆ ತಿರುಗಿಸಿ ಇಡಬೇಕು, ಇಧ್ಮದ ಗಂಟನ್ನು ಬಿಡಿಸಬೇಕು ।

ಪುನಃ ಆ ಪಾತ್ರೆಗಳಿಗೆ ಪವಿತ್ರದೊಂದಿಗೆ ಪ್ರೋಕ್ಷಣೀನೀರನ್ನು 3 ಸಲ ಪ್ರೋಕ್ಷಿಸಬೇಕು । ಆಮೇಲೆ ಕೈಯಲ್ಲಿರುವ ಪವಿತ್ರದೊಂದಿಗೇ, ಪ್ರೋಕ್ಷಣೀಪಾತ್ರೆಯನ್ನು ಅಗ್ನಿಗೆ ಪ್ರದಕ್ಷಿಣೆಯಾಗಿ ತೆಗೆದುಕೊಂಡು ದಕ್ಷಿಣದಲ್ಲಿ ಇಡಬೇಕು ॥

ಪ್ರಣೀತಾ(ಪೂರ್ಣ)ಪಾತ್ರ ಸಂಸ್ಕಾರ –

ಪ್ರೋಕ್ಷಣೀವತ್ ಪ್ರಣೀತಾ: ಸಂಸ್ಕೃತ್ಯ । ಪೂರ್ವವತ್ ಉತ್ಪವನಂ ಕೃತ್ವಾ ॥

ಪವಿತ್ರದ ಜೊತೆಯಲ್ಲಿಯೇ ಪ್ರಣೀತಾಪಾತ್ರೆಯನ್ನು ತೆಗೆದುಕೊಂಡು, ಅಗ್ನಿಗೆ ಪ್ರದಕ್ಷಿಣೆಯಾಗಿ ತಂದು, ಪಶ್ಚಿಮದಲ್ಲಿ(ಆಚಾರ್ಯರಮುಂದೆ) ಇಟ್ಟುಕೊಂಡು, ಪವಿತ್ರವನ್ನು ಆ ಪಾತ್ರೆಯೊಳಗೆ ಉತ್ತರಾಗ್ರವಾಗಿ ಇಡಬೇಕು । ಆಮೇಲೆ ಪ್ರಣೀತಾಪಾತ್ರೆಗೆ ನೀರನ್ನು ಹಾಕಿ, ಎರಡೂಹಸ್ತಗಳಿಂದ ಅಂಗುಷ್ಠ ಅನಾಮಿಕ ಬೆರಳುಗಳಿಂದ ಉತ್ತರಾಗ್ರವಾಗಿ ಆ ಪವಿತ್ರವನ್ನು ಹಿಡಿದುಕೊಂಡು, ಅದರಿಂದ ಪ್ರಣೀತಾಪಾತ್ರೆಯಲ್ಲಿರುವ ನೀರನ್ನು ಮೇಲಕ್ಕೆ 3 ಸಲ ಚಿಮ್ಮಿಸಬೇಕು ॥

ಅಗ್ನೇರುತ್ತರತ: ದ್ವಾದಶ ದರ್ಭೇಷು ಸಾದಯಿತ್ವಾ । ನಾಸಿಕಾಸಮಮುದ್ಧೃತ್ಯ, ನಿಧಾಯ । ಅಷ್ಟಭಿ: ದರ್ಭೈ: ಪ್ರಚ್ಛಾದ್ಯ ॥

ನಂತರ ಅಗ್ನಿಯ ಉತ್ತರದಲ್ಲಿ, ಪರಿಸ್ತರಣಕ್ಕೂ ಪಾತ್ರಾಸಾದನಕ್ಕೂ ಮಧ್ಯೆ, 12 ದರ್ಭೆಗಳನ್ನು ಹಾಸಿ । ಆಮೇಲೆ ಪ್ರಣೀತಾಪಾತ್ರೆಯನ್ನು ಮುಖದವರೆಗೆ ಎತ್ತಿ, ಅದನ್ನು ಆ 12 ದರ್ಭೆಗಳ ಮೇಲೆ ಇಟ್ಟು । ಅದರೊಳಗಿರುವ ಪವಿತ್ರವನ್ನು ಆಜ್ಯಪಾತ್ರೆಯಲ್ಲಿ ಇಟ್ಟು, ನಂತರ ಆ ಪ್ರಣೀತಾಪಾತ್ರೆಯಮೇಲೆ 8 ದರ್ಭೆಗಳನ್ನು ಮುಚ್ಚಬೇಕು ॥

ಬ್ರಹ್ಮವರಣ –

ಅಸ್ಮಿನ್ ಕರ್ಮಣಿ ಬ್ರಹ್ಮಾಣಂ ತ್ವಾಮಹಂ ವೃಣೇ ॥

.....ಈ ನಿರ್ದಿಷ್ಟ ಕರ್ಮದಲ್ಲಿ ನಿಮ್ಮನ್ನು ಬ್ರಹ್ಮರನ್ನಾಗಿ ಆಹ್ವಾನಿಸುತ್ತಿದ್ದೇನೆ । ಎಂದು ಬ್ರಹ್ಮಸ್ಥಾನಕ್ಕೆ ಒಬ್ಬ ಋತ್ವಿಜರನ್ನು 2 ದರ್ಭೆಗಳನ್ನು(ಪವಿತ್ರಕ್ಕಾಗಿ) ಕೊಟ್ಟು ಆಹ್ವಾನಿಸಬೇಕು ॥

ವೃತೋಽಸ್ಮಿ ಕರಿಷ್ಯಾಮಿ ಇತಿಪ್ರತಿವಚನಂ ॥

'ಆಗಲಿ' ಎಂಬುದು ಆ ಋತ್ವಿಜರ ಪ್ರತಿಮಾತು ॥

ಬ್ರಹ್ಮಣೇನಮ: ಇದಮಾಸನಂ । ಬ್ರಹ್ಮಣೇ ಸಕಲಾರಾಧನೈ: ಸ್ವರ್ಚಿತಂ ॥

ಬ್ರಹ್ಮಣೇನಮ:, ಎಂದು ಆಸನಾರ್ಥವಾಗಿ 3 ದರ್ಭೆಗಳನ್ನು ಆಚಾರ್ಯರು ಅವರಿಗೆ ಕೊಡುವುದು । ಅವರು ಅದನ್ನು ಅಗ್ನಿಯ ದಕ್ಷಿಣಭಾಗದಲ್ಲಿರುವ ಆಸನದಮೇಲೆ ಪೂರ್ವಾಗ್ರವಾಗಿ ಹಾಕಿ, ಅದರಮೇಲೆ ಅವರು ಕೂರಬೇಕು । ಹಾಗೂ ಅವರಿಗೆ ಅಕ್ಷತೆ, ಹೂಗಳಿಂದ ಆಚಾರ್ಯರು ಪೂಜಿಸಬೇಕು ॥

ಆಜ್ಯ(ದ್ರವ್ಯ)ಸಂಸ್ಕಾರ –

ಆಜ್ಯಂ ವಿಲಾಪ್ಯ । ವಿಲೀನಮಪಿ ಅಸ್ಮಿನ್ ಅಗ್ನೌ ಆಜ್ಯಂ ವಿಲಾಪ್ಯ ॥

ಆಜ್ಯವನ್ನು ಕರಗಿಸಿ । ಮೊದಲೇ ಕರಗಿದ್ದರೂ ಸಹ ಈ ಅಗ್ನಿಯಲ್ಲಿ ಮತ್ತೊಮ್ಮೆ ಈಗ ಕಾಯಿಸಿ, ಕುಂಡದ ಹೊರಗೆ ಉತ್ತರಭಾಗದಲ್ಲಿ ಆಜ್ಯಪಾತ್ರೆಯನ್ನು ಇಡಬೇಕು ॥

ಉದೀಚೋಂಗಾರಾನ್ ನಿರೂಹ್ಯ, ತೇಷು ಅಧಿಶ್ರಿತ್ಯ ॥

ಆ ಆಜ್ಯಪಾತ್ರೆಯ ದಕ್ಷಿಣದ ಬುಡದಲ್ಲಿ, ಎರಡಕ್ಕಿಂತ ಹೆಚ್ಚಿನಸಂಖ್ಯೆಯ ಕೆಂಡಗಳನ್ನು ಇಡಬೇಕು ॥

ಅವದ್ಯೋತನ –

ಜ್ವಲತಾ ತೃಣೇನ ಅವದ್ಯುತ್ಯ । ದ್ವೇ ದರ್ಭಾಗ್ರೇ ಪ್ರಚ್ಛಿದ್ಯ, ಅಪಉಪಸ್ಪೃಶ್ಯ, ಪ್ರಕ್ಷಾಳ್ಯ, ಆಜ್ಯೇಪ್ರತ್ಯಸ್ಯ ॥

ಒಂದುದರ್ಭೆಗೆ ಅಗ್ನಿಯನ್ನು ಹತ್ತಿಸಿಕೊಂಡು, ಅದನ್ನು ತುಪ್ಪಕ್ಕೆ ತೋರಿಸಿ, ಉತ್ತರಕ್ಕೆ ಆ ದರ್ಭೆಯನ್ನು ಎಸೆದು । ನಂತರ 2 ದರ್ಭೆಗಳ ಅಗ್ರವನ್ನು, ಒಂದು ಬೆರಳಿನಷ್ಟು ಉದ್ದ ಕತ್ತರಿಸಿಕೊಂಡು, ಕೈ ತೊಳೆದು, ಆ ದರ್ಭಾಗ್ರಗಳನ್ನೂ ಸಹಾ ತೊಳೆದು, ಅದನ್ನು ಆಜ್ಯಪಾತ್ರೆಯಲ್ಲಿ ಉತ್ತರಾಗ್ರವಾಗಿ ಹಾಕಬೇಕು ॥

ಪರ್ಯಗ್ನಿಕರಣ –

ಚರುನಾ(ದ್ರವ್ಯೈಃ) ಸಹ ತ್ರಿಃಪರ್ಯಗ್ನಿಕರಣಂ ಕೃತ್ವಾ ॥

ಚರುವನ್ನು(ಪಕ್ವವಾದದ್ರವ್ಯ) ಒಮ್ಮೆ ಈ ಅಗ್ನಿಯಲ್ಲಿ ಕಾಯಿಸಿ, ಇತರ ಹೋಮದ್ರವ್ಯಗಳೊಂದಿಗೆ ಅಗ್ನಿಯ ಉತ್ತರದಲ್ಲಿ ಆಜ್ಯಪಾತ್ರೆಯ ಮುಂದೆ ಸಾಲಾಗಿ ಇಟ್ಟುಕೊಂಡು । ಒಂದು ದರ್ಭೆಯಲ್ಲಿ ಅಗ್ನಿಯನ್ನು ಹತ್ತಿಸಿಕೊಂಡು, ತುಪ್ಪ, ಚರು ಹಾಗೂ ಇತರ ಎಲ್ಲಾ ಹೋಮದ್ರವ್ಯಗಳಿಗೂ ಪ್ರದಕ್ಷಿಣೆಯಾಗಿ 3 ಸಲ ಅಗ್ನಿಯನ್ನು ತೋರಿಸಿ, ಆ ದರ್ಭೆಯನ್ನು ಉತ್ತರಕ್ಕೆ ಎಸೆಯಬೇಕು ॥

ವರ್ತ್ಮಕುರ್ವನ್ ಉದಗುದ್ವಾಸ್ಯ । ಅಂಗಾರಾನ್ ಪ್ರತ್ಯೂಹ್ಯ ॥

ಆಮೇಲೆ ಉತ್ತರಕ್ಕೆ ಆಜ್ಯಪಾತ್ರೆಯನ್ನು ಸ್ವಲ್ಪ ಸರಿಸಿ । ಕೆಂಡಗಳನ್ನು ಪುನ: ಕುಂಡದೊಳಗೆ ಹಾಕಬೇಕು ॥

ಅಪರೇಣಾಗ್ನಿಂ ಉದಗಗ್ರಾಭ್ಯಾಂ ಪವಿತ್ರಾಭ್ಯಾಂ ಪುನರಾಹಾರಂ ಆಜ್ಯಂ ತ್ರಿರುತ್ಪೂಯ ॥

ಆಚಾರ್ಯರ ಮುಂದೆ ತುಪ್ಪವನ್ನು ಇಟ್ಟುಕೊಳ್ಳುವ ಜಾಗದಲ್ಲಿ ಸ್ವಲ್ಪದರ್ಭೆಗಳನ್ನು ಉತ್ತರಾಗ್ರವಾಗಿ ಇಟ್ಟುಕೊಂಡು, ನಂತರ ಆ ಆಜ್ಯಪಾತ್ರೆಯನ್ನು ಅಗ್ನಿಗೆ ಪ್ರದಕ್ಷಿಣೆಯಾಗಿ ತೆಗೆದುಕೊಂಡುಬಂದು, ಆಚಾರ್ಯರ ಮುಂದೆ ಹಾಕಿರುವ ದರ್ಭೆಗಳ ಮೇಲೆ ಇಟ್ಟುಕೊಳ್ಳಬೇಕು । ಆಮೇಲೆ ತುಪ್ಪದಲ್ಲಿರುವ ಉದಗಗ್ರವಾಗಿರುವ ಪವಿತ್ರ ಹಾಗೂ ಎರಡುದರ್ಭಾಗ್ರಗಳನ್ನೂ, ಅಂಗುಷ್ಠ, ಅನಾಮಿಕ ಬೆರಳುಗಳಿಂದ ಉತ್ತರಾಗ್ರವಾಗಿಯೇ ಹಿಡಿದುಕೊಂಡು, ಆಜ್ಯವನ್ನು ಪೂರ್ವದಿಂದ ಪಶ್ಚಿಮಕ್ಕೆ ಪುನ: ಪೂರ್ವಕ್ಕೆ – ಹೀಗೆ ನಿರಂತರವಾಗಿ, ಅಡೆತಡೆಯಿಲ್ಲದೇ 3 ಸಲ ಅರೆಯಬೇಕು ॥

ಪವಿತ್ರಗ್ರಂಥಿಂ ವಿಸ್ರಸ್ಯ । ಅದ್ಭಿಸ್ಸಂಸ್ಪೃಶ್ಯ । ಪವಿತ್ರೇ ಪ್ರಾಗಗ್ರೇ ಅನುಪ್ರಹರತಿ ॥

ಪವಿತ್ರದ ಗಂಟನ್ನು ಬಿಚ್ಚಿ, ಅದನ್ನು ನೀರಿಗೆ ತಗುಲಿಸಿ । ಅದನ್ನು ಪೂರ್ವಾಗ್ರವಾಗಿ ಅಗ್ನಿಯಲ್ಲಿ ಮೊದಲು ತುದಿಯಭಾಗವು ಸುಡುವಂತೆ ಹೋಮಿಸಬೇಕು । ಆ ಎರಡು ದರ್ಭಾಗ್ರಗಳನ್ನೂ ನೀರಿಗೆ ತಗುಲಿಸಿ, ಅಗ್ನಿಯಲ್ಲಿ ಮೊದಲು ತುದಿಯಭಾಗವು ಸುಡುವಂತೆ ಹಾಕಬೇಕು ॥

ಸ್ರುಕ್, ಸ್ರುವ ಸಂಸ್ಕಾರ –

ಯೇನಜುಹೋತಿ ತದಗ್ನೌ ಪ್ರತಿತಪ್ಯ । ತ್ರಿಭಿ: ದರ್ಭೈ: ಸಂಮೃಜ್ಯ (ಅಗ್ರೇಣಅಗ್ರಂ, ಮಧ್ಯೇನಮಧ್ಯಂ, ಮೂಲೇನಮೂಲಂ) ।

ಸ್ರುಕ್, ಸ್ರುವಗಳನ್ನು ಅಗ್ನಿಯಲ್ಲಿ ಕಾಯಿಸಬೇಕು । ಇವೆರಡನ್ನೂ ಎಡಗೈಯಲ್ಲಿ ಇಟ್ಟುಕೊಂಡು, ಮೊದಲು ಸ್ರುವವನ್ನು 3 ದರ್ಭೆಗಳಿಂದ ವಿಧಿಯಂತೆ ತಿಕ್ಕಬೇಕು (ಸ್ವಚ್ಛಗೊಳಿಸಬೇಕು) ನಂತರ ಸ್ರುಕ್ಕನ್ನೂ ವಿಧಿಯಂತೆ ಸ್ವಚ್ಛಗೊಳಿಸಬೇಕು । ಸ್ವಚ್ಛಗೊಳಿಸುವ ವಿಧಾನ ಈ ರೀತಿಯಾಗಿದೆ – (ದರ್ಭೆಗಳ ತುದಿಯಿಂದ ಸ್ರುಕ್–ಸ್ರುವಗಳ ತುದಿಯನ್ನು, ದರ್ಭೆಗಳ ಮಧ್ಯದಿಂದ ಸ್ರುಕ್–ಸ್ರುವಗಳ ಮಧ್ಯಭಾಗವನ್ನು, ದರ್ಭೆಗಳ ಬುಡದಿಂದ ಸ್ರುಕ್–ಸ್ರುವಗಳ ಬುಡವನ್ನು, ದರ್ಭೆಗಳ ತುದಿಯಿಂದ ಸ್ರುಕ್–ಸ್ರುವಗಳ ಪಾರ್ಶ್ವಗಳನ್ನು ತಿಕ್ಕಬೇಕು) ॥

ಪುನ:ಪ್ರತಿತಪ್ಯ, ಪ್ರೋಕ್ಷ್ಯ, ನಿಧಾಯ । ದರ್ಭಾನ್ ಅದ್ಭಿ: ಸಂಸ್ಪೃಶ್ಯ । ಅಗ್ನೌ ಪ್ರಹರತಿ ॥

ಪುನ: ಅವುಗಳನ್ನು ಅಗ್ನಿಯಲ್ಲಿ ಕಾಯಿಸಿ, ಅವುಗಳಿಗೆ ದರ್ಭೆಗಳಿಂದ ನೀರನ್ನು ಪ್ರೋಕ್ಷಿಸಿ, ಅಗ್ನಿಯ ಪಶ್ಚಿಮದಲ್ಲಿ, ಆಜ್ಯಪಾತ್ರೆಯ ಉತ್ತರದಲ್ಲಿ ಸ್ರುವ–ಸ್ರುಕ್‌ಗಳನ್ನು ಇಡುವುದು । ಆ 3 ದರ್ಭೆಗಳನ್ನು ನೀರಿಗೆ ತಗುಲಿಸಿ, ಅಗ್ನಿಯಲ್ಲಿ ಹಾಕಬೇಕು ॥

ಪರಿಧಿಸಮಿತ್ತು –

ಸ್ಥವಿಷ್ಠಂ ಪಶ್ಚಾತ್ ॥

ಪಶ್ಚಿಮಪರಿಧಿಗಾಗಿ, ಪಾತ್ರಾಸಾದನೆಯ ಜಾಗದಲ್ಲಿರುವ ಇಧ್ಮಸಮಿತ್ತುಗಳ ಗುಂಪಿನಲ್ಲಿ, ಕುಂಡದ ದಕ್ಷಿಣ – ಉತ್ತರಗಳನ್ನು ಸೇರಿಸುವಷ್ಟು ಉದ್ದದ ಹಾಗೂ ಉಳಿದ ಕಡ್ಡಿಗಳಿಗಿಂತಾ ದಪ್ಪವೂ ಆಗಿರುವ ಒಂದು ಸಮಿತ್ತನ್ನು ತೆಗೆದುಕೊಂಡು, ಅದನ್ನು ಕುಂಡದ ಪಶ್ಚಿಮದಲ್ಲಿರುವ ಪರಿಸ್ತರಣದ ಒಳಗೆ, ಉತ್ತರಾಗ್ರವಾಗಿ ಇಡಬೇಕು ॥

ಅಣೀಯಾನ್ ದ್ರಾಘೀಯಾನ್ ದಕ್ಷಿಣಾರ್ಧ್ಯ: ॥

ದಕ್ಷಿಣಪರಿಧಿಗಾಗಿ, ಪಾತ್ರಾಸಾದನೆಯ ಜಾಗದಲ್ಲಿರುವ ಇಧ್ಮಸಮಿತ್ತುಗಳ ಗುಂಪಿನಲ್ಲಿ, ತೆಳ್ಳಗೆ ಹಾಗೂ ಉದ್ದಕ್ಕೆ ಇರುವ ಒಂದು ಸಮಿತ್ತನ್ನು ತೆಗೆದುಕೊಂಡು, ಅದನ್ನು

ಕುಂಡದ ಪಶ್ಚಿಮದಲ್ಲಿ ಇಟ್ಟಿರುವ ಸಮಿತ್ತಿಗೆ ಮುಟ್ಟಿಸಿ, ಅದನ್ನು ಕುಂಡದ ದಕ್ಷಿಣಭಾಗದಲ್ಲಿರುವ ಪರಿಸ್ತರಣದ ಒಳಗೆ, ಪಶ್ಚಿಮಪರಿಧಿ ಬುಡದಮೇಲೆ ಕೂರುವಂತೆ ಪೂರ್ವಾಗ್ರವಾಗಿ ಇಡಬೇಕು ॥

ಅನಿಷ್ಠೋ ಹ್ರಸಿಷ್ಮ ಉತ್ತರಾರ್ಧ್ಯಃ ॥

ಉತ್ತರದಪರಿಧಿಗಾಗಿ, ಪಾತ್ರಾಸಾದನೆಯ ಜಾಗದಲ್ಲಿರುವ ಇಧ್ಮಸಮಿತ್ತುಗಳ ಗುಂಪಿನಲ್ಲಿ, ತೆಳ್ಳಗೆ ಹಾಗೂ ಗಿಡ್ಡವಾಗಿರುವ ಒಂದು ಸಮಿತ್ತನ್ನು ತೆಗೆದುಕೊಂಡು, ಅದನ್ನು ಕುಂಡದ ಪಶ್ಚಿಮದಲ್ಲಿ ಇಟ್ಟಿರುವ ಸಮಿತ್ತಿಗೆ ಮುಟ್ಟಿಸಿ, ಅದನ್ನು ಕುಂಡದ ಉತ್ತರಭಾಗದಲ್ಲಿರುವ ಪರಿಸ್ತರಣದ ಒಳಗೆ, ಪಶ್ಚಿಮಪರಿಧಿಯ ತುದಿಯ ಕೆಳಗೆ ಇರುವಂತೆ ಪೂರ್ವಾಗ್ರವಾಗಿ ಇಡಬೇಕು ॥

ಆಘಾರಸಮಿತ್ತು –

ಮಧ್ಯಮಂ ಪರಿಧಿಮುಪಸ್ಪೃಶ್ಯ । ದಕ್ಷಿಣಾ ಪ್ರಾಚ್ಯಾಮೇಕಾಂ । ಪ್ರಾಗುದೀಚ್ಯಾಮೇಕಾಂ ॥

ಪಾತ್ರಾಸಾದನೆಯ ಜಾಗದಲ್ಲಿರುವ ಇಧ್ಮಸಮಿತ್ತುಗಳ ಗುಂಪಿನಲ್ಲಿರುವ, 2 ಸಮಿತ್ತುಗಳನ್ನು ತೆಗೆದುಕೊಂಡು, ಕುಂಡದ ಪಶ್ಚಿಮದಲ್ಲಿ ಇಟ್ಟಿರುವ ಮಧ್ಯಮಪರಿಧಿಸಮಿತ್ತಿಗೆ ಮುಟ್ಟಿಸಿ । ಒಂದುಸಮಿತ್ತನ್ನು ಕುಂಡದ ಆಗ್ನೇಯದಲ್ಲಿ, ಪರಿಸ್ತರಣದ ಒಳಗೆ ಊರ್ಧ್ವಾಗ್ರವಾಗಿ ನಿಲ್ಲಿಸಬೇಕು । ಹಾಗೂ ಇನ್ನೊಂದುಸಮಿತ್ತನ್ನು ಕುಂಡದ ಈಶಾನ್ಯದಲ್ಲಿ, ಪರಿಸ್ತರಣದ ಒಳಗೆ ಊರ್ಧ್ವಾಗ್ರವಾಗಿ ನಿಲ್ಲಿಸಬೇಕು ॥

ಪರಿಷೇಚನ –

ಅದಿತೇऽನುಮನ್ಯಸ್ವ । ಅನುಮತೇ ऽನುಮನ್ಯಸ್ವ । ಸರಸ್ವತೇ ऽನುಮನ್ಯಸ್ವ । ದೇವಸವಿತಃಪ್ರಸುವ ॥

ಮೇಲಿನ ವಾಕ್ಯಗಳನ್ನು ಹೇಳುತ್ತಾ, ಅಗ್ನಿಯನ್ನು ನೀರಿನಿಂದ ಸುತ್ತುಗಟ್ಟುವುದು । ಮೊದಲವಾಕ್ಯದಿಂದ ಅಗ್ನಿಯುದಕ್ಷಿಣದಲ್ಲಿ, ಪಶ್ಚಿಮದಿಂದ ಪೂರ್ವಕ್ಕೆ ।

2 ನೇ ವಾಕ್ಯದಿಂದ ಅಗ್ನಿಯಪಶ್ಚಿಮದಲ್ಲಿ, ದಕ್ಷಿಣದಿಂದ ಉತ್ತರಕ್ಕೆ । 3 ನೇ ವಾಕ್ಯದಿಂದ ಅಗ್ನಿಯಉತ್ತರದಲ್ಲಿ, ಪಶ್ಚಿಮದಿಂದ ಪೂರ್ವಕ್ಕೆ । 4 ನೇ ವಾಕ್ಯದಿಂದ ಅಗ್ನಿಯ ಈಶಾನ್ಯದಿಂದ, ಪ್ರದಕ್ಷಿಣೆಯಾಗಿ ಈಶಾನ್ಯಕ್ಕೇ ಹಾಕಬೇಕು, ಈ ಎಲ್ಲವನ್ನೂ ಪರಿಸ್ತರಣದ ಒಳಗೆ ಬರುವಂತೆ ನೀರನ್ನು ಹಾಕಬೇಕು ॥

ಇಧ್ಮಾಧಾನ –

ದ್ವಿತೀಯೇನ ಇಧ್ಮಂ ಅಭಿಘಾರ್ಯ । ಆಸನಾತ್ ಕಿಂಚಿದುತ್ಥಾಯ ॥

ಪಾತ್ರಾಸಾದನ ಜಾಗದಲ್ಲಿರುವ 15 ಸಮಿತ್ತುಗಳನ್ನು ತೆಗೆದುಕೊಂಡು, ಉಳಿದಿರುವ ಒಂದು ಸಮಿತ್ತು ಹಾಗೂ ಇಧ್ಮವನ್ನು ಕಟ್ಟಿದ ದರ್ಭೆಗಳನ್ನು ಅಲ್ಲೇ ಇಡಬೇಕು । ಆಮೇಲೆ ಆ 15 ಸಮಿತ್ತುಗಳ(ಇಧ್ಮ)ನ್ನು ಎಡಕೈಯಲ್ಲಿ ಇಟ್ಟುಕೊಂಡು, ಅವುಗಳಮೇಲೆ ಬಲಕೈಯಲ್ಲಿ ಸ್ರುವದಿಂದ ಆಜ್ಯವನ್ನು ಒಮ್ಮೆ ಹಾಕಬೇಕು । ನಂತರ ಆಸನದಿಂದ ಮೇಲಕ್ಕೆದ್ದು, ಬಗ್ಗಿದ ರೀತಿಯಲ್ಲಿ ನಿಂತು, ಇಧ್ಮವನ್ನು ಎರಡು ಕೈಗಳಿಂದಲೂ ಹಿಡಿದುಕೊಂಡು, ಕೆಳಗಿನ ವಾಕ್ಯದಿಂದ ಬ್ರಹ್ಮರನ್ನು ಪ್ರಾರ್ಥಿಸಬೇಕು ॥

ಅಸ್ಮಿನ್ ಪ್ರಕೃತೇಕರ್ಮಣಿ, "ಬ್ರಹ್ಮನ್, ಇಧ್ಮಂ ಆಧಾಸ್ಯೇ" ॥

ಸಂಕಲ್ಪವಾದ....., ಪ್ರಸ್ತುತ ಈಕರ್ಮದಲ್ಲಿ, "ಎಲೈ ಬ್ರಹ್ಮನೇ, ಇಧ್ಮವನ್ನು ಅಗ್ನಿಗೆ ಹಾಕುತ್ತೇನೆ" ಎಂದು ಬ್ರಹ್ಮರನ್ನು ಪ್ರಾರ್ಥಿಸಬೇಕು ॥

"ಓಂ ಆಧತ್ಸ್ವ" ॥

ಬ್ರಹ್ಮರು, 'ಓಂ ಆಧತ್ಸ್ವ' (ಹಾಕು) ಎಂಬ ವಾಕ್ಯವನ್ನು ಹೇಳಬೇಕು । ಬ್ರಹ್ಮರು ಪ್ರತಿವಚನವನ್ನು ಹೇಳಿದಮೇಲೆ, ಆಚಾರ್ಯರು ಪುನಃ ಕುಳಿತು, ಎರಡು ಕೈಗಳಿಂದಲೂ ಇಧ್ಮವನ್ನು ಅಗ್ನಿಗೆ ಹಾಕಬೇಕು ॥

ಇಧ್ಮಾಧಾನ ಮುಹೂರ್ತ: ಸುಮುಹೂರ್ತೋಸ್ತು ಇತಿ ಅನುಗೃಹ್ಣಂತು ॥

ಅಗ್ನಿಗೆ ಇಧ್ಮವನ್ನು ಹಾಕಿರುವ ಮುಹೂರ್ತವು ಸುಮುಹೂರ್ತವಾಗಿರಲೆಂದು, ಆಚಾರ್ಯರು ಬ್ರಹ್ಮರನ್ನು ಪ್ರಾರ್ಥಿಸುವುದು ॥

ಸುಮುಹೂರ್ತೋಽಸ್ತು ॥

ಸುಮುಹೂರ್ತವಾಗಿದೆ ಎಂದು ಬ್ರಹ್ಮರು ಹೇಳಬೇಕು ॥

ಆಘಾರಹೋಮ: –

ಆಘಾರಹೋಮೇ ಚ ಸಕೃದ್ಗೃಹೀತ್ವಾ । ಸ್ರುವಾಹುತಿಃ ಸ್ಯಾದ್ಧ್ರುಜುಸಂತತಂ ಚ । ಸ್ವಾಹಾದಿವರ್ಜ್ಯಂ ಜುಹುಯಾಚ್ಚ ತೂಷ್ಣೀಂ । ಆಘಾರಯೋರ್ನಿರ್ಣಯ ಏವಮೇವ ॥

ಉತ್ತರ ಪರಿಧಿಸಂಧಿಂ ಅನ್ವವಹೃತ್ಯ ದಕ್ಷಿಣಾಪ್ರಾಂಚಂ ಸರ್ವಾಣಿ ಇಧ್ಮಕಾಷ್ಠಾನಿ ಸಂಸ್ಪರ್ಶಯತಿ – ಪ್ರಜಾಪತಯ ಇದಂ ನಮಮ ॥

ಮೊದಲ ಆಘಾರಹೋಮದಲ್ಲಿ, ಸ್ರುವದಿಂದ ಒಮ್ಮೆ ತುಪ್ಪವನ್ನು ತೆಗೆದುಕೊಂಡು, ವಾಯವ್ಯ ಪರಿಧಿಸಂಧಿಯಿಂದ ಆರಂಭಿಸಿ, ಆಗ್ನೇಯದವರೆಗೆ ನೇರವಾಗಿಯೂ, ಅಚ್ಛಿದ್ರವಾಗಿಯೂ, ಅಗ್ನಿಯಲ್ಲಿಯೇ ಬೀಳುವಂತೆ ಹಾಗೂ ಕುಂಡದಲ್ಲಿ ಹಾಕಿರುವ ಎಲ್ಲಾ ಇಧ್ಮಕಡ್ಡಿಗಳ ಮೇಲೂ ಆಜ್ಯವು ಬೀಳುವಂತೆ, ಮಂತ್ರವನ್ನಾಗಲೀ, ಸ್ವಾಹಾಕಾರವನ್ನಾಗಲೀ ಹೇಳದೇ, ಹೋಮಿಸಬೇಕು । ನಂತರ "ಪ್ರಜಾಪತಯ ಇದಂನಮಮ" ಎಂದು ಹೇಳಬೇಕು ॥

ದ್ವಿತೀಯಮೈಂದ್ರಂ ನಿರ್ಋತೇ ಚ ಕೋಣೇ । ಪ್ರಧಾನದರ್ವ್ಯಾ ಚ ಸಕೃದ್ಗೃಹೀತ್ವಾ । ಆಶಾಂ ಗಿರೀಶಸ್ಯ ಹುವೇ ಚ ತದ್ವತ್ । ಆಘಾರಯೋರ್ನಿರ್ಣಯ ಏವಮೇವ ॥
ದಕ್ಷಿಣ ಪರಿಧಿಸಂಧಿಂ ಅನ್ವವಹೃತ್ಯ ಉತ್ತರಾಪ್ರಾಂಚಂ ಋಜುಗ್ಂ ಸಂತತಂ ಸರ್ವಾಣಿ ಇಧ್ಮಕಾಷ್ಠಾನಿ ಸಂಸ್ಪರ್ಶಯತಿ ಯಥಾ – "ಇಂದ್ರಾಯ" ಇಂದ್ರಾಯ ಇದಂನಮಮ ॥

ಎರಡನೆ ಆಘಾರಹೋಮದಲ್ಲಿ, ಸ್ರುವದಿಂದ ಸ್ರುಕ್ಕಿಗೆ ಒಮ್ಮೆ ತುಪ್ಪವನ್ನು ಹಾಕಿಕೊಂಡು, ನೈಋತ್ಯ ಪರಿಧಿಸಂಧಿಯಿಂದ ಆರಂಭಿಸಿ, ಈಶಾನ್ಯದವರೆಗೆ ನೇರವಾಗಿಯೂ,

ಅಚ್ಛಿದ್ರವಾಗಿಯೂ, ಅಗ್ನಿಯಲ್ಲಿಯೇ ಬೀಳುವಂತೆ ಹಾಗೂ ಕುಂಡದಲ್ಲಿ ಹಾಕಿರುವ ಎಲ್ಲಾ ಇಧ್ಮಕಡ್ಡಿಗಳ ಮೇಲೂ ಆಜ್ಯವು ಬೀಳುವಂತೆ, ಸ್ವಾಹಾಕಾರವನ್ನು ಹೇಳದೇ, ಕೇವಲ "ಇಂದ್ರಾಯ" ಎಂದು ಹೇಳಿ ಹೋಮಿಸಬೇಕು । ನಂತರ "ಇಂದ್ರಾಯ ಇದಂನಮಮ" ಎಂದು ಹೇಳಬೇಕು ॥

ಚಕ್ಷುಷೀಹೋಮ(ಆಜ್ಯಭಾಗ) –

ಇಧ್ಮತಂತ್ರೇ ವಿನಾ ಯತ್ರ ನಾಘಾರೌ ನಾಸ್ತಿ ಚಕ್ಷುಷೀ । ಇಧ್ಮತಂತ್ರೇಷು ಸರ್ವತ್ರ ಆಘಾರೌ ಚಕ್ಷುಷೀಮತೌ ॥

ಯಾವಯಾವ ಹೋಮಗಳಲ್ಲಿ ಇಧ್ಮವು ಇರುವುದಿಲ್ಲವೋ, ಅಲ್ಲೆಲ್ಲಾ ಆಘಾರ ಮತ್ತು ಚಕ್ಷುಷೀ ಹೋಮಗಳು ಇರುವುದಿಲ್ಲ । ಇಧ್ಮವು ಇರುವ ಹೋಮಗಳಲ್ಲಿ ಆಘಾರ ಹಾಗೂ ಚಕ್ಷುಷೀ ಹೋಮಗಳೂ ಇರುತ್ತವೆ ॥

ಆಗ್ನೇಯ ಸೌಮ್ಯಶ್ಚ ಆಜ್ಯಹವಿಷೌ ಆಜ್ಯಭಾಗೌ ಚತುರ್ಗೃಹೀತಾಭ್ಯಾಮ್ ॥

ಆಜ್ಯಭಾಗ ಹೋಮಗಳಾದ, ಅಗ್ನಿ ಹಾಗೂ ಸೋಮ ದೇವತೆಗಳಿಗೆ ಕೊಡುವ ಆಹುತಿಯು ತುಪ್ಪವಾಗಿದ್ದು ಮತ್ತೂ ಎರಡುದೇವತೆಗಳಿಗೂ ನಾಲ್ಕುನಾಲ್ಕು ಸಂಖ್ಯೆಯಲ್ಲಿ ತುಪ್ಪವನ್ನು ತೆಗೆದುಕೊಂಡು ಹೋಮಿಸತಕ್ಕದ್ದಾಗಿದೆ ॥

ಉತ್ತರಾರ್ಧಪೂರ್ವಾರ್ಧೇ ॥

ಸ್ರುವದಿಂದ ಸ್ರುಕ್ಕಿಗೆ ನಾಲ್ಕುಸಲ ತುಪ್ಪವನ್ನು ಹಾಕಿಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ಅಗ್ನಿಯ ಈಶಾನ್ಯಭಾಗದಲ್ಲಿ ತುಪ್ಪವನ್ನು ಹೋಮಿಸಬೇಕು ॥

ಅಗ್ನಯೇಸ್ವಾಹಾ, ಅಗ್ನಯ ಇದಂನಮಮ ॥

ದಕ್ಷಿಣಾರ್ಧಪೂರ್ವಾರ್ಧೇ ॥

ಸ್ರುವದಿಂದ ಸ್ರುಕ್ಕಿಗೆ ನಾಲ್ಕುಸಲ ತುಪ್ಪವನ್ನು ಹಾಕಿಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ಅಗ್ನಿಯ ಆಗ್ನೇಯಭಾಗದಲ್ಲಿ ತುಪ್ಪವನ್ನು ಹೋಮಿಸಬೇಕು ॥

ಸೋಮಾಯ ಸ್ವಾಹಾ, ಸೋಮಾಯ ಇದಂನಮಮ ॥

ಪ್ರಾಯಶ್ಚಿತ್ತಹೋಮ –

ಸಂಕಲ್ಪಪ್ರಭೃತಿ ಏತತ್‌ಕ್ಷಣಪರ್ಯಂತಂ ಸಂಭಾವಿತ ಸಮಸ್ತದೋಷ ಪರಿಹಾರಾರ್ಥಂ, ಸರ್ವ ಪ್ರಾಯಶ್ಚಿತ್ತಾಹುತಿಂ ಹೋಷ್ಯಾಮಿ,

ಈ ಕರ್ಮದ ಸಂಕಲ್ಪದಿಂದ ಮೊದಲುಗೊಂಡು ಇಲ್ಲಿಯವರೆಗೆ ಉಂಟಾಗಿರಬಹುದಾದ ಸಮಸ್ತದೋಷಗಳ ಪರಿಹಾರಕ್ಕಾಗಿ, ಸರ್ವಪ್ರಾಯಶ್ಚಿತ್ತವಾದ ಈ ಆಹುತಿಯನ್ನು ಹೋಮಿಸುತ್ತೇನೆ ಎಂದು ಹೇಳಿ, ಸ್ರುವದಿಂದ ಆಜ್ಯವನ್ನು ತೆಗೆದುಕೊಂಡು, ಕೆಳಗಿನ ಮಂತ್ರವನ್ನು ಹೇಳಿ ಹೋಮಿಸುವುದು ॥

ಓಂ ಭೂರ್ಭುವಸ್ಸುವ ಸ್ವಾಹಾ – ಪ್ರಜಾಪತಯ ಇದಂನಮಮ ॥

ಮುಖಹೋಮ(ಮುಖಾಂತ) –

ಕರ್ಮಸ್ವೌಷಧಿಮತ್ಸು ಚ ವ್ರತೇಷು ಹಿ ಚತುರ್ಷ್ವಪಿ । ಮುಖಾಹುತಿರವಶ್ಯಂ ಹಿ ಸರ್ವಾಚಾರ್ಯೈಃ ಸುನಿಶ್ಚಿತಾ । ಮುಖಾಹುತಿರ್ಹಿ ಯತ್ರಸ್ಯಾತ್ ಸ್ರುಚಾ ತತ್ರೈವ ಹಾವಯೇತ್ । ಸಕೃದ್ಗೃಹೀತ್ವಾ ತತ್ರಾಪಿ ಸ್ರುವೇಣೇತಿ ವಿನಿರ್ಣಯಃ ॥

ಓಷಧಿದ್ರವ್ಯಗಳ ಆಹುತಿಯಿರುವ ಹೋಮಗಳಲ್ಲಿ ಮಾತ್ರ ಈ ಮುಖಾಹುತಿಯನ್ನು ಅವಶ್ಯವಾಗಿ ಮಾಡಲೇಬೇಕು (ಆದರೆ, ವ್ರತಚತುಷ್ಟಯದಲ್ಲಿ ಮಾತ್ರ, ಆಜ್ಯಹೋಮವೇ ಆದರೂಸಹಾ, ಈ ಹೋಮವನ್ನು ಮಾಡಬೇಕು ಎಂಬುದು ವಿಶೇಷ ವ್ಯವಸ್ಥೆಯಷ್ಟೆ) । ಮುಖಾಹುತಿಯನ್ನು ಸ್ರುವದಿಂದ ಸ್ರುಕ್ಕಿಗೆ ಒಮ್ಮೆ ತುಪ್ಪವನ್ನು ಹಾಕಿಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ಸ್ರುಕ್‌ನಿಂದಲೇ ಅಗ್ನಿಯ ಮಧ್ಯಕ್ಕೆ ಹೋಮಿಸಬೇಕು ॥

ಅಗ್ನಯೇಸ್ವಾಹಾ, ಅಗ್ನಯ ಇದಂನಮಮ ॥

ಪೂಜಾರಾಧನೆ –

ಯಾವ ದೇವತೆಗಳ ಹೋಮವನ್ನು ಮಾಡುತ್ತೇವೆಯೋ ಆ ದೇವತೆಗಳನ್ನು ಅಗ್ನಿದೇವನಲ್ಲಿ ಆವಾಹಿಸಿ, ಕೆಳಗೆ ತಿಳಿಸಿರುವ ಕ್ರಮದಲ್ಲಿ ಉಪಚಾರಪೂಜೆಗಳನ್ನು

ಧೂಪ ದೀಪಾಂತದವರೆಗೆ ಮಾಡಿ, ನಂತರ ನೈವೇದ್ಯಸ್ಥಾನದಲ್ಲಿ ಪ್ರಧಾನಹೋಮಗಳನ್ನು ಆರಂಭಿಸಬೇಕು ॥ ಹೀಗೆ ಉಪಚಾರಪೂಜೆಗಳನ್ನು ಮಾಡುವಾಗ, ಹೂವು, ಅಕ್ಷತೆ ಮುಂತಾದವುಗಳನ್ನು ಪರಿಸ್ತರಣದ ಹೊರಗೆ ಹಾಕಬೇಕು(ಅರ್ಪಿಸಬೇಕು) ॥

ಅಸ್ಮಿನ್ ಸ್ಥಂಡಿಲೇ ಯಜ್ಞೇಶ್ವರಸ್ವರೂಪೀ ಮಹಾಗಣಪತಿಂ / ನವಗ್ರಹಂ / ಮೃತ್ಯುಂಜಯಂ / ಮಹಾವಿಷ್ಣುಂ, ಆವಾಹಯಾಮಿ / ಆಸನಂಸಮರ್ಪಯಾಮಿ / ಪಾದ್ಯಂಸಮರ್ಪಯಾಮಿ / ಅರ್ಘ್ಯಂಸಮರ್ಪಯಾಮಿ / ಆಚಮನೀಯಂ ಸಮರ್ಪಯಾಮಿ / ಸ್ನಾನಂಸಮರ್ಪಯಾಮಿ, ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ / ವಸ್ತ್ರಂಸಮರ್ಪಯಾಮಿ / ಉಪವಸ್ತ್ರಂಸಮರ್ಪಯಾಮಿ, ವಸ್ತ್ರೋಪವಸ್ತ್ರಾನಂತರಂ ಆಚಮನೀಯಂ ಸಮರ್ಪಯಾಮಿ / ಗಂಧಂಸಮರ್ಪಯಾಮಿ / ಅಕ್ಷತಾನ್ ಸಮರ್ಪಯಾಮಿ / ಮಂಗಳದ್ರವ್ಯಾಣಿಸಮರ್ಪಯಾಮಿ / ಪುಷ್ಪಾಣಿಸಮರ್ಪಯಾಮಿ /

ನಾಮಪೂಜಾಂ ಕರಿಷ್ಯೇ –

ಕೆಳಗಿರುವಂತೆ ಅಗ್ನಿದೇವನ ನಾಮಗಳನ್ನು ಹೇಳುತ್ತಾ, ಹೂ ಅಕ್ಷತೆಗಳನ್ನು ಪರಿಸ್ತರಣದಹೊರಗೆ ಪೂರ್ವದಿಂದ ಎಂಟು ದಿಕ್ಕುಗಳಿಗೆ ಪೂಜಿಸಬೇಕು ॥ ಹಾಗೆಯೇ ಆವಾಹಿಸಿರುವ ಉಳಿದ ದೇವತೆಗಳ ನಾಮಪೂಜೆಯನ್ನೂ ಸಂಕ್ಷೇಪವಾಗಿ, ಪರಿಸ್ತರಣದ ಹೊರಗೆ, ಮಾಡಬೇಕು ॥

ಅಗ್ನಯೇ ನಮಃ । ಜಾತವೇದಸೇ ನಮಃ । ಸಹೋಜಸೇ ನಮಃ । ಅಜಿರಾಪ್ರಭವೇ ನಮಃ । ವೈಶ್ವಾನರಾಯ ನಮಃ । ನರ್ಯಾಪಸೇ ನಮಃ । ಪಂಕ್ತಿರಾಧಸೇ ನಮಃ । ಎಸರ್ಪಿಣೇ ನಮಃ । ಮಧ್ಯೇ ಶ್ರೀ ಯಜ್ಞಪುರುಷಾಯ ನಮಃ ॥

ನಾಮಪೂಜಾಂಸಮರ್ಪಯಾಮಿ / ಧೂಪಂಆಘ್ರಾಪಯಾಮಿ / ದೀಪಂದರ್ಶಯಾಮಿ, ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ ॥

ಪಕ್ವಾಹುತಿ –

ವಿಮರ್ಶೆ :

ಆಪಸ್ತಂಬರ ಅಭಿಪ್ರಾಯದಲ್ಲಿ ಪಕ್ವಾಹುತಿಯ ಉಲ್ಲೇಖವಿಲ್ಲ। ಮುಖಾಹುತಿಯ ನಂತರ ಸಂಕಲ್ಪಿತ ದೇವತೆಗಳ ಹೋಮಗಳನ್ನು ಆರಂಭಿಸಬೇಕಷ್ಟೇ । ಆದರೆ ಬೋಧಾಯನರು ಹೇಳಿದ್ದಾರೆನ್ನಲಾಗುವ "ಸಾವಿತ್ರ್ಯಾ ಪಕ್ವಾಹುತಿಂ ಜುಹುಯಾತ್" ಎಂಬ ವಾಕ್ಯವನ್ನೇ ಅನುಸರಿಸಿ, ಕೆಲ ಆಪಸ್ತಂಬಸೂತ್ರಾನುಸಾರಿಗಳೂ ಈ ಪಕ್ವಾಹುತಿಯನ್ನು ಆಚರಿಸುತ್ತಿರುವುದನ್ನು ಕಾಣಬಹುದಷ್ಟೇ । ಅಷ್ಟೇಅಲ್ಲದೇ ಕೇವಲ ಸಾವಿತ್ರಿಯಿಂದ ಪಕ್ವಾಹುತಿಯನ್ನು ಕೊಡುವುದಲ್ಲದೇ, ಪ್ರತೀದೇವತೆಯು ಹೋಮಕ್ಕೂ(ಗಣಪತಿ, ನವಗ್ರಹ, ವಾಸ್ತು,,,) ಪಕ್ವಾಹುತಿಯನ್ನು ಕೊಡುವುದನ್ನೂ ಕೆಲವರು ಅಭ್ಯಾಸಿಸಿದ್ದಾರೆ। ಇಷ್ಟೇಅಲ್ಲದೇ, ಚರುವನ್ನು ಚತುರವದಾನರೀತ್ಯಾ ಪಕ್ವಹೋಮ ಮಾಡಿದ ನಂತರ ಕೇವಲಆಜ್ಯದಿಂದಲೂ ಚತುರವದಾನ ರೀತ್ಯ ಪಕ್ವಹೋಮವನ್ನು ಮಾಡುತ್ತಾರೆ । ಆದರೆ ಈ ರೀತಿಯ ಆಚರಣೆಗಳಿಗೆ ಈರೀತಿ ಮಾಡುತ್ತಿರುವವರೇ ಶಾಸ್ತ್ರೀಯ ಆಧಾರಗಳನ್ನು ತೋರಿಸಬೇಕಷ್ಟೇ!!!!! । ಏಕೆಂದರೆ ಆಪಸ್ತಂಬ ಗೃಹ್ಯಸೂತ್ರದ ಸ್ಮಾರ್ತಅಗ್ನಿಮುಖ ಪ್ರಕರಣದಲ್ಲಿ ಹಾಗೂ ಕಪರ್ದಿಕಾರಿಕಾವಳಿಯಲ್ಲಾಗಲೀ ಈ ರೀತಿಯ ಯಾವ ಸೂಚನೆಗಳೂ ಕಂಡುಬರುವುದಿಲ್ಲ ॥

ನೈವೇದ್ಯಸ್ಥಾನೇ ಪಕ್ವಾಹುತಿ:, ಪ್ರಧಾನಾಹುತೀಶ್ಚ ಹುತ್ವಾ ॥

ನೈವೇದ್ಯಸ್ಥಾನದಲ್ಲಿ ಪಕ್ವಾಹುತಿ ಮತ್ತು ಪ್ರಧಾನ ಆಹುತಿಗಳನ್ನು ಹೋಮಿಸುವುದು ॥

ಚತುರವದಾನರೀತ್ಯಾ ಸಾವಿತ್ರ್ಯಾಪಕ್ವಾಹುತಿಂ ಹುತ್ವಾ । ದರ್ವ್ಯಾಮುಪಸ್ತೀರ್ಯ । ಚರುಮಧ್ಯಾದ್ವಿರವದಾಯ (ಪಂಚಾವತ್ತಿನ: ತ್ರಿರವದಾಯ) । ಹವಿರಭಿಘಾರ್ಯ । ಕ್ಷತಂ ಅಭಿಘಾರ್ಯ ।

ಗಾಯತ್ರೀಮಂತ್ರದಿಂದ ಚರುವನ್ನು ಚತುರವದಾನ ಕ್ರಮದಿಂದ ಪಕ್ವಾಹುತಿಯಾಗಿ ಹೋಮಿಸಬೇಕು । ಸ್ರುವದಿಂದ ಸ್ರುಕ್‌ಗೆ 1 ಸಲ ತುಪ್ಪಹಾಕಿಕೊಂಡು । ಚರುವಿನ

ಮಧ್ಯದಿಂದ 2 ಸಲ ಚರುವನ್ನು ತೆಗೆದು ಸ್ರುಕ್‌ಗೆ ಹಾಕಿಕೊಂಡು (ಯಾಜಮಾನನು ಪಂಚಾರ್ಷೇಯನಾಗಿದ್ದಲ್ಲಿ 3 ಸಲ) । ಸ್ರುಕ್‌ನಲ್ಲಿರುವ ಆ ಹವಿಸ್ಸಿನ ಮೇಲೆ ಪುನ: 1 ಸಲ ತುಪ್ಪವನ್ನು ಹಾಕಿ । ಇತ್ತ ಚರುಪಾತ್ರೆಯಲ್ಲಿ ಉಳಿದಿರುವ ಚರುವಿಗೂ 1 ಸಲ ತುಪ್ಪಹಾಕಿ । ನಂತರ ಗಾಯತ್ರೀಮಂತ್ರವನ್ನು ಪುರೋನುವಾಕ್ಯ–ಯಾಜ್ಯ ರೀತಿಯಲ್ಲಿ (ಕೆಳಗೆತಿಳಿಸಿರುವಂತೆ) ಹೇಳಿ, ಸ್ರುಕ್‌ನಲ್ಲಿರುವ ಪಕ್ವಾಹುತಿಯನ್ನು ಅಗ್ನಿಮಧ್ಯದಲ್ಲಿ ಹೋಮಿಸುವುದು । ಹಾಗೂ ಮತ್ತೆ ತುಪ್ಪವನ್ನೂ ಚತುರವದಾನ ರೀತಿಯಾಗಿ ಸಾವಿತ್ರೀಮಂತ್ರದಿಂದಲೇ ಹೋಮಿಸುವುದು ಚಾಲ್ತಿಯಲ್ಲಿದೆ ॥

ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋಯೋನ: ಪ್ರಚೋದಯೋಂ(ಳ) ತತ್ಸ ವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೋನ: ಪ್ರಚೋದಯಾತ್ ಸ್ವಾಹಾ – ಸವಿತ್ರೇ ಪರಮಾತ್ಮನ ಇದಂನಮಮ ॥

ಪ್ರಧಾನಹೋಮ –

ಕೆಳಗಿನಂತೆ ಹೇಳಿ, ನೀರನ್ನು ಬಿಟ್ಟು ಹೋಮಗಳನ್ನು ಆರಂಭಿಸಬೇಕು ॥

ಸಂಕಲ್ಪಿತ ಹೂಯಮಾನ ಹವನೀಯ ದ್ರವ್ಯಾಣಿ ತತ್ತದ್ದೈವತಮಸ್ತು । ಮಂತ್ರೋಕ್ತದೇವತಾಭ್ಯ ಇದಂ ನಮಮ ॥

ವಿಮರ್ಶೆ :

॥ ಪ್ರಧಾನದೇವತೆಗಳ ವಿಷಯದಲ್ಲಿ, ಹೇಗೆ ಸಂಕಲ್ಪವಾಗಿದೆಯೋ ಆರೀತಿ ಪ್ರಧಾನ ಆಹುತಿಗಳನ್ನು ಹೋಮಿಸುವುದು ॥

॥ ಪ್ರಧಾನದರ್ವಿಯಲ್ಲಿಯೇ ಪ್ರಧಾನಾಹುತಿ(ತುಪ್ಪ)ಗಳನ್ನು ಹೋಮಿಸಬೇಕು, ಇದೇ ಸೂತ್ರ, ಕಾರಿಕಾಸಮ್ಮತ ಕ್ರಮ ॥

॥ ಆಯಾಯಾ ದೇವತೆಯ ಹೋಮಕ್ಕಾಗಿ ಸಂಕಲ್ಪಿಸಿರುವ ನಿರ್ದಿಷ್ಟ ಮಂತ್ರದಿಂದ, ಸಂಕಲ್ಪಿಸಿರುವ ನಿರ್ದಿಷ್ಟ ಸಂಖ್ಯೆಯಲ್ಲಿ, ಸಂಕಲ್ಪಿಸಿರುವ ನಿರ್ದಿಷ್ಟ ದ್ರವ್ಯದಿಂದ ಅಥವಾ ದ್ರವ್ಯಗಳಿಂದ, ಹೋಮವನ್ನು ಮಂತ್ರದ ಕೊನೆಯಲ್ಲಿ ಸ್ವಾಹಾಕಾರಸಹಿತ ಹೋಮ ಮಾಡಬೇಕು । ಸ್ವಾಹಾಕಾರದ ಕೊನೆಯಲ್ಲೇ ಆಹುತಿಯನ್ನು ಅಗ್ನಿಗೆ ಹಾಕಬೇಕು ॥

॥ ಯಾವುದೇ ಮಂತ್ರದ ಹೋಮದ ಕೊನೆಯಲ್ಲಿ ಉದ್ದೇಶತ್ಯಾಗವನ್ನು (ಸಂಸ್ಕೃತ ವಾಕ್ಯರೂಪದಲ್ಲಿ) ಹೇಳುವುದಕ್ಕೆ ಆಪಸ್ತಂಬ ಗೃಹ್ಯಸೂತ್ರದ ಅಗ್ನಿಮುಖದಲ್ಲಾಗಲೀ, ಶ್ರೌತಸೂತ್ರದಲ್ಲಾಗಲೀ ವಾಕ್ಯವು ಕಂಡುಬರುವುದಿಲ್ಲವಾದ್ದರಿಂದಲೂ ಹಾಗೂ ನಿರ್ದಿಷ್ಟವಾದ ಆ ಮಂತ್ರವೇ, (ದೇವತೋದ್ದೇಶೇನ ದ್ರವ್ಯತ್ಯಾಗಃ ಹೋಮಃ – ಮಿಮಾಂಸಾ) ಅಂದರೆ ಯಾವ ದೇವತೆಯ ಮಂತ್ರದಿಂದ ಹವಿಸ್ಸಿನ ಆಹುತಿಯನ್ನು ಹೋಮಿಸುತ್ತೇವೆಯೋ ಆ ಮಂತ್ರವೇ ಆ ನಿರ್ದಿಷ್ಟವಾದ ದೇವತೆಗೇ ಆ ಹವಿಸ್ಸನ್ನು ತಲುಪಿಸುತ್ತದೆ ಹಾಗಾಗಿ ಪ್ರತ್ಯೇಕವಾಗಿ ಮತ್ತೆ ಮತ್ತೆ 'ಇದು ನಿನಗೆ ಸೇರಿದ್ದು', ಎಂಬರ್ಥದ ವಾಕ್ಯವನ್ನು ಹೇಳುವ ಅಗತ್ಯವಿಲ್ಲ ಎಂಬ ಅಭಿಪ್ರಾಯದಿಂದಲೂ, ಯಾವುದೇ ಮಂತ್ರದ ಹೋಮದ ಕೊನೆಯಲ್ಲಿ ಉದ್ದೇಶ ತ್ಯಾಗವನ್ನು ಹೇಳದಿದ್ದರೂ ಅಶಾಸ್ತ್ರೀಯವಾಗಲೀ, ಕರ್ಮದೋಷವಾಗಲೀ ಆಗುವುದಿಲ್ಲವೆಬುಂದು ಸಿದ್ಧವಾಗುತ್ತದೆ ॥

॥ ಅಗ್ನಿಯ ಮಧ್ಯದಲ್ಲಿಯೇ ಹೋಮಿಸಬೇಕು ॥

॥ ಪ್ರಧಾನ ಹೋಮಗಳನ್ನು ಛಿದ್ರವಿಲ್ಲದಂತೆ, ನಿರಂತರವಾಗಿಯೇ ಮಾಡಬೇಕು ॥

॥ ಕರ್ಮಸಂಬಂಧವಾದ ಯೋಚನೆಗಳನ್ನು ಹೊರತುಪಡಿಸಿ ಬೇರಾವುದನ್ನೂ ಮನಸ್ಸಿಗೆ ಮತ್ತು ದೇಹಕ್ಕೆ ತೆಗೆದುಕೊಳ್ಳದೇ ಕರ್ಮವನ್ನು (ಹೋಮ) ಮಾಡಬೇಕು)॥

ಸ್ವಿಷ್ಟಕೃತ್ –

ದರ್ವ್ಯಾಮುಪಸ್ತೀರ್ಯ । ಉತ್ತರಾರ್ಧಾದ್ಭೂಯಿಷ್ಠಮನ್ನಂ ಸಕೃದವದಾಯ (ಪಂಚಾವತ್ತಿನ: ದ್ವಿರವದಾಯ) । ದ್ವಿರಭಿಘಾರ್ಯ ॥

ಸ್ರುಕ್ಕಿಗೆ ಒಂದುಸಲ ಆಜ್ಯವನ್ನು ಹಾಕಿಕೊಂಡು । ಉಳಿದಿರುವ ಚರುವನ್ನು ಪಾತ್ರೆಯ ಉತ್ತರಭಾಗದಿಂದ ಒಂದುಸಲ ಸ್ರುಕ್ಕಿಗೆ ಹಾಕಿಕೊಂಡು ಹಾಗೂ ಉಳಿದ ಹೋಮ ದ್ರವ್ಯಗಳನ್ನೂ ಒಮ್ಮೆ ಸ್ರುಕ್ಕಿಗೆ ಹಾಕಿಕೊಂಡು (ಯಜಮಾನನು ಪಂಚಾರ್ಷೇಯನಾಗಿದ್ದಲ್ಲಿ 2 ಸಲ ತೆಗೆದುಕೊಳ್ಳಬೇಕು) ಅದರ ಮೇಲೆ 2 ಸಲ ಪುನಃ ತುಪ್ಪವನ್ನು ಹಾಕಿಕೊಂಡು, ಈ ಕೆಳಗಿನ ಮಂತ್ರವನ್ನು ಪುರೋನುವಾಕ್ಯ–ಯಾಜ್ಯ ರೀತಿಯಲ್ಲಿ ಹೇಳಿ, ಸ್ವಾಹಾಕಾರದ ಕೊನೆಯಲ್ಲಿ ಅಗ್ನಿಯ ಉತ್ತರಭಾಗದಲ್ಲಿ ಹೋಮಿಸಬೇಕು ॥

ಓಂ ಹವ್ಯವಾಹಮಭಿಮಾತಿಷಾಹಗ್ಂ ರಕ್ಷೋಹಣಂ ಪೃತನಾಸು ಜಿಷ್ಣುಂ ॥ ಜ್ಯೋತಿಷ್ಮಂತಂ ದೀಧ್ಯತಂ ಪುರಂಧಿಮಗ್ನಿಗ್ಂ ಸ್ವಿಷ್ಟಕೃತಮಾಹುವೇವೋಂ(ಳ) ಸ್ವಿಷ್ಟಮಗ್ನೇ ಅಭಿತತ್ಪೃಣಾಹಿ ವಿಶ್ವಾದೇವ ಪೃತನಾ ಅಭಿಷ್ಯ ॥ ಉರುನ್ನಃಪಂಥಾಂ ಪ್ರದಿಶನ್ ವಿಭಾಹಿ ಜ್ಯೋತಿಷ್ಮದ್ಧೇಹ್ಯಜರನ್ನ ಆಯುಃ ಸ್ವಾಹಾ – ಅಗ್ನಯೇ ಸ್ವಿಷ್ಟಕೃತ ಇದಂ ನಮಮ ॥

ಅನೂಯಾಜಸಮಿತ್, ಇಧ್ಮಸನ್ನಹನ ಹೋಮ –

ಆಧಾರ ಮೂಲವಾಕ್ಯ :

ಸಮಿತ್ಸನ್ನಹನಂ ಕುರ್ಯಾತ್ ಪ್ರಧಾನಾಹುತ್ಯನಂತರಂ । ಸಮಿತ್ಸನ್ನಹನೇ ಚೈವ ಸಗ್ಂಸ್ರಾವಂ ತಥೈವ ಚ । ಆಘಾರೇಚೇಧ್ಮಾಧಾನೇ ಚ ಸ್ವಾಹಾಕಾರಾಯ ವರ್ಜಯೇತ್ ॥

ಪ್ರಧಾನಾಹುತಿ, ಸ್ವಿಷ್ಟಕೃತ್ ಹೋಮಗಳ ನಂತರ ಅನೂಯಾಜಸಮಿತ್ತನ್ನು ಹಾಗೂ ಇಧ್ಮಕಟ್ಟಿದ್ದ ದಾರವನ್ನು ಸ್ವಾಹಾಕಾರ ರಹಿತವಾಗಿ ಹೋಮಿಸಬೇಕು ॥

ಪಾತ್ರಾಸಾದನಜಾಗದಲ್ಲಿ ಇಟ್ಟಿರುವ ಒಂದು ಸಮಿತ್ತನ್ನು ಕೆಳಗಿನ ಮಂತ್ರದಿಂದ ಅಗ್ನಿಯಲ್ಲಿ ಹಾಕಬೇಕು ॥

ಅಗ್ನಯೇ – ಅಗ್ನಯ ಇದಂನಮಮ ॥

ಪಾತ್ರಾಸಾದನಜಾಗದಲ್ಲಿ ಇಟ್ಟಿರುವ ಇಧ್ಮಕಟ್ಟಿದ್ದ ದರ್ಭೆಯದಾರವನ್ನು, ಕೆಳಗಿನ ಮಂತ್ರದಿಂದ ಅಗ್ನಿಯಲ್ಲಿ ಹಾಕಬೇಕು ॥

ರುದ್ರಾಯ – ರುದ್ರಾಯೇದಂ ನಮಮ ॥

ಅಪ ಉಪಸ್ಪೃಶ್ಯ । ಕೈ ತೊಳೆಯಬೇಕು ॥

ಜಯಾದಯಃ (ಜಯಾ–ಅಭ್ಯಾತಾನ–ರಾಷ್ಟ್ರಭೃತ್) –

ಏತತ್ ಕರ್ಮಸಮೃದ್ಧ್ಯರ್ಥಂ ಸ್ರುವೇಣ ಜಯಾದಿಹವನಂ ಕರಿಷ್ಯೇ ॥

ಇಲ್ಲಿಯವರೆಗೆ ಮಾಡಿರುವಂತಹ ಎಲ್ಲಾ ಕರ್ಮಗಳ ಸಮೃದ್ಧಿಗಾಗಿ ಸ್ರುವದಿಂದ ಕೆಳಗಿನ ಮಂತ್ರಗಳಿಂದ ಜಯಾದಿಹೋಮವನ್ನು ಮಾಡಬೇಕು ॥

ಜಯಾಮಂತ್ರಾಃ –

ಚಿತ್ತಂ ಚ ಸ್ವಾಹಾ ॥ ಚಿತ್ತಾಯ ಇದಂನಮಮ ॥

ಚಿತ್ತಿಶ್ಚ ಸ್ವಾಹಾ ॥ ಚಿತ್ಯಾ ಇದಂನಮಮ ॥

ಆಕೂತಂ ಚ ಸ್ವಾಹಾ ॥ ಆಕೂತಾಯ ಇದಂನಮಮ ॥

ಆಕೂತಿಶ್ಚ ಸ್ವಾಹಾ ॥ ಆಕೂತ್ಯಾ ಇದಂ ನಮಮ ॥

ವಿಜ್ಞಾತಂ ಚ ಸ್ವಾಹಾ ॥ ವಿಜ್ಞಾತಾಯ ಇದಂನಮಮ ॥

ವಿಜ್ಞಾನಂ ಚ ಸ್ವಾಹಾ ॥ ವಿಜ್ಞಾನಾಯ ಇದಂನಮಮ ॥

ಮನಶ್ಚ ಸ್ವಾಹಾ ॥ ಮನಸ ಇದಂನಮಮ ॥

ಶಕ್ವರೀಶ್ಚ ಸ್ವಾಹಾ ॥ ಶಕ್ವರೀಭ್ಯ ಇದಂನಮಮ ॥

ದರ್ಶಶ್ಚ ಸ್ವಾಹಾ ॥ ದರ್ಶಾಯ ಇದಂನಮಮ ॥

ಪೂರ್ಣಮಾಸಶ್ಚ ಸ್ವಾಹಾ ॥ ಪೂರ್ಣಮಾಸಾಯ ಇದಂನಮಮ ॥

ಬೃಹಚ್ಚ ಸ್ವಾಹಾ ॥ ಬೃಹತ ಇದಂನಮಮ ॥

ರಥಂತರಂ ಚ ಸ್ವಾಹಾ ॥ ರಥಂತರಾಯ ಇದಂನಮಮ ॥

ಪ್ರಜಾಪತಿರ್ಜಯಾನಿಂದ್ರಾಯ ವೃಷ್ಣೇ ಪ್ರಾಯಚ್ಛದುಗ್ರಃ ಪೃತನಾಜ್ಯೇಷು ತಸ್ಮೈ ವಿಶಸ್ಸಮನಮಂತ ಸರ್ವಾಸ್ಸ ಉಗ್ರಸ್ಸ ಹಿ ಹವ್ಯೋ ಬಭೂವ ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥

ಅಭ್ಯಾತಾನ ಮಂತ್ರಾಃ –

೧. ಅಗ್ನಿರ್ಭೂತಾನಾಮಧಿಪತಿ ಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಅಗ್ನಯಇದಂನಮಮ ॥

೨. ಇಂದ್ರೋ ಜ್ಯೇಷ್ಠಾನಾಮಧಿಪತಿ ಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಇಂದ್ರಾಯ ಇದಂನಮಮ ॥

೩. ಯಮಃ ಪೃಥಿವ್ಯಾಧಿಪತಿ ಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಯಮಾಯ ಇದಂನಮಮ ॥

೪. ವಾಯುರಂತರಿಕ್ಷಸ್ಯಾಧಿಪತಿ ಸ್ಸಮಾವತು । ಅಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ವಾಯವಇದಂನಮಮ ॥

೫. ಸೂರ್ಯೋದಿವೋಽಧಿಪತಿ ಸ್ಸಮಾವತು । ಅಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಸೂರ್ಯಾಯೇದಂನಮಮ ॥

೬. ಚಂದ್ರಮಾ ನಕ್ಷತ್ರಾಣಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಚಂದ್ರಮಸಇದಂನಮಮ ॥

೭. ಬೃಹಸ್ಪತಿರ್ಬ್ರಹ್ಮಣೋಽಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಬೃಹಸ್ಪತಯಇದಂನಮಮ ॥

೮. ಮಿತ್ರಸ್ಯತ್ಯಾನಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥

ಮಿತ್ರಾಯೇದಂನಮಮ ॥

೯. ವರುಣೋಽಪಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥

ವರುಣಾಯೇದಂನಮಮ ॥

೧೦. ಸಮುದ್ರಸ್ಯೋತ್ಯಾನಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಸಮುದ್ರಾಯೇದಂ ನ ಮಮ ॥

೧೧. ಅನ್ನಗ್ಂ ಸಾಮ್ರಾಜ್ಯಾನಾಮಧಿಪತಿ ತನ್ಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಅನ್ನಾಯೇದಂ ನ ಮಮ ॥

೧೨. ಸೋಮ ಓಷಧೀನಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥

ಸೋಮಾಯೇದಂ ನಮಮ ॥

೧೩. ಸವಿತಾ ಪ್ರಸವಾನಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಸವಿತ್ರ ಇದಂನಮಮ ॥

೧೪. ರುದ್ರಃ ಪಶೂನಾಮಧಿಪತಿ ಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ರುದ್ರಾಯೇದಂ ನಮಮ ॥ ಅಪ ಉಪಸ್ಪೃಶ್ಯ ॥

೧೫. ತ್ವಷ್ಟಾ ರೂಪಾಣಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ತ್ವಷ್ಟ್ರ ಇದಂನಮಮ ॥

೧೬. ವಿಷ್ಣುಃ ಪರ್ವತಾನಾಮಧಿಪತಿಸ್ಸಮಾವತ್ತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಂ ಆಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ವಿಷ್ಣವ ಇದಂನಮಮ ॥

೧೭. ಮರುತೋ ಗಣಾನಾಮಧಿಪತಯ ಸ್ತೇಮಾವಂತ್ವಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ಸ್ವಾಹಾ ॥ ಮರುದ್ಭ್ಯ ಇದಂನಮಮ ॥

೧೮. ಪಿತರಃ ಪಿತಾಮಹಾಃ ಪರೇಽವರೇ ತತಾಸ್ತತಾಮಹಾ ಇಹ ಮಾವತ । ಅಸ್ಮಿನ್ ಬ್ರಹ್ಮನ್ನಸ್ಮಿನ್ ಕ್ಷತ್ರೇಽಸ್ಯಾಮಾಶಿಷ್ಯಸ್ಯಾಂ ಪುರೋಧಾಯಾಮಸ್ಮಿನ್ ಕರ್ಮನ್ನಸ್ಯಾಂ ದೇವಹೂತ್ಯಾಗ್ ಸ್ವಾಹಾ ॥ ಪಿತೃಭ್ಯ ಇದಂ ನಮಮ ॥ ಅಪ ಉಪಸ್ಪೃಶ್ಯ ॥

ರಾಷ್ಟ್ರಭೃತ್ ಮಂತ್ರಾಃ –

೧. ಋತಾಷಾಡೃತಧಾಮಾಗ್ನಿರ್ಗಂಧರ್ವಸ್ತಸ್ಯೌಷಧಯೋಽಪ್ಸರಸ ಊರ್ಜೋನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಅಗ್ನಯ ಇದಂನಮಮ ॥

ತಾಭ್ಯಸ್ಸ್ವಾಹಾ ॥ ಓಷಧೀಭ್ಯ ಇದಂನಮಮ ॥

೨. ಸಗ್ಂಹಿತೋ ವಿಶ್ವಸಾಮಾ ಸೂರ್ಯೋ ಗಂಧರ್ವಸ್ತಸ್ಯ ಮರೀಚಯೋಽಪ್ಸರಸ ಆಯುವೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಸೂರ್ಯಾಯೇದಂ ನಮಮ ॥

ತಾಭ್ಯಸ್ಸ್ವಾಹಾ ॥ ಮರೀಚಿಭ್ಯ ಇದಂನಮಮ ॥

೩. ಸುಷುಮ್ನಸ್ಸೂರ್ಯ ರಶ್ಮಿಶ್ಚಂದ್ರಮಾ ಗಂಧರ್ವಸ್ತಸ್ಯ ನಕ್ಷತ್ರಾಣ್ಯಪ್ಸರಸೋ ಬೇಕುರಯೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಚಂದ್ರಮಸ ಇದಂನಮಮ ॥

ತಾಭ್ಯಸ್ಸ್ವಾಹಾ ॥ ನಕ್ಷತ್ರೇಭ್ಯ ಇದಂನಮಮ ॥

೪. ಭುಜ್ಯುಸ್ಸುಪರ್ಣೋ ಯಜ್ಞೋ ಗಂಧರ್ವಸ್ತಸ್ಯ ದಕ್ಷಿಣಾ ಅಪ್ಸರಸಸ್ತವಾ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಯಜ್ಞಾಯೇದಂ ನಮಮ ॥

ತಾಭ್ಯಸ್ಸ್ವಾಹಾ ॥ ದಕ್ಷಿಣಾಭ್ಯ ಇದಂ ನಮಮ ॥

೫. ಪ್ರಜಾಪತಿರ್ವಿಶ್ವಕರ್ಮಾ ಮನೋಗಂಧರ್ವಸ್ತಸ್ಯೖರ್ನಮಾನ್ಯಪ್ಸರಸೋ ವಹ್ನಯೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಮನಸ ಇದಂನಮಮ ॥

ತಾಭ್ಯಸ್ಸ್ವಾಹಾ ॥ ಋಕ್ಸಾಮೇಭ್ಯ ಇದಂನಮಮ ॥

೬. ಇಷಿರೋ ವಿಶ್ವವ್ಯಚಾ ವಾತೋ ಗಂಧರ್ವಸ್ತಸ್ಯಾಪೋsಪ್ಸರಸೋ ಮುದಾ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ವಾತಾಯೇದಂ ನಮಮ ॥

ತಾಭ್ಯಸ್ಸ್ವಾಹಾ ॥ ಅದ್ಭ್ಯ ಇದಂನಮಮ ॥

೭. ಭುವನಸ್ಯಪತೇ ಯಸ್ಯತ ಉಪರಿಗೃಹಾ ಇಹ ಚ । ಸ ನೋ ರಾಸ್ವಾಜ್ಯಾನಿಗ್ಂ ರಾಯಸ್ಪೋಷಗ್ಂ ಸುವೀರ್ಯಗ್ಂ ಸಂವತ್ಸರೀಣಾಗ್ ಸ್ವಸ್ತಿಗ್ಂ ಸ್ವಾಹಾ ॥

ಭುವನಸ್ಯಪತ ಇದಂನಮಮ ॥

೮. ಪರಮೇಷ್ಠ್ಯಧಿಪತಿರ್ಮೃತ್ಯುರ್ಗಂಧರ್ವಸ್ತಸ್ಯ ವಿಶ್ವಮಪ್ಸರಸೋ ಭುವೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥

ಮೃತ್ಯವ ಇದಂನಮಮ ॥

ತಾಭ್ಯಸ್ಸ್ವಾಹಾ ॥ ವಿಶ್ವಾದಿಭ್ಯ ಇದಂ ನಮಮ ॥

೯. ಸುಕ್ಷಿತಿಸ್ಸುಭೂತಿರ್ಭದ್ರಕೃತ್ಸುವರ್ವಾನ್ ಪರ್ಜನ್ಯೋ ಗಂಧರ್ವಸ್ತಸ್ಯ ವಿದ್ಯುತೋಽಪ್ಸರಸೋ ರುಚೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಪರ್ಜನ್ಯಾಯೇದಂ ನಮಮ ॥

ತಾಭ್ಯಸ್ಸ್ವಾಹಾ ॥ ವಿದ್ಯುದಾದಿಭ್ಯ ಇದಂ ನಮಮ ॥

೧೦. ದೂರೇಹೇತಿರಮೃಡಯೋ ಮೃತ್ಯುರ್ಗಂಧರ್ವಸ್ತಸ್ಯ ಪ್ರಜಾ ಅಪ್ಸರಸೋ ಭೀರುವೋ ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಮೃತ್ಯವಇದಂ ನಮಮ ॥

ತಾಭ್ಯಸ್ಸ್ವಾಹಾ ॥ ಪ್ರಜಾಭ್ಯ ಇದಂನಮಮ ॥

೧೧. ಚಾರುಃ ಕೃಪಣಕಾಶೀ ಕಾಮೋ ಗಂಧರ್ವಃ । ತಸ್ಯಾಧ್ವಯೋಽಪ್ಸರಸ ಶ್ಚೋಚಯಂತೀರ್ನಾಮ ಸ ಇದಂ ಬ್ರಹ್ಮ ಕ್ಷತ್ರಂ ಪಾತು ತಾ ಇದಂಬ್ರಹ್ಮ ಕ್ಷತ್ರಂ ಪಾಂತು ತಸ್ಮೈ ಸ್ವಾಹಾ ॥ ಕಾಮಾಯೇದಂ ನಮಮ ॥

ತಾಭ್ಯಸ್ಸ್ವಾಹಾ ॥ ಆಧ್ಯಾದಿಭ್ಯ ಇದಂ ನಮಮ ॥

೧೨. ಸನೋಭುವನಸ್ಯಪತೇ ಯಸ್ಯತ ಉಪರಿಗೃಹಾ ಇಹ ಚ । ಉರು ಬ್ರಹ್ಮಣೇಸ್ಮೈ ಕ್ಷತ್ರಾಯ ಮಹಿ ಶರ್ಮಯಚ್ಛ ಸ್ವಾಹಾ ॥ ಭುವನಸ್ಯಪತಯ ಇದಂ ನಮಮ ॥

೧೩. ಪ್ರಜಾಪತೇ ನ ತ್ವ ದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿತಾ ಬಭೂವ । ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು ವಯಗ್ಂಸ್ಯಾಮ ಪತಯೋ ರಯೀಣಾಗ್ಂ ಸ್ವಾಹಾ ॥ ಪ್ರಜಾಪತಯ ಇದಂನಮಮ ॥

ಓಂ ಭೂಃ ಸ್ವಾಹಾ – ಅಗ್ನಯ ಇದಂನಮಮ ॥

ಓಂ ಭುವಃ ಸ್ವಾಹಾ – ವಾಯವ ಇದಂನಮಮ ॥

ಓಗ್ಂ ಸುವಃ ಸ್ವಾಹಾ – ಸೂರ್ಯಾಯೇದಂ ನಮಮ ॥

ಯದ್ಯಸ್ಯ ಕರ್ಮಣೋ ತ್ಯರೀರಿಚಂ ಯದ್ವಾನ್ಯೂನ ಮಿಹಾಕರವಮ್ । ಅಗ್ನಿಷ್ಟತ್ಸ್ವಿಷ್ಟಕೃದ್ವಿದ್ವಾನ್ಸರ್ವಗ್ಂ ಸ್ವಿಷ್ಟಗ್ಂ ಸುಹುತಂ ಕರೋತ್ತು ಸ್ವಾಹಾ – ಅಗ್ನಯೇ ಸ್ವಿಷ್ಟಕೃತ ಇದಂನಮಮ ॥

ಪರಿಧ್ಯಂಜನ –

ದರ್ವ್ಯಾಪರಿಧೀನನಕ್ತಿ । ವಸುಭ್ಯಸ್ತ್ವಾ ಇತಿ ಮಧ್ಯಮ ಪರಿಧಿಮುಪರಿ । ರುದ್ರೇಭ್ಯಸ್ತ್ವಾ ಇತಿ ದಕ್ಷಿಣ ಪರಿಧಿಮುಪರಿ(ಅಪ ಉಪಶ್ಪೃಶ್ಯ) । ಆದಿತ್ಯೇಭ್ಯಸ್ತ್ವಾ ಇತಿ ಉತ್ತರಪರಿಧಿಮುಪರಿ ॥ ಏವಂ ತ್ರಿಃ ॥

ಸ್ರುಕ್‌ನಿಂದ ಆಜ್ಯಶೇಷವನ್ನು ಪರಿಧಿಗಳ ಮೇಲೆ ಬಿಡುವುದು । ಮೊದಲು ವಸುಭ್ಯಸ್ತ್ವಾ ಎಂದು ಮಧ್ಯಮಪರಿಧಿಯ ಮೇಲೆ । ನಂತರ ರುದ್ರೇಭ್ಯಸ್ತ್ವಾ ಎಂದು ದಕ್ಷಿಣಪರಿಧಿಯ ಮೇಲೆ(ಕೈ ತೊಳೆದುಕೊಳ್ಳುವುದು) । ಆಮೇಲೆ ಆದಿತ್ಯೇಭ್ಯಸ್ತ್ವಾ ಎಂದು ಉತ್ತರಪರಿಧಿಯ ಮೇಲೆ ॥ ಹೀಗೆ 3 ಸಲ ಮಾಡಬೇಕು ॥

ಲೇಪಕಾರ್ಯ –

ದರ್ಭೈಃ, ದರ್ವ್ಯಮನತ್ಯಗ್ರಂ – ಅಥೇತರಸ್ಯಾಂ ಮಧ್ಯಂ – ಆಜ್ಯಸ್ಥಾಲ್ಯಾಂ ಮೂಲಂ, ಏವಂ ತ್ರಿಃ ॥

ಸ್ರುಕ್ಕನ್ನು ಆಜ್ಯಪಾತ್ರೆಯ ದಕ್ಷಿಣಕ್ಕೆ ಇಟ್ಟುಕೊಳ್ಳಬೇಕು ಹಾಗೂ ಸ್ರುಕ್ ಮತ್ತು ಆಜ್ಯಪಾತ್ರೆಗಳ ಮಧ್ಯದಲ್ಲಿ ಸ್ರುವವನ್ನು ಇಟ್ಟುಕೊಳ್ಳಬೇಕು । ಆಜ್ಯಪಾತ್ರೆಯ ಕೆಳಗೆ ಇರುವ ದರ್ಭೆಗಳನ್ನು ತೆಗೆದುಕೊಂಡು, ಉತ್ತರಾಗ್ರವಾಗಿರುವಂತೆ ಎರಡುಕೈಗಳಿಂದಲೂ ಹಿಡಿದುಕೊಂಡು, ಸ್ರುಕ್(ದರ್ವಿ)ಗೆ ದರ್ಭೆಗಳ ಅಗ್ರವನ್ನು, ಸ್ರುವಕ್ಕೆ ದರ್ಭೆಗಳ ಮಧ್ಯವನ್ನು, ಆಜ್ಯಕ್ಕೆ ದರ್ಭೆಗಳ ಬುಡವನ್ನೂ, ತಗುಲಿಸಬೇಕು । ಹೀಗೆ 3 ಸಲ ಮಾಡುವುದು ॥

ಪಾಣಿಭ್ಯಾಂ ದರ್ವ್ಯಂ ಪ್ರತಿಷ್ಠಾಪ್ಯ । ದರ್ಭಾಣಿ ಪ್ರಹೃತ್ಯ । ಅವಶಿಷ್ಟ ದರ್ಭಂ ಚ ಅಪಿ ಪ್ರಹೃತ್ಯ ॥

ಕೈಯಲ್ಲಿ ಸ್ರುಕ್ಕನ್ನು ಇಟ್ಟುಕೊಂಡು, ಕೈಯಲ್ಲಿರುವ ದರ್ಭೆಗಳಲ್ಲಿ ಒಂದನ್ನು ಉಳಿಸಿ, ಉಳಿದ ಎಲ್ಲಾ ದರ್ಭೆಗಳನ್ನೂ ಆ ಸ್ರುಕ್ಕಿನ ಮೇಲೆ ಇಟ್ಟುಕೊಂಡು, ಎರಡುಕೈಗಳಲ್ಲೂ ಸ್ರುಕ್ಕನ್ನು ಹಿಡಿದುಕೊಂಡು, ಅದರಮೇಲಿರುವ ದರ್ಭೆಗಳನ್ನು ಅಗ್ನಿಗೆ ಹಾಕಿ, ನಂತರ ಉಳಿದಿರುವ ಒಂದುದರ್ಭೆಯನ್ನೂ ಸಹಾ ಅಗ್ನಿಗೆ ಹಾಕಬೇಕು ॥

ಪರಿಧಿಕಾರ್ಯ –

ಪ್ರಹೃತ್ಯ ಮಧ್ಯಮಂ ಪೂರ್ವಂ, ಇತರೌ ಯುಗಪದ್ದಹೇತ್ । ದಹನ್ ವಾಮಪರಿಧ್ಯಗ್ರೇ ಅಂಗಾರೇಷೂಪಗೂಹತಿ ॥

ಮಧ್ಯಮ ಪರಿಧಿಯನ್ನು ಅಗ್ನಿಗೆ ಮೊದಲು ಹಾಕಿ, ನಂತರ ಉಳಿದ 2 ಎರಡು ಪರಿಧಿಗಳನ್ನೂ ಒಟ್ಟಿಗೆ ಅಗ್ನಿಗೆ ಹಾಕುವುದು । ಅಗ್ನಿಯ ಉತ್ತರಭಾಗದ ಪರಿಧಿಯನ್ನು ಕೆಂಡದಲ್ಲಿ ಮುಚ್ಚುವ ರೀತಿ ಹಾಕುವುದು ॥

ದ್ವೇ ಆಘಾರಸಮಿಧೌ ಪ್ರಹೃತ್ಯ ॥

2 ಆಘಾರ ಸಮಿತ್ತುಗಳನ್ನು ಕ್ರಮವಾಗಿ ಈಶಾನ್ಯ ಹಾಗೂ ಆಗ್ನೇಯದಿಂದ ತೆಗೆದುಕೊಂಡು, ಅಗ್ನಿಗೆ ಹಾಕುವುದು ॥

ಸಂಸ್ರಾವಹೋಮ –

ಮೂಲ ಆಧಾರವಾಕ್ಯ :

ಸಮಿತ್ಸನ್ನಹನೇ ಚೈವ ಸಗ್ಸ್ರಾವಂ ತಥೈವ ಚ । ಆಘಾರೇಚೇಧ್ಮಾಧಾನೇ ಚ ಸ್ವಾಹಾಕಾರಾಯ ವರ್ಜಯೇತ್ ॥

ಇಧ್ಮವನ್ನು ಕಟ್ಟಿದ ದಾರದಹೋಮ, ಸಂಸ್ರಾವಹೋಮ, ಆಘಾರಹೋಮ, ಇಧ್ಮಾಧಾನಹೋಮ, ಇವಿಷ್ಟನ್ನೂ ಸ್ವಾಹಾಕಾರ ರಹಿತವಾಗಿ ಮಾಡಬೇಕು ॥

ಸ್ರುವಾಗ್ರಂ ಸ್ರುಙ್ಮುಖೇಸ್ಥಾಪ್ಯ ಸ್ರುಚಮಪಿ ಆಜ್ಯಪೂರಿತಾಂ । ಉಭಾವಪಿ ಕರಾಭ್ಯಾಂ ಚ ವಿಪರ್ಯಾಸೇನ ಧಾರಯೇತ್ ॥

ಸ್ರುಕ್ಕಿಗೆ ಆಜ್ಯವನ್ನು ತುಂಬಿ, ಸ್ರುವದಲ್ಲೂ ಆಜ್ಯವನ್ನು ತುಂಬಿಕೊಂಡು, ಆ ಸ್ರುವದ ತುದಿಯನ್ನು ಸ್ರುಕ್ಕಿನ ಮುಖದಲ್ಲಿ ಇಟ್ಟುಕೊಂಡು, ಬಲಕೈಯಲ್ಲಿ ಸ್ರುಕ್ಕನ್ನೂ ಎಡಕೈಯಲ್ಲಿ ಸ್ರುವವನ್ನೂ ಹಿಡಿದುಕೊಂಡು, ಅಮಂತ್ರಕವಾಗಿ ಹಾಗೂ ಸ್ವಾಹಾಕಾರರಹಿತವಾಗಿ ತುಪ್ಪವನ್ನು ಅಗ್ನಿಗೆ ಹೋಮಿಸಬೇಕು ನಂತರ ಉದ್ದೇಶತ್ಯಾಗವನ್ನು ಈ ಕೆಳಗಿನಂತೆ ಹೇಳಬೇಕು ॥

ವಸುಭ್ಯೋರುದ್ರೇಭ್ಯಆದಿತ್ಯೇಭ್ಯ ಸ್ಸಂಸ್ರಾವಭಾಗೇಭ್ಯ ಇದಂನಮಮ ॥

ಪ್ರಾಯಶ್ಚಿತ್ತ ಹೋಮಗಳು –

ಮೂಲ ಆಧಾರವಾಕ್ಯ :

ಅನಾಜ್ಞಾತ ತ್ರಯೋಗ್ನಿಸ್ಯಾತ್ ತ್ವನ್ನಸ್ತನ್ನಯೋರ್ಗತೇ । ಆಭಿರ್ಗಿರ್ಭಿರಿತೀಂದ್ರಸ್ಯಾತ್ ಹರಿವಶ್ಚೇತಿ ದೇವತಾಃ । ಇದಂವಿಷ್ಣುಶ್ಚ ವಿಷ್ಣುಸ್ಯಾತ್ ಸರ್ವಚಿತ್ತೇ ಪ್ರಜಾಪತಿಃ ॥

ಅನಾಜ್ಞಾತ 3 ಮಂತ್ರಗಳು, ಅವುಗಳಿಗೆ ಅಗ್ನಿದೇವತೆಯು । ತ್ವನ್ನ ಸತ್ವನ್ನ 2 ಮಂತ್ರಗಳು, ಇವುಗಳಿಗೆ ಅಗ್ನೀವರುಣರು ದೇವತೆಗಳು । ಆಭಿರ್ಗಿರ್ಭಿರ್ 1 ಮಂತ್ರವು, ಇದಕ್ಕೆ ಇಂದ್ರಹರಿ ದೇವತೆಗಳು । ಇದಂವಿಷ್ಣು ಒಂದುಮಂತ್ರ, ಇದಕ್ಕೆ ವಿಷ್ಣುದೇವತೆಯು । ಸರ್ವಪ್ರಾಯಶ್ಚಿತ್ತ ಮಂತ್ರ, ಇದಕ್ಕೆ ಪ್ರಜಾಪತಿಯು ದೇವತೆಯು । ಇವಿಷ್ಟು ಅನಾಜ್ಞಾತ ಪ್ರಾಯಶ್ಚಿತ್ತ ಮಂತ್ರಗಳು ॥

ಅಸ್ಮಿನ್ .....ಹೋಮೇಕರ್ಮಣಿ ಮಧ್ಯೇ ಮಂತ್ರತಂತ್ರ ಸ್ವರಾಕ್ಷರ ಪದವರ್ಣ ಧ್ಯಾನನಿಯಮ ನ್ಯೂನಾತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥಂ, ಅನಾಜ್ಞಾತಾದಿಭಿ: ಮಂತ್ರೈ: ಆಜ್ಯಾಹುತೀರ್ಹೋಷ್ಯಾಮಿ ॥

ನಿರ್ದಿಷ್ಟವಾದ ಈ ಕರ್ಮದ ಹೋಮದ ಮಧ್ಯದಲ್ಲಿ ಸಂಭವಿಸಿರಬಹುದಾದ ಮಂತ್ರ, ತಂತ್ರ, ಸ್ವರ, ವರ್ಣ, ಪದ, ಏಕಾಗ್ರತೆ, ನಿಯಮ, ಸಂಕಲ್ಪಕ್ಕಿಂತ ಕಡಿಮೆ ಅಥವಾ ಹೆಚ್ಚು – ಈ ರೀತಿಯಾಗಿರುವ ಲೋಪದೋಷಗಳ ಪ್ರಾಯಶ್ಚಿತ್ತಕ್ಕಾಗಿ ಕೆಳಗಿನ ಮಂತ್ರಗಳಿಂದ ತುಪ್ಪವನ್ನು ಹೋಮಿಸಬೇಕು ॥

ಓಂ ಅನಾಜ್ಞಾತಂ ಯದಾಜ್ಞಾತಂ ಯಜ್ಞಸ್ಯ ಕ್ರಿಯತೇ ಮಿಥು । ಅಗ್ನೇ ತದಸ್ಯ ಕಲ್ಪಯ ತ್ವಗ್ಂ ಹಿ ವೇತ್ಥ ಯಥಾ ತಥಗ್ಂ ಸ್ವಾಹಾ – ಅಗ್ನಯ ಇದಂ ನಮಮ ॥

ಓಂ ಪುರುಷಸಮ್ಮಿತೋ ಯಜ್ಞೋ ಯಜ್ಞಃ ಪುರುಷ ಸಮ್ಮಿತಃ । ಅಗ್ನೇ ತದಸ್ಯ ಕಲ್ಪಯ ತ್ವಗ್ಂ ಹಿ ವೇತ್ಥ ಯಥಾ ತಥಗ್ಂ ಸ್ವಾಹಾ – ಅಗ್ನಯ ಇದಂ ನಮಮ ॥

ಓಂ ಯತ್ವಾಕತ್ರಾ ಮನಸಾ ದೀನದಕ್ಷಾ ನ ಯಜ್ಞಸ್ಯ ಮನ್ವತೇ ಮರ್ತಾಸಃ ।
ಅಗ್ನಿಷ್ಟದ್ಧೋತಾ ಕ್ರತುವಿದ್ವಿಜಾನನ್ಯಜಿಷ್ಠೋ ದೇವಾಗ್ಂ ಋತುಷೋ ಯಜಾತಿ ಸ್ವಾಹಾ
– ಅಗ್ನಯ ಇದಂ ನಮಮ ॥

ಓಂ ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್ದೇವಸ್ಯ ಹೇಡೋಽವಯಾಸಿಸೀಷ್ಠಾಃ ।
ಯಜಿಷ್ಠೋ ವಹ್ನಿತಮಶ್ಶೋಶುಚಾನೋ ವಿಶ್ವಾದ್ವೇಷಾಗ್ಂಸಿ ಪ್ರಮುಮುಗ್ಧ್ಯಸ್ಮತ್
ಸ್ವಾಹಾ – ಅಗ್ನೀವರುಣಾಭ್ಯಾಂ ಇದಂ ನಮಮ ॥

ಓಂ ಸ ತ್ವನ್ನೋ ಅಗ್ನೇಽವಮೋ ಭವೋತೀ ನೇದಿಷ್ಠೋ ಅಸ್ಯಾ ಉಷಸೋ ವ್ಯುಷ್ಟೌ ।
ಅವಯಕ್ಷ್ವ ನೋ ವರುಣಗ್ಂ ರರಾಣೋ ವೀಹಿ ಮೃಡೀಕಗ್ಂ ಸುಹವೋ ನ
ಏಧಿ ಸ್ವಾಹಾ – ಅಗ್ನೀವರುಣಾಭ್ಯಾಂ ಇದಂ ನಮಮ ॥

ಓಂ ಆಭಿರ್ಗೀರ್ಭಿರ್ಯದತೋ ನ ಊನಮಾಪ್ಯಾಯಯ ಹರಿವೋವರ್ಧಮಾನಃ ।
ಯದಾ ಸ್ತೋತೃಭ್ಯೋ ಮಹಿಗೋತ್ರಾರುಜಾಸಿ ಭೂಯಿಷ್ಠಭಾಜೋ ಅಧತೇಸ್ಯಾಮ
ಸ್ವಾಹಾ – ಇಂದ್ರಾಯಹರಿವತೇ ವರ್ಧಮಾನಾಯ ಇದಂನಮಮ ॥

ಓಂ ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇಪದಂ । ಸಮೂಢಮಸ್ಯಪಾಗ್ಂ
ಸುರೇಸ್ವಾಹಾ – ವಿಷ್ಣವೇ ಪರಮಾತ್ಮನ ಇದಂನಮಮ ॥

ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ । ಉರ್ವಾರುಕಮಿವ
ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್ಸ್ವಾಹಾ ॥ ತ್ರ್ಯಂಬಕಾಯೇದಂ ನಮಮ ॥

ಓಂ ಯದ್ವಿದ್ವಾಗ್ಂಸೋ ಯದವಿದ್ವಾಗ್ಂಸೋ ಮುಗ್ಧಾಃ ಕುರ್ವಂತ್ಯೃತ್ವಿಜಃ ।
ಅಗ್ನಿರ್ಮಾ ತಸ್ಮಾದೇನಸಃ ಶ್ರದ್ಧಾದೇವೀ ಚ ಮುಂಚತಾಗ್ಂ ಸ್ವಾಹಾ ॥
ಅಗ್ನಿಶ್ರದ್ಧಾಭ್ಯಾಮಿದಂ ನಮಮ ॥

ಓಂ ಅಸ್ಕಾಂದ್ಯೌಃ ಪೃಥಿವೀಂ । ಅಸ್ಕಾನೃಷಭೋಯುವಾಗಾಃ । ಸ್ಕನ್ನೇಮಾ ವಿಶ್ವಾಭುವನಾ ।
ಸ್ಕನ್ನೋಯಜ್ಞಃ ಪ್ರಜನಯತು । ಅಸ್ಕಾನಜನಿಪ್ರಾಜನಿ । ಆಸ್ಕನ್ನಾಜ್ಜಾಯತೇ ವೃಷಾ ।
ಸ್ಕನ್ನಾತ್ಪ್ರಜನಿಷೀಮಹಿಸ್ವಾಹಾ ॥ ಸ್ಕನ್ನದೇವತಾಭ್ಯ ಇದಂ ನಮಮ ॥

ಓಂ ಯನ್ನ ಆತ್ಮನೋಮಿಂದಾಭೂದಗ್ನಿಸ್ತತ್ಪುನರಾಹಾರ್ಜತವೇದಾ ವಿಚರ್ಷಣಿ
ಸ್ಸ್ವಾಹಾ ॥ ಅಗ್ನಯ ಇದಂ ನಮಮ ॥

ಓಂಪುನರಗ್ನಿಶ್ಚಕ್ಷುರದಾತ್ಪುನರಿಂದ್ರೋ ಬೃಹಸ್ಪತಿಃ । ಪುನರ್ಮೇ ಅಶ್ವಿನಾಯುವಂ
ಚಕ್ಷುರಾಧತ್ತಮಕ್ಷ್ಯೋಃ ಸ್ವಾಹಾ ॥ ಅಗ್ನೀಂದ್ರಬೃಹಸ್ಪತ್ಯಶ್ವಿಭ್ಯ ಇದಂ ನಮಮ ॥

ಓಂ ಪುನಸ್ತ್ವಾದಿತ್ಯಾ ರುದ್ರಾ ವಸವಸ್ಸಮಿಂಧತಾಂ ಪುನರ್ಬ್ರಹ್ಮಾಣೋ
ವಸುನೀಥಯಜ್ಞಿಯಃ । ಘೃತೇನತ್ವಂ ತನುವೋ ವರ್ಧಯಸ್ವ ಸತ್ಯಾಸ್ಸಂತು ಯಜಮಾನಸ್ಯ
ಕಾಮಾ ಸ್ಸ್ವಾಹಾ ॥ ಅಗ್ನಯೇ ವಸುನೀಥಾಯೇದಂ ನಮಮ ॥

ಓಂ ಭೂಸ್ಸ್ವಾಹಾ ॥ ಅಗ್ನಯ ಇದಂನಮಮ ॥

ಓಂ ಭುವಸ್ಸ್ವಾಹಾ ॥ ವಾಯವ ಇದಂನಮಮ ॥

ಓಗ್ಂ ಸುವಸ್ಸ್ವಾಹಾ ॥ ಸೂರ್ಯಾಯ ಇದಂನಮಮ ॥

ಸರ್ವಪ್ರಾಯಶ್ಚಿತ್ತ ಹೋಮ –

ಅಸ್ಮಿನ್.....ಹೋಮೇ ಕರ್ಮಣಿ ಮಧ್ಯೇ ಮಂತ್ರ, ತಂತ್ರ, ಸ್ವರ, ವರ್ಣ, ಧ್ಯಾನ, ನಿಯಮ, ಕಾಲ, ಕರ್ಮ, ದೇವತಾ ವಿಪರ್ಯಾಸಾದಿ ಸಂಭಾವಿತ ಸಮಸ್ತದೋಷ ಪ್ರಾಯಶ್ಚಿತ್ತಾರ್ಥಂ, ಸರ್ವಪ್ರಾಯಶ್ಚಿತ್ತಾಹುತಿಂ ಹೋಷ್ಯಾಮಿ ॥

ಈ ಹೋಮ ಕರ್ಮದಲ್ಲಿ ಮಂತ್ರ, ತಂತ್ರ, ಸ್ವರ, ವರ್ಣ, ಕಾಲ, ಕರ್ಮ, ದೇವತೆಯೇ ಮುಂತಾದ ಈ ವಿಷಯಗಳಲ್ಲಿ ಸಂಭವಿಸಿರಬಹುದಾದ ಎಲ್ಲಾ ರೀತಿಯ ದೋಷಗಳ ಪ್ರಾಯಶ್ಚಿತ್ತವಾಗಿ ಸರ್ವಪ್ರಾಯಶ್ಚಿತ್ತವಾದ ಆಹುತಿಯನ್ನು ಕೆಳಗಿನ ಮಂತ್ರದಿಂದ ಹೋಮಿಸಬೇಕು ॥

ಓಂ ಭೂರ್ಭುವಸ್ಸುವಸ್ಸ್ವಾಹಾ – ಪ್ರಜಾಪತಯ ಇದಂನಮಮ ॥

ಪೂರ್ಣಾಹುತಿ –

ಆಜ್ಯಹೋಮಃ

ಮೂಲ ಆಧಾರವಾಕ್ಯ :

ದರ್ವ್ಯಾ ಚ ವಿಹಿತೋಹೋಮಃ ಸ್ಮಾರ್ತಕರ್ಮಸು ಯತ್ರ ವೈ । ತತ್ರಾಸೀನೇನ ಹೋತವ್ಯಂ ಪರಿಭಾಷಾ ವಿಧಾನತಃ ॥

ಸ್ಮಾರ್ತಕರ್ಮಗಳಲ್ಲಿ, ಸ್ರುಕ್ಕಿನಿಂದ ಮಾಡುವ ಹೋಮಗಳನ್ನು ಕುಳಿತುಕೊಂಡೇ ಮಾಡಬೇಕೆಂದು ಪರಿಭಾಷೆಯು ವಿಧಾನಿಸಿದೆ ॥

ದ್ವಾದಶ ಗೃಹೀತೇನ ಆಜ್ಯೇನ ಸ್ರುಚಂ ಪೂರಯಿತ್ವಾ । ಸಪ್ತತೇ ಅಗ್ನೇ ಇತಿ ಮಂತ್ರೇಣ ಹುತ್ವಾ ।

ಸ್ರುಕ್ಕಿಗೆ ಸ್ರುವದಿಂದ 12 ಸಲ ಆಜ್ಯವನ್ನು ತುಂಬಿಸಿಕೊಂಡು । ಕುಳಿತುಕೊಂಡು ಕೆಳಗಿನ ಮಂತ್ರದಿಂದ ತುಪ್ಪವನ್ನು ಹೋಮಿಸುವುದು ॥

ಓಂ ಸಪ್ತ ತೇ ಅಗ್ನೇ ಸಮಿಧಸ್ಸಪ್ತ ಜಿಹ್ವಾಸ್ಸಪ್ತ ಋಷಯಸ್ಸಪ್ತಧಾಮ ಪ್ರಿಯಾಣಿ ।
ಸಪ್ತಹೋತ್ರಾಸ್ಸಪ್ತಧಾತ್ವಾಯಜಂತಿ ಸಪ್ತಯೋನೀರಾಪೃಣಸ್ವಾ ಘೃತೇನ ಸ್ವಾಹಾ

– ಅಗ್ನಯೇ ಸಪ್ತವತ ಇದಂ ನಮಮ ॥

ವಸ್ತ್ರಹೋಮ:

ನಿಂತುಕೊಂಡು, ಕೆಳಗಿನ ಮಂತ್ರಗಳನ್ನು ಹೇಳಿ, ಸ್ವಾಹಾಕಾರದ ಜೊತೆಯಲ್ಲಿ ಶುಭ್ರವಾದ ಅಂಚುಳ್ಳ ಬಟ್ಟೆಯನ್ನು ಯಜ್ಞೇಶ್ವರನಿಗೆ ಅರ್ಪಿಸುವುದು ॥

ಓಂ ವಾಸೋ ದದಾತಿ । ಸರ್ವದೇವತ್ಯಂ ವೈ ವಾಸಃ । ಸರ್ವಾ ಏವ ದೇವತಾಃ ಪ್ರೀಣಾತಿ ॥

ಓಂಯುವಂ ವಸ್ತ್ರಾಣಿಪೀ ವಸಾವಸಾಥೇ । ಯುವೋರಚ್ಛಿದ್ರಾಮಂತವೋ ಹಸರ್ಗಾಃ ।
ಅವಾತಿರತಮನೃತಾನಿ ವಿಶ್ವಾ । ಋತೇನಮಿತ್ರಾವರುಣಾ ಸಚೇಥೇ ಸ್ವಾಹಾ ॥

ಯಜ್ಞೇಶ್ವರಾಯ ನಮ: ವಸ್ತ್ರಂ ಸಮರ್ಪಯಾಮಿ ॥

ಫಲಹೋಮ:

ನಿಂತುಕೊಂಡು, ಕೆಳಗಿನ ಮಂತ್ರಗಳನ್ನು ಹೇಳಿ, ಸ್ವಾಹಾಕಾರದ ಜೊತೆಯಲ್ಲಿ ಒಳ್ಳೆಯ ಫಲ, ತಾಂಬೂಲಗಳನ್ನು ಪರಮಾತ್ಮನಿಗೆ ಅರ್ಪಿಸುವುದು ॥

ಓಂ ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತಾಯ ಜಾತಮಗ್ನಿಂ ।
ಕವಿಗ್ಂ ಸಮ್ರಾಜಮತಿಥಿಂ ಜನಾನಾಮಾಸನ್ನಾಪಾತ್ರಂ ಜನಯಂತದೇವಾ: ॥

ಯಾ ಜಾತಾ ಓಷಧ್ಯಂಯೋ ದೇವೇಭ್ಯಸ್ತ್ರಿಯುಗಂಪುರಾ । ಮಂದಾಮಿ
ಬಭ್ರೂಣಾಮಹಗ್ಂ ಶತಂ ಧಾಮಾನಿ ಸಪ್ತ ಚ ॥

ಓಷಧಯಸ್ಸಂವದಂತೇ ಸೋಮೇನಸಹ ರಾಜ್ಞಾ। ಯಸ್ಮೈ ಕರೋತಿ ಬ್ರಾಹ್ಮಣಸ್ತಗ್ಂ ರಾಜನ್ ಪಾರಯಾಮಸಿ ॥

ಯಾ: ಫಲಿನೀರ್ಯಾ ಅಫಲಾ ಅಪುಷ್ಪಾಯಾಶ್ಚ ಪುಷ್ಪಿಣೀಃ। ಬೃಹಸ್ಪತಿಪ್ರಸೂತಾಸ್ತಾನೋ ಮುಂಚಂತ್ವಗ್ಂಹಸಸ್ಸ್ವಾಹಾ ॥ ಅಗ್ನಯೇ ವೈಶ್ವಾನರಾಯ ಓಷಧಿಭ್ಯ ಇದಂ ನಮಮ ॥

ವಸೋರ್ಧಾರಾ ಹೋಮ: –

ಉಪವಿಶ್ಯ, ಆಜ್ಯಂ ಚತುರ್ಗೃಹೀತ್ವಾ –

ಕುಳಿತುಕೊಂಡು, ಸ್ರುಕ್‌ಗೆ ೪ ಸಲ ತುಪ್ಪವನ್ನು ಹಾಕಿಕೊಂಡು, ಪುನಃ ನಿಂತುಕೊಂಡು, ಅಗ್ನಾವಿಷ್ಣೂ ಇತಿ ವಸೋರ್ಧಾರಾಯಾ: ಎಂಬ ವೇದವಾಕ್ಯದಂತೆ, ಕೆಳಗಿನ ಮಂತ್ರಗಳಿಂದ ಯಜ್ಞೇಶ್ವರನಿಗೆ ತುಪ್ಪವನ್ನು ಧಾರೆಯಾಗಿ ಬೀಳುವಂತೆ ಹೋಮಿಸುವುದು ॥

ಓಂ ಅಗ್ನಾವಿಷ್ಣೂ ಸಜೋಷಸೇ ವಾಮಾವರ್ಧಂತು ವಾಂ ಗಿರಃ। ದ್ಯುಮ್ನೈರ್ವಾಜೇಭಿರಾಗತಗ್ಂ ಸ್ವಾಹಾ ॥ ಅಗ್ನಾವಿಷ್ಣುಭ್ಯಾಮಿದಂ ನಮಮ ॥

ಓಂ ಯಜ್ಞಂ ಯಜ್ಞಂ ಗಚ್ಛ ಯಜ್ಞಪತಿಂ ಗಚ್ಛ ಸ್ವಾಂಯೋನಿಂ ಗಚ್ಛ ಸ್ವಾಹಾ। ಏಷ ತೇ ಯಜ್ಞೋ ಯಜ್ಞಪತೇ ಸಹಸೂಕ್ತವಾಕಸ್ಸುವೀರ ಸ್ವಾಹಾ। ದೇವಾಗಾತುವಿದೋ ಗಾತುಂ ವಿತ್ವಾ ಗಾತುಮಿತ ಮನಸಸ್ಪತ ಇಮಂ ನೋ ದೇವ ದೇವೇಷು ಯಜ್ಞಗ್ಂ ಸ್ವಾಹಾ ವಾಚಿಸ್ವಾಹಾ ವಾತೇಧಾಸ್ಸ್ವಾಹಾ ॥ ದೇವೇಭ್ಯೋ ಗಾತುವಿದ್ಭ್ಯೋ ಯಜ್ಞಾಯ ಪರಮಾತ್ಮನ ಇದಂ ನಮಮ ॥

ಓಂ ಪೂರ್ಣಾಹುತಿಮುತ್ತಮಾಂ ಜುಹೋತಿ । ಸರ್ವಂ ವೈ ಪೂರ್ಣಾಹುತಿಃ । ಸರ್ವಮೇವಾಪ್ನೋತಿ । ಅಥೋ ಇಯಂ ವೈ ಪೂರ್ಣಾಹುತಿಃ । ಅಸ್ಯಾಮೇವ ಪ್ರತಿತಿಷ್ಠತಿ ॥

ಪ್ರಾರ್ಥನೆ –

ಓಂ ವಸೋರ್ಧಾರಾಂ ಜುಹೋತಿ ವಸೋರ್ಮೇ ಧಾರಾಸದಿತಿ ವಾ ಏಷಾ ಹೂಯತೇ ಘೃತಸ್ಯ ವಾ ಏನಮೇಷಾ ಧಾರಾಮುಷ್ಮಿನ್ಲೋಕೇ ಪಿನ್ವಮಾನೋಪತಿಷ್ಠತ ಆಜ್ಯೇನಜುಹೋತಿ ತೇಜೋ ವಾ ಆಜ್ಯಂ ತೇಜೋ ವಸೋರ್ಧಾರಾ ತೇಜಸ್ಯೇವಾಸ್ಮೈ ತೇಜೋsವರುಂಧೇಥೋ ಕಾಮಾ ವೈ ವಸೋರ್ಧಾರಾ ಕಾಮಾನೇವಾವರುಂಧೇ ॥

ಅಸ್ಮಿನ್ ಹೋಮೇ ಕರ್ಮಣಿ, ಪೂರ್ಣಾಹುತಿ ವಸೋರ್ಧಾರಾ ಮುಹೂರ್ತಃ ಸುಮುಹೂರ್ತೋsಸ್ತ್ವಿತ್ಯನುಗೃಹ್ಣಂತು ॥ ಸುಮುಹೂರ್ತೋಸ್ತು ಇತಿ ಪ್ರತಿವಚನಂ ॥

ಈ ಹೋಮದಲ್ಲಿ ಮಾಡಿದ ಪೂರ್ಣಾಹುತಿ, ವಸೋರ್ಧಾರೆಗಳ ಮುಹೂರ್ತವು ಸುಮುಹೂರ್ತವಾಗಿತ್ತೆಂದು, ಅನುಗ್ರಹಿಸಿರಿ ಎಂದು ಬ್ರಹ್ಮ ಹಾಗೂ ಬ್ರಾಹ್ಮಣರನ್ನು(ಸಭೆ) ಆಚಾರ್ಯರು ಪ್ರಾರ್ಥಿಸಬೇಕು । ಬ್ರಹ್ಮ ಹಾಗೂ ಬ್ರಾಹ್ಮಣರು, ಸುಮುಹೂರ್ತವಾಗಿತ್ತೆಂದು ಪ್ರತಿವಚನ ಹೇಳಬೇಕು ॥

ಈ ಹಿಂದೆ, 'ಮುಖ' ಹೋಮದ ನಂತರ ಪ್ರಾರಂಭಿಸಿರುವ ಉಪಚಾರ ಪೂಜೆಯನ್ನು ಧೂಪ ದೀಪಗಳವರೆಗೆ ಮಾಡಿ ನಂತರ ನೈವೇದ್ಯ ಸ್ಥಾನದಲ್ಲಿ ಪ್ರಾಧಾನಾಹುತಿಗಳೇ ಮೊದಲಾಗಿ – ಪೂರ್ಣಾಹುತಿ ಪರ್ಯಂತ ಸಮಸ್ತ ಆಹುತಿಗಳನ್ನು ಕೊಟ್ಟ ನಂತರ, ಪುನಃ ಉಪಚಾರಪೂಜೆಯನ್ನು ಮುಂದುವರೆಸುತ್ತಾ ಈಗ, ಮಂಗಳಾರತಿಯನ್ನು ಮಾಡುವುದು ॥

ನೀರಾಜನಂ ದರ್ಶಯಾಮಿ, ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ ॥

ಉತ್ತರಪರಿಷೇಚನಂ –

ಕೆಳಗಿನ ವಾಕ್ಯಗಳನ್ನು ಹೇಳುತ್ತಾ, ಅಗ್ನಿಯನ್ನು ನೀರಿನಿಂದ ಸುತ್ತುಗಟ್ಟುವುದು । ಮೊದಲ ವಾಕ್ಯದಿಂದ ಅಗ್ನಿಯ ದಕ್ಷಿಣದಲ್ಲಿ, ಪಶ್ಚಿಮದಿಂದ ಪೂರ್ವಕ್ಕೆ । 2 ನೇ ವಾಕ್ಯದಿಂದ ಅಗ್ನಿಯ ಪಶ್ಚಿಮದಲ್ಲಿ, ದಕ್ಷಿಣದಿಂದ ಉತ್ತರಕ್ಕೆ । 3 ನೇ ವಾಕ್ಯದಿಂದ ಅಗ್ನಿಯ ಉತ್ತರದಲ್ಲಿ, ಪಶ್ಚಿಮದಿಂದ ಪೂರ್ವಕ್ಕೆ । 4 ನೇ ವಾಕ್ಯದಿಂದ ಅಗ್ನಿಯ ಈಶಾನ್ಯದಿಂದ, ಪ್ರದಕ್ಷಿಣೆಯಾಗಿ ಈಶಾನ್ಯಕ್ಕೇ ನೀರನ್ನು ಹಾಕಬೇಕು, ಈ ಎಲ್ಲವನ್ನೂ ಪರಿಸ್ತರಣದ ಒಳಗೆ ಬರುವಂತೆ ಹಾಕಬೇಕು ॥

ಅದಿ॒ತೇಽನ್ವ॑ಮಗ್ಗ್ಸ್ಥಾ: । ಅನು॑ಮ॒ತೇಽನ್ವ॑ಮಗ್ಗ್ಸ್ಥಾ: । ಸರ॑ಸ್ವ॒ತೇಽನ್ವ॑ಮಗ್ಗ್ಸ್ಥಾ: । ದೇವ॑ಸವಿತ॒: ಪ್ರಾ ಸ॑ಾವೀ: ॥

ಪ್ರಣೀತಾಮೋಕ್ಷಣಂ –

ವಿಮರ್ಶೆ :

ಇದನ್ನು ಹಲವರು ಮಂತ್ರಸಹಿತವಾಗಿ ಮಾಡುತ್ತಿದ್ದಾರೆ । ಆದರೆ ಇದು ತಪ್ಪು । ಏಕೆಂದರೆ ಇದರ ವಿಧಿಯನ್ನು ಸೂಚಿಸುವ ಋಷಿವಾಕ್ಯಗಳು, ಇದನ್ನು ಅಮಂತ್ರಕವಾಗಿಯೇ ಮಾಡಬೇಕೆಂದು ಸ್ಪಷ್ಟವಾಗಿಯೇ ಸೂಚಿಸುತ್ತಿವೆ । ಹಾಗಾಗಿ ಅದನ್ನು ತಿರಸ್ಕರಿಸಿ, ವಿರೋಧವಾಗಿ ಮಾಡಿದರೆ ಅದು ಕರ್ಮಲೋಪವೇ ಆಗುತ್ತದೆ । ಮತ್ತೂ ಈ ಸಂದರ್ಭದಲ್ಲಿ ಕೆಲವರು ಪ್ರಣೀತಾಪಾತ್ರೆಗೆ ಪ್ರೋಕ್ಷಣೀಪಾತ್ರೆಯ ನೀರನ್ನು ತುಂಬಿಸುತ್ತಾರೆ । ಆದರೆ ಪ್ರೋಕ್ಷಣೀಪಾತ್ರೆಯ ನೀರನ್ನೇ ತುಂಬಿಸಬೇಕೆಂದು ಯಾವ ವಾಕ್ಯವೂ ಸೂಚಿಸುತ್ತಲೇ ಇಲ್ಲ !!!!! । ಬದಲಿಗೆ, ಪೂರ್ಣಪಾತ್ರೆಯಲ್ಲಿ ಅದಾಗಲೇ ಇರುವ ನೀರಿಗೆ, ಇನ್ನಷ್ಟು ನೀರನ್ನು ತುಂಬಿಸಿ ಎಂದಷ್ಟೇ ವಾಕ್ಯಗಳು ಸೂಚಿಸುತ್ತಿರುವುದು । **"ಪ್ರಾದೇಶಿಕ ಆಚರಣೆಯ ಭಿನ್ನತೆ"** ಎಂಬ ಸಬೂಬಿನ(ಪಲಾಯನವಾದ!) ಉತ್ತರವು ಋಷಿವಾಕ್ಯಗಳ ಉಲ್ಲಂಘನೆಗೆ ಎಂದೂ ಸಮರ್ಥನೆಯಾಗುವುದಿಲ್ಲ । ಹಾಗಾಗಿ ನಾವು ಇಲ್ಲಿ ಋಷಿವಾಕ್ಯಗಳು ಏನನ್ನು ನಿಯಮಮಾಡಿ ಉಪದೇಶಿಸುತ್ತಿವೆಯೋ ಅದನ್ನೇ ಕೊಟ್ಟಿದ್ದೇವೆ ॥

ಮೂಲ ಆಧಾರವಾಕ್ಯ :

ಪ್ರಣೀತಾಮೋಕ್ಷಣಂ ಕುರ್ಯಾತ್ ಸ್ಮಾರ್ತಕರ್ಮಣ್ಯಮಂತ್ರಕಂ । ಪುರತಃ ಪ್ರಸರಸ್ಥಾನೇ ತೂಷ್ಣೀಮಾಸಾದ್ಯ ಯತ್ನತಃ । ಹಸ್ತೇನ ಅಮಂತ್ರಕಂ ತತ್ರ ಪ್ರಾಗಾದಿಶ್ಯೇವ ಪಂಚಸು ॥

ಪ್ರಣೀತಾವಿಸರ್ಜನವೆಂಬ ಈ ಕರ್ಮವನ್ನು ಸ್ಮಾರ್ತಕರ್ಮಗಳಲ್ಲಿ ಅಮಂತ್ರಕವಾಗಿಯೇ ಮಾಡಬೇಕು । ಅಗ್ನಿ ಹಾಗೂ ಆಚಾರ್ಯರ ಮಧ್ಯೆ ಪ್ರಣೀತಾ(ಪೂರ್ಣ) ಪಾತ್ರೆಯನ್ನು ಇಟ್ಟುಕೊಳ್ಳಬೇಕು ॥ ಪೂರ್ಣಪಾತ್ರೆಯಲ್ಲಿ ಅದಾಗಲೇ ಇರುವ ನೀರಿಗೆ ಇನ್ನಷ್ಟು ನೀರನ್ನು ತುಂಬಿಸಿ, ಕೈಯಿಂದ ಆ ನೀರನ್ನು 5 ದಿಕ್ಕುಗಳಿಗೂ(ಮೇಲ್ಭಾಗವೂ ಸೇರಿ) ಅಮಂತ್ರಕವಾಗಿಯೇ ಪ್ರೋಕ್ಷಿಸಬೇಕು । ದಕ್ಷಿಣದಿಕ್ಕಿಗೆ ಪ್ರೋಕ್ಷಿಸಿದಾಗ ಕೈತೊಳೆಯಬೇಕು ॥

ಭೂಯಿಷ್ಮಮೇವ ತತ್ತೋಯಂ ಶಿರಸಿ ಪ್ರೋಕ್ಷಯೇತ್ತತಃ । ಭಾರ್ಯಾಯಾ ಅಂಜಲೌ ಶೇಷಂ ನಿನಯೇತ್ ಪ್ರಯತೋದ್ವಿಜಃ ॥

ನಂತರ ನೆಲದಮೇಲೂ ಸ್ವಲ್ಪನೀರನ್ನು ಹಾಕಬೇಕು । ನೆಲದಲ್ಲಿ ಹಾಕಿದ ನೀರನ್ನು ತನಗೆ ಸ್ವಲ್ಪ ಪ್ರೋಕ್ಷಿಸಿಕೊಳ್ಳಬೇಕು ॥

ನಂತರ ಪ್ರಣೀತಾಪಾತ್ರೆಯಲ್ಲಿ ಇನ್ನೂ ಉಳಿದಿರುವ ನೀರನ್ನು, ಆ ಸಂದರ್ಭದಲ್ಲಿ ಹೆಂಡತಿಯು ಅಲ್ಲಿ ಇದ್ದರೆ, ಅವಳ ಹಸ್ತಗಳಿಗೆ ಹಾಕಿ, ಅದನ್ನು ಬ್ರಾಹ್ಮಣರಿಂದ ದಂಪತಿಗಳು ಪ್ರೋಕ್ಷಿಸಿಕೊಳ್ಳಬೇಕು । ಹೆಂಡತಿಯು ಆ ಜಾಗದಲ್ಲಿ ಇಲ್ಲದಿದ್ದರೆ ಇದನ್ನು ಮಾಡುವ ಅಗತ್ಯವಿಲ್ಲ ॥

ಬ್ರಹ್ಮೋದ್ವಾಸನಂ –

ಬ್ರಹ್ಮಣೇ ವರಂ ತೇ ದದಾಮಿ । ಬ್ರಹ್ಮತ್ವ ದಕ್ಷಿಣಾಂ ಪ್ರತಿಪಾದಯಾಮಿ । ಬ್ರಹ್ಮತ್ವಸಾಂಗತಾಫಲ ಸಿದ್ಧಿರಸ್ತ್ವಿತಿ, ಆಚರಿತ ಕರ್ಮಸಂಪೂರ್ಣಫಲ ಸಿದ್ಧಿರಸ್ತ್ವಿತಿ ಭವಂತಃ ಅನುಗೃಹ್ಣಂತು ॥ ಬ್ರಹ್ಮತ್ವ ಸಾಂಗತಫಲ ಸಿದ್ಧಿರಸ್ತು । ಆಚರಿತಕರ್ಮ ಸಂಪೂರ್ಣಫಲ ಸಿದ್ಧಿರಸ್ತು ಇತಿ ಪ್ರತಿವಚನಂ ॥

ಬ್ರಹ್ಮರಿಗೆ ದಕ್ಷಿಣೆಯನ್ನು ಕೊಡಬೇಕು । ಆಚರಿಸಿದ ಕರ್ಮದಫಲವು ದೊರಕಲಿ

ಎಂದು, ಬ್ರಹ್ಮಸ್ಥಾನದಿಂದ ಆಶೀರ್ವದಿಸಿರಿ ಎಂದು ಪ್ರಾರ್ಥಿಸಬೇಕು । ಬ್ರಹ್ಮರು, ಮೇಲೆ ತಿಳಿಸಿರುವಂತೆ ಪ್ರತಿವಚನ ಹೇಳಬೇಕು ।

ಬ್ರಹ್ಮಾಣಂ ಯಥಾಸ್ಥಾನಂ ಉದ್ವಾಸಯಾಮಿ ॥

ನಂತರ ಅವರನ್ನು ಬ್ರಹ್ಮಸ್ಥಾನದಿಂದ ವಿಮುಕ್ತಿಗೊಳಿಸಬೇಕು ॥

ಪುನಃ ಉತ್ಥಾಪ್ಯ । ಮಂತ್ರೈಃಪುಷ್ಪಾಂಜಲಿಂ ಸಮರ್ಪಯಾಮಿ ॥

ಪುನಃ ಎದ್ದುನಿಂತು । ಯಜ್ಞೇಶ್ವರನಿಗೆ ಹಾಗೂ ಆವಾಹಿಸಲ್ಪಟ್ಟಿರುವ ದೇವತೆಗಳಿಗೆ ಪುಷ್ಪಾಂಜಲಿಗಳನ್ನು ಉಪಚಾರಮಂತ್ರದ ಸಹಿತವಾಗಿ ಸಮರ್ಪಿಸಬೇಕು । ಯಾವುದೇ ಕಾರಣಕ್ಕೂ ಕುಂಡದ ಒಳಕ್ಕೆ ಹೂವು, ಅಕ್ಷತೆಗಳನ್ನು ಹಾಕಲೇಬಾರದು । ಪರಿಸ್ತರಣದ ಹೊರಗೆ ನೆಲದಲ್ಲಿ ಹಾಕಬೇಕು ॥

ಪ್ರದಕ್ಷಿಣನಮಸ್ಕಾರಂ ಸಮರ್ಪಯಾಮಿ । ಪ್ರಾರ್ಥಯಾಮಿ, ನಮಸ್ಕರೋಮಿ ॥

ನಂತರ, ಅಗ್ನಿಯನ್ನು ಹಾಗೂ ಸಾಧ್ಯವಾದರೆ, ದೇವತೆಗಳನ್ನು ಆವಾಹಿಸಲ್ಪಟ್ಟಿರುವ ಕಲಶಗಳನ್ನೂ ಸಹಾ, ಕೆಳಗಿನ ಮಂತ್ರಗಳಿಂದ ಪ್ರದಕ್ಷಿಣೆಯನ್ನು, ಆಚಾರ್ಯ – ಬ್ರಹ್ಮ ಹಾಗೂ ಕರ್ತೃಗಳು ಮಾಡಬೇಕು ॥

ಯಾನಿಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ । ತಾನಿತಾನಿ ವಿನಶ್ಯಂತಿ ಪ್ರದಕ್ಷಿಣ ಪದೇಪದೇ ॥

ಓಂ ಅಗ್ನೇನಯ ಸುಪಥಾರಾಯೇ ಅಸ್ಮಾನ್ । ವಿಶ್ವಾನಿದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನಃ । ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

ಓಂ ಅಗ್ನೇತ್ವಮಸ್ಮದ್ಯುಯೋಧ್ಯಮೀವಾಃ । ಅನಗ್ನಿತ್ರಾ ಅಭ್ಯಮಂತ ಕೃಷ್ಟೀಃ ।
ಪುನರಸ್ಮಭ್ಯಗ್ಂ ಸುವಿತಾಯ ದೇವ । ಕ್ಷಾಂ ವಿಶ್ವೇಭಿರಜರೇಭಿರ್ಯಜತ್ರ ॥

ಓಂ ಸಕೃತ್ತೇ ಅಗ್ನೇನಮಃ । ದ್ವಿಸ್ತೇ ನಮಃ । ತ್ರಿಸ್ತೇ ನಮಃ । ಚತುಸ್ತೇ ನಮಃ । ಪಂಚಕೃತ್ವಸ್ತೇ ನಮಃ । ದಶಕೃತ್ವಸ್ತೇ ನಮಃ । ಶತಕೃತ್ವಸ್ತೇ ನಮಃ । ಆಸಹಸ್ರಕೃತ್ವಸ್ತೇ ನಮಃ । ಅಪರಿಮಿತ ಕೃತ್ವಸ್ತೇ ನಮಃ । ನಮಸ್ತೇ ಅಸ್ತು ಮಾಮಾಹಿಗ್ಂಸೀಃ ॥

ಪ್ರಾರ್ಥನೆ –

ಪರಮಾತ್ಮನನ್ನು ಕೆಳಗಿನ ಸ್ತೋತ್ರಗಳಿಂದ, ಅಲ್ಲಿರುವವರೆಲ್ಲರೂ ಪ್ರಾರ್ಥಿಸಬೇಕು ॥

ರವಿ ಶಶಿ ಕುಜ ಸೌಮ್ಯಾ: ಶಕ್ರವಂದ್ಯೋಥ ಶುಕ್ರ: ।
ದಿನಕರಸುತ ರಾಹೂ ಕೇತವ: ಕ್ಷೇತ್ರಪಾಲಾ: ॥
ಕಮಲಜಹರಿ ರುದ್ರಾ: ಪಾರ್ವತೀ ವಿಘ್ನರಾಜ: ।
ಸಕಲಮುನಯ ಏತೇ ಮಂಗಲಂ ನೋ ದಿಶಂತು ॥

ಹರಶಂಭೋ ಮಹಾದೇವ ವಿಶ್ವೇಷಾಮರವಲ್ಲಭ ।
ಶಿವ ಶಂಕರ ಸರ್ವಾತ್ಮನ್ ನೀಲಕಂಠ ನಮೋಸ್ತುತೇ ॥

ವಿದ್ಯಾವಂತಂ ಯಶಸ್ವಂತಂ ಲಕ್ಷ್ಮೀವಂತಂ ಜನಂ ಕುರು ।
ರೂಪಂ ದೇಹಿ ಜಯಂ ದೇಹಿ ಯಶೋ ದೇಹಿ ದ್ವಿಷೋ ಜಹಿ ॥

ದೇಹಿ ಸೌಭಾಗ್ಯಮಾರೋಗ್ಯಂ ದೇಹಿ ದೇವಿ ಪರಂ ಸುಖಂ ।
ರೂಪಂ ದೇಹಿ ಜಯಂ ದೇಹಿ ಯಶೋ ದೇಹಿ ದ್ವಿಷೋ ಜಹಿ ॥

ಋಣ ರೋಗಾದಿ ದಾರಿದ್ರ್ಯ ಪಾಪಕ್ಷುತ್ ಅಪಮೃತ್ಯವ: ।
ಭಯ ಶೋಕ ಮನಸ್ತಾಪಾ: ನಶ್ಯಂತು ಮಮ ಸರ್ವದಾ ॥

ನಮಸ್ಕಾರ –

ಗಂಡಸರು ಪ್ರವರವನ್ನು ಹೇಳಿ, ದೀರ್ಘದಂಡ ನಮಸ್ಕಾರವನ್ನು ಮಾಡಬೇಕು । ಹೆಂಗಸರು ಮಂಡಿಯೂರಿ ನಮಿಸಬೇಕು ॥

ಪ್ರಸನ್ನಾರ್ಘ್ಯ –

ಕುಳಿತುಕೊಂಡು, ಅಗ್ನಿಗೂ ಹಾಗೂ ಆರಾಧಿಸಲ್ಪಟ್ಟ ಆಯಾಯಾ ಸಂಕಲ್ಪಿತ ದೇವತೆಗಳಿಗೂ ಆಯಾಯಾ ದೇವತೆಗಳ ಮಂತ್ರದಿಂದ ಅರ್ಘ್ಯವನ್ನು ಕೊಡುವುದು ॥

ಪರಿಸ್ತರಣ ವಿಸರ್ಜನೆ –

ಅಗ್ನಿಗೆ ಹಾಕಿರುವ ಪರಿಸ್ತರಣಗಳನ್ನು, ಪೂರ್ವದಿಕ್ಕಿನಿಂದ ಕ್ರಮವಾಗಿ ತೆಗೆದು, ಕುಂಡದ ಉತ್ತರಭಾಗದಲ್ಲಿ ಹಾಕುವುದು । ಅದನ್ನು ಸುಡಬಾರದು ಮತ್ತು ಪುನಃ ಬಳಸಲೂಬಾರದು ॥

ರಕ್ಷಾಧಾರಣೆ –

ಕುಂಡದೊಳಗೆ ಹುತವಾಗಿರುವ ಆಹುತಿಗಳ ಭಸ್ಮವನ್ನು, ದೇವತೆಯ ಪ್ರಸಾದರೂಪವಾಗಿ ತೆಗೆದುಕೊಂಡು, ಕೆಳಗಿನ ಮಂತ್ರವನ್ನು ಹೇಳಿ, ರಕ್ಷೆಯಾಗಿ ಹಣೆ ಮುಂತಾದ ಅಂಗಗಳಿಗೆ ಕ್ರಮವಾಗಿ ಬ್ರಹ್ಮ, ಆಚಾರ್ಯ, ಯಜಮಾನ ಹಾಗೂ ಭಕ್ತರು ಹಚ್ಚಿಕೊಳ್ಳುವುದು । ದರ್ಭೆಯನ್ನು ಸುಟ್ಟು, ರಕ್ಷೆ ಮಾಡಬಾರದು ॥

ಓಂ ಬೃಹತ್ಸಾಮ ಕ್ಷತ್ರಭೃದ್ವೃದ್ಧ ವೃಷ್ಣಿಯಂ ತ್ರಿಷ್ಟುಭೌಜಶ್ಶುಭಿತಮುಗ್ರವೀರಂ ।
ಇಂದ್ರಸ್ತೋಮೇನ ಪಂಚದಶೇನ ಮಧ್ಯಮಿದಂ ವಾತೇನ ಸಗರೇಣ ರಕ್ಷ ॥

ಮೇಧಾವೀ ಭೂಯಾಸಂ । ತೇಜಸ್ವೀಭೂಯಾಸಂ । ವರ್ಚಸ್ವೀಭೂಯಾಸಂ ।
ಬ್ರಹ್ಮವರ್ಚಸೀ ಭೂಯಾಸಂ । ಆಯುಷ್ಮಾನ್ ಭೂಯಾಸಂ । ಅನ್ನಾದೋ ಭೂಯಾಸಂ ।
ಸರ್ವಸಮೃದ್ಧೋ ಭೂಯಾಸಂ ॥

ಕರ್ಮಸಮಾಪ್ತಿ: –

ಸರ್ವೋಪಚಾರಪೂಜಾಂ ಸಮರ್ಪಯಾಮಿ । ಅನೇನ ಮಯಾ ಆಚರಿತ ಸಂಕಲ್ಪಿತ ತತ್ತದ್ದೇವತಾ ಪೂಜಾ – ಜಪ – ಹೋಮಾರಾಧನೇನ ಭಗವಾನ್ ಸರ್ವಾತ್ಮಕಃ ಸರ್ವಂ ಶ್ರೀವಾಸುದೇವಃ ಪ್ರೀಯತಾಮ್ ॥

ಈ ಮೇಲಿನ ವಾಕ್ಯವನ್ನು ಹೇಳಿ, ಒಂದು ಉದ್ಧರಣೆನೀರನ್ನು, ದೇವತಾ ಆಚಮ್ಯಪಾತ್ರೆಯಿಂದ ದೇವತಾರ್ಘ್ಯಪಾತ್ರೆಗೆ ಹಾಕುವುದು ॥

ಮಧ್ಯೇ ಮಂತ್ರತಂತ್ರ ಸ್ವರವರ್ಣ ಧ್ಯಾನನಿಯಮ ನ್ಯೂನಾತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂಕರಿಷ್ಯೇ ॥ ಓಂ ಓಂ ಓಂ ॥

ಉದ್ವಾಸನೆ –

ಓಂ ಉತ್ತಿಷ್ಠಬ್ರಹ್ಮಣಸ್ಪತೇ । ದೇವಯಂತಸ್ತ್ವೇಮಹೇ । ಉಪಪ್ರಯಂತು ಮರುತಸ್ಸುದಾನವಃ । ಇಂದ್ರಪ್ರಾಶೂರ್ಭವಾ ಸಚಾ ॥

ಯಾಂತು ದೇವಗಣಾಸ್ಸರ್ವೇ ಪೂಜಾಮಾದಾಯಮತ್ಕೃತಾಮ್ । ಇಷ್ಟಕಾಮ್ಯಾರ್ಥ ಸಿದ್ಧ್ಯರ್ಥಂ ಪುನರಾಗಮನಾಯ ಚ ॥

ಗಚ್ಛಾಗಚ್ಛ ಸುರಶ್ರೇಷ್ಠ ಸ್ವಸ್ಥಾನಂ ಪರಮೇಶ್ವರ । ಯತ್ರ ಬ್ರಹ್ಮಾದಯೋ ದೇವಾಸ್ತತ್ರಗಚ್ಛ ಹುತಾಶನ ॥

ಕರ್ಮಾಂತೇ ಆವಾಹಿತ ಸಮಸ್ತದೇವತಾಭ್ಯೋ ನಮಃ । ಯಥಾಸ್ಥಾನಂ ಉದ್ವಾಸಯಾಮಿ ॥

ಈ ಮೇಲಿನ ಮಂತ್ರಗಳನ್ನು ಹೇಳಿ, ಕಲಶ, ಅಗ್ನಿ, ಯಂತ್ರಗಳಲ್ಲಿ ಆವಾಹಿಸಿರುವ ದೇವತೆಗಳನ್ನು ಅಕ್ಷತೆಯನ್ನು ಹಾಕುವುದರ ಮೂಲಕ, ಉದ್ವಾಸನೆ ಮಾಡಬೇಕು ॥

ಆಚಮನ –

ಪವಿತ್ರದ ಗಂಟುಬಿಚ್ಚಿ, ಎರಡುಸಲ ಆಚಮನವನ್ನು ಮಾಡುವುದು ॥

ಆಸನ ವಿಧಿಃ –

ಓಂ ಆದ್ಯಾನೋ ದೇವಸವಿತಃ ಪ್ರಜಾವತ್ಸಾವೀಸ್ಸೌಭಗಂ । ಪರಾದುಶ್ವಪ್ನಿಯಗ್ಂಸುವ ।
ವಿಶ್ವಾನಿದೇವಸವಿತರ್ದುರಿತಾನಿ ಪರಾಸುವ । ಯದ್ಭದ್ರಂ ತನ್ನ ಆಸುವ ॥

ಅಪ್ರೋಕ್ಷಿತಂ ಜಪಸ್ಥಾನೇ ಶಕ್ರೋಹರತಿ ತತ್ಫಲಂ। ತನ್ಮೃದಂ ತಿಲಕಂಧೃತ್ವಾ ಬ್ರಹ್ಮಭೂಯಾಯ ಕಲ್ಪತೇ ॥

ಆಸನದ ಕೆಳಗೆ ನೀರನ್ನು ಪ್ರೋಕ್ಷಿಸಿಕೊಂಡು, ಆ ಜಾಗವನ್ನು ಹಿಡಿದುಕೊಂಡು, ಮೇಲಿನ ಮಂತ್ರವನ್ನು ಹೇಳಬೇಕು ॥

ನಂತರ ತೀರ್ಥ, ಪ್ರಸಾದಾದಿಗಳನ್ನು ಸ್ವೀಕರಿಸುವುದು ॥

****

8. ಆಶೀರ್ವಾದ ವಾಕ್ಯಾನಿ

* ಸ್ವಸ್ತಿ ಮಂತ್ರಾರ್ಥಾಸ್ತತ್ಯಾಸ್ತಫಲಾಸ್ತಂತ್ವಿತಿ ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಯಂ ಯಜಮಾನಃ, ಅನವರತಕೃತ ಅನ್ನದಾನ ಸಂತೋಷಿತ ಅಶೇಷ ವಿದ್ವಜ್ಜನಾಶೀರ್ವಾದ ಪರಂಪರಾಪ್ರಾಪ್ತ ಸಮಸ್ತ ಐಶ್ವರ್ಯಯುಕ್ತೋ ಭೂಯಾದಿತಿ, ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಇಮಂ ಯಜಮಾನಂ, ದೀನಜನಾ – ಬಂಧುಜನಾ – ವನೀಪಕಜನಾ, ಸ್ವಸ್ವಸಮಾನ ಸಮುಚಿತ ಕಾಂಚನಕಲಾಪ ಕೌಶೇಯವಾಸೋ ವೃತ್ತಿಕ್ಷೇತ್ರ ಕರಿತುರಗ ಛತ್ರಚಾಮರ ಆಂದೋಲಿಕಾ ಗೋ ಮಹಿಷ್ಯಾದೀನಾಂ ಸಂಪಾದನಾರ್ಥಾಯ ಸಮಾಶ್ರಯಂತಾಮಿತಿ, ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅನೇನ ಯಜಮಾನೇನ, ಆಚಾರ್ಯಾದಿ ಋತ್ವಿಜ್ಮುಖೇನ ಅನುಷ್ಠಿತೇನ .....ಆಖ್ಯೇನ ಕರ್ಮಣಾ, ಭಗವಂತಃ (ಭಗವತೀ) ಸುಪ್ರೀತಃ (ಸುಪ್ರೀತಾ), ಸುಪ್ರಸನ್ನಃ (ಸುಪ್ರಸನ್ನಾ), ವರದೋ(ವರದಾ) ಭೂತ್ವಾ, ಅಸ್ಯ ಯಜಮಾನಸ್ಯ ಕ್ಷೇಮಸ್ಥೈರ್ಯ ವಿಜಯ ಅಭಯ ಆಯುರಾರೋಗ್ಯಾದಿ ಅಷ್ಟೈಶ್ವರ್ಯ, ಮಹದೈಶ್ವರ್ಯ, ಸಕಲೈಶ್ವರ್ಯ ಪ್ರದೋ ಭೂಯಾದಿತಿ, ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಮೈ ಯಜಮಾನಾಯ, ಪೌಲಸ್ತ್ಯ ವೈರೋಚನಿ ಜಾಬಾಲಿ ಮಾರ್ಕಂಡೇಯಾದಿ(ತಿ)ವತ್ ಜೈವಾತೃಕತ್ವಂ ಕಮಲಾಸನೋ ದದ್ಯಾದಿತಿ ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಮಾದ್ಯಜಮಾನಾತ್, ಶೋಕಪ್ರಭೃತಿ ತಾಪತ್ರಯಾದ್ಯಾಧಿವ್ಯಾಧಯಃ ದೂರೇ ವರೀವರ್ತ್ಯಂತಾಮಿತಿ ಭವಂತೋಮಹಾಂತೋಽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಯ ಯಜಮಾನಸ್ಯ, ಕಾಂತಿವಂತಃ ಕೀರ್ತಿವಂತೋ ದಯಾವಂತೋ ದೀರ್ಘಾಯುಷ್ಮಂತೋ, ವರಾಶ್ಶೂರಾಃ, ಧೀರಾಃಕುಮಾರಾಃ, ಭೂಯಾಸುರಿತಿ ಭವಂತೋಮಹಾಂತೋऽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಯ ಯಜಮಾನಸ್ಯ ಸರ್ವೇಶತ್ರವಃ ಛಿನ್ನಾಃ, ಭಿನ್ನಾಃ, ಕಾಣಾಃ, ಕಂಜಾಃ, ಬಧಿರಾಃ, ಮೂಕಾಃ, ದಿಶಿದಿಶಿಕಾಂ ದಿಶಿಕಾಃ, ಭೂಯಾಸುರಿತಿ ಭವಂತಃ ಮಹಾಂತೋऽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಮಿನ್ ಯಜಮಾನೇ, ಲಾವಣ್ಯ ತಾರುಣ್ಯ ವರೇಣ್ಯಾದಯಃ ಸರ್ವೇಸದ್ಗುಣಾಃ, ಸಮುಜ್ಜೃಂಭಂತಾಮಿತಿ ಭವಂತೋಮಹಾಂತೋऽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅಸ್ಯ ಯಜಮಾನಸ್ಯ ಸಹಕುಟುಂಬಸ್ಯ, ಸಪುತ್ರಕಸ್ಯ, ಸಪುತ್ರೀಕಸ್ಯ, ಸ ಆಶ್ರಿತವರ್ಗಸ್ಯ ಚ ಶ್ರೀ ಆರಾಧಿತದೇವತಾ / (ಆರಾಧಿತಾ ದೇವತಾ) / (ಆರಾಧಿತಾನಾಂ ದೇವತಾನಾಂ) ಪರಮಾನುಗ್ರಹೇಣ ವೇದೋಕ್ತಮಾಯುಷ್ಯಂ ಪರಿಪೂರ್ಣಂ ಭೂಯಾದಿತಿ ಭವಂತೋಮಹಾಂತೋऽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಅನೇನ ಯಜಮಾನೇನ ಅನುಷ್ಠಿತಂ ಸರ್ವಕರ್ಮ ಅಚ್ಛಿದ್ರಂಭೂಯಾದಿತಿ ಭವಂತೋಮಹಾಂತೋऽನುಗೃಹ್ಣಂತು ॥ ತಥಾಸ್ತು (ಪ್ರತಿವಚನ) ॥

* ಲೋಕಾಸ್ಸಮಸ್ತಾಸ್ಸುಖಿನೋ ಭವಂತ್ವಿತಿ ಅನುಗೃಹ್ಣಂತು ॥ ತಥಾಸ್ತು ॥

****

ಪ್ರತಿಗಳು ದೊರೆಯುವ ಸ್ಥಳಗಳು

1. **ಎ.ಸಿ. ಶಕ್ತಿಧರ ಶರ್ಮಾ**
   ಮೊ. : 9686497982, ಈ–ಮೇಲ್: acs.shimoga@gmail.com
   Karnataka Bank A/c. No. : 7322500102385001
   ಶಂಕರಮಠ ಶಾಖೆ, ಶಿವಮೊಗ್ಗ
   IFSC Code : KARB 0000745

2. **ವೇದಾಂತ ಬುಕ್‌ಹೌಸ್**
   ಉಮಾಟಾಕೀಸ್ ಪಕ್ಕ, ಬೆಂಗಳೂರು

3. **ಶೃಂಗೇರಿ ಶಂಕರ ಮಠ**
   ಉಮಾಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು

4. **ರಾಜಾರಾಮ್ ಬುಕ್‌ಹೌಸ್**
   ಶಿವಮೊಗ್ಗ

5. **ಉಡುಪಿ ಸ್ಟೋರ್ಸ್**
   ಗಾಂಧಿನಗರ, ಶಿವಮೊಗ್ಗ

ಸಂಸ್ಕಾರತರಂಗಿಣೀ ಪುಷ್ಪ – 5, 6, 7 ಗ್ರಂಥಗಳನ್ನು ಈಗ್ಗೇ 6 ವರ್ಷಗಳ ಹಿಂದೆಯೇ ಪ್ರಕಟಣೆ ಮಾಡಲಾಗಿತ್ತು. ಆದರೆ ಮೂರೂ ಗ್ರಂಥಗಳ ಪ್ರತಿಗಳೂ ಬಹುಬೇಗನೆ ಖಾಲಿಯಾಗಿ ಇವುಗಳ ಪುನರ್ಮುದ್ರಣಕ್ಕೆ ಬಹುಬೇಡಿಕೆ ಹಾಗೂ ಒತ್ತಾಯಗಳು ಇದ್ದ ಕಾರಣ, ನಾವು ಆ ಮೂರು ಪ್ರತ್ಯೇಕ ಗ್ರಂಥ(ಪುಷ್ಪ)ಗಳನ್ನು ಒಂದೇಗ್ರಂಥವಾಗಿ ಪರಿಷ್ಕರಿಸಿ, **ಸಂಸ್ಕಾರತರಂಗಿಣೀ ಪುಷ್ಪ 5, 6, 7 – 'ನಿತ್ಯಕರ್ಮ ದೀಪಿಕಾ'** ಎಂಬ ಹೆಸರಿನಿಂದ **'ದ್ವಿತೀಯಮುದ್ರಣವಾಗಿ'** ಈಗ ಪ್ರಕಟಿಸುತ್ತಿದ್ದೇವೆ.

ಈ ಗ್ರಂಥವು, ಜ್ಞಾನಸಂಗ್ರಹದ ವಿಷಯದಲ್ಲಿ ಹಾಗೂ ನಿತ್ಯಕರ್ಮಗಳ ಅನುಷ್ಠಾನದಲ್ಲಿ ಆಸಕ್ತಿ ಇರುವವರಿಗೆ ಬಹಳವೇ ಉಪಯುಕ್ತವಾಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ ಪೂಜ್ಯ ಅವಧೂತ ಮಹಾತ್ಮರಾದ ಶ್ರೀವೆಂಕಟಾಚಲ ಸದ್ಗುರುಗಳ ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿ ವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಶ್ರೀ ಚೈತನ್ಯಗುರುನಾಥ ಪ್ರಕಾಶನ
ವೇದಬ್ರಹ್ಮಶ್ರೀ ಎ.ಸಿ. ಶಕ್ತಿಧರಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು

ಶಿವಮೊಗ್ಗ
ಮೊ : 9686497982

₹ 200/-